# ಸಮಾಜವಿಜ್ಞಾನ I

# SOCIAL SCIENCE I

## ಭಾಗ - 1

## ತರಗತಿ X

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**ಸಮಾಜವಿಜ್ಞಾನ I**

**10**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2025
*Printed at* : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಸಮಾಜದ ವಿವಿಧ ಹಂತಗಳಲ್ಲಿ ನಡೆಸಿದ ಚರ್ಚೆಗಳ ಮೂಲಕ ಲಭಿಸಿದ ಚಿಂತನೆಗಳ ಆಧಾರದಲ್ಲಿ ತಯಾರಿಸಿದ ಹತ್ತನೇ ತರಗತಿಯ ಹೊಸ ಸಮಾಜವಿಜ್ಞಾನ I ಪಠ್ಯಪುಸ್ತಕವನ್ನು ಎರಡು ಭಾಗಗಳ ಮೂಲಕ ನಿಮ್ಮ ಕೈಗಿಡುತ್ತಿದ್ದೇವೆ. ಸಮಾಜ ವಿಜ್ಞಾನದ ಪ್ರಧಾನ ಕಲಿಕಾ ವಲಯಗಳಾದ ಇತಿಹಾಸ, ರಾಜಕೀಯಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಿಗೆ ಸಂಬಂಧಿಸಿದ ಪಾಠಭಾಗಗಳನ್ನು ಇದರಲ್ಲಿ ಸೇರಿಸಲಾಗಿದೆ. ಇಂದಿನ ಜಗತ್ತನ್ನು ಸರಿಯಾಗಿ ಮತ್ತು ನಿಕಟವಾಗಿ ಅರ್ಥೈಸಲು ಮತ್ತು ನಾಳೆಗಳನ್ನು ರೂಪಿಸಲು, ನಿನ್ನೆಯ ಕುರಿತಾದ ಜ್ಞಾನವು ಮುಖ್ಯವಾಗಿದೆಯಲ್ಲವೆ? ಆಧುನಿಕ ಜಗತ್ತನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ನವೋತ್ಥಾನ ಕಾಲದಲ್ಲಿ ವಿವಿಧ ವಲಯಗಳಲ್ಲುಂಟಾದ ಬದಲಾವಣೆಗಳನ್ನು ಈ ಪಠ್ಯಪುಸ್ತಕದ ಒಂದನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆ ಎಂಬೀ ಘೋಷಣೆಗಳನ್ನು ಜಗತ್ತಿಗೆ ನೀಡಿದ ಕ್ರಾಂತಿಯ ಕುರಿತು ಹಾಗೂ ವಿವಿಧ ಕಾಲಗಳಲ್ಲಿ ಫ್ರಾನ್ಸಿನ ಆರ್ಥಿಕ ರಂಗದಲ್ಲುಂಟಾದ ಬದಲಾವಣೆಗಳು ಮತ್ತು ಅದರ ಪರಿಣಾಮಗಳ ಕುರಿತು ಚರ್ಚಿಸಲಾಗಿದೆ. ಆಧುನಿಕ ಜಗತ್ತು ಸಾಕ್ಷಿಯಾದ ಅತಿದೊಡ್ಡ ಜನಪರ ಹೋರಾಟವಾದ ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಅದರಲ್ಲಿ ನಮ್ಮ ರಾಷ್ಟ್ರಪಿತರಾದ ಗಾಂಧಿಜಿಯವರ ಪಾತ್ರವನ್ನು ಬಹಳ ವಿವರವಾಗಿ ಮುಂದಿನ ಅಧ್ಯಾಯದಲ್ಲಿ ಪ್ರತಿಪಾದಿಸಲಾಗುತ್ತಿದೆ. ಸ್ವಾತಂತ್ರ್ಯಾನಂತರದ ಭಾರತವು ಎದುರಿಸಿದ ಸಮಸ್ಯೆಗಳು ಮತ್ತು ಅವುಗಳನ್ನು ಪರಿಹರಿಸಿ ವಿವಿಧ ರಂಗಗಳಲ್ಲಿ ನಾವು ಮಾಡಿದ ಸಾಧನೆಗಳನ್ನೂ ಪಠ್ಯಪುಸ್ತಕದಲ್ಲಿ ಚರ್ಚಿಸಲಾಗಿದೆ.

ಸಮಾಜವಿಜ್ಞಾನ ಕಲಿಕೆಯ ನೂತನ ವಲಯಗಳಲ್ಲೊಂದಾದ ಸಮಾಜಶಾಸ್ತ್ರವನ್ನು ಸಾಮಾಜಿಕ ವಿಷಯಗಳನ್ನು ಮತ್ತು ಸಮಸ್ಯೆಗಳನ್ನು ಸಾಮಾನ್ಯಜ್ಞಾನಕ್ಕಿಂತಲೂ ಮಿಗಿಲಾಗಿ ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕ ಸಮೀಪಿಸುವ ಕೌಶಲ್ಯವನ್ನು ನಿಮ್ಮಲ್ಲಿ ಬೆಳೆಸುವ ಉದ್ದೇಶದಿಂದ ಮಂಡಿಸಲಾಗಿದೆ. ಸಮಾಜಶಾಸ್ತ್ರದ ಇನ್ನೊಂದು ಪಾಠಭಾಗದಲ್ಲಿ ಭಾರತದ ಸಾಮಾಜಿಕ ರಚನೆಯನ್ನು ವಿವರವಾಗಿ ಚರ್ಚಿಸಲಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು ಬಹಳ ಪ್ರಮುಖವಾದುದಾಗಿದೆಯಲ್ಲವೆ? ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ಅಭಿಪ್ರಾಯ ಎಂಬ ಪಾಠಭಾಗದ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ವಿವಿಧ ಹಂತಗಳನ್ನು ಪರಿಚಯಿಸಲಾಗಿದೆ. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಭಾರತದ ರಾಜಕೀಯ ರಂಗದಲ್ಲುಂಟಾದ ಬದಲಾವಣೆಗಳು ಮತ್ತು ದೇಶದ ವಿವಿಧ ಭಾಗಗಳಲ್ಲುಂಟಾದ ಜನಪ್ರಿಯ ಹೋರಾಟಗಳನ್ನು ಪ್ರತಿಪಾದಿಸುವ ಪಾಠಭಾಗವನ್ನು ಕೂಡಾ ಇದರಲ್ಲಿ ಸೇರಿಸಲಾಗಿದೆ.

ಸಾಮಾಜಿಕ ಜೀವಿಯೆಂಬ ನೆಲೆಯಲ್ಲಿ ಸಮಾಜದ ವಿವಿಧ ವಿಷಯಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಮತ್ತು ಪ್ರಜಾಪ್ರಭುತ್ವ ಪ್ರಜ್ಞೆಯಿಂದ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದು ಸಮಾಜದ ಅಧಾರಸ್ತಂಭವಾಗಲು ಈ ಪಠ್ಯಪುಸ್ತಕವು ನಿಮಗೆ ದಾರಿದೀಪವಾಗಬಹುದೆಂದು ನಾನು ಆಶಿಸುತ್ತೇನೆ. ನಿಮಗೆ ಪ್ರತಿಯೊಬ್ಬರಿಗೂ ವೈಜ್ಞಾನಿಕ ಸಮಾಜದ ಭಾಗವಾಗಲು ಸಾಧ್ಯವಾಗಲೆಂದು ಹಾರೈಸುತ್ತೇನೆ.

ಶುಭಹಾರೈಕೆಗಳೊಂದಿಗೆ,

ಡಾ. ಜಯಪ್ರಕಾಶ್ ಆರ್. ಕೆ.
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

# TEXT BOOK DEVELOPMENT COMMITTEE

**Advisor**

**Dr. K. N. Ganesh**
Chairman, Kerala Council For Historical Research

**Chairperson**

**Dr. Shivadasan P.**
Senior Professor,
Department of History, Calicut University

**Experts**

**Dr. K. K. Radha**
Principal (Rtd.)
Govt. College for Women
Thiruvananthapuram

**Dr. P. Mohandas**
Associate Professor (Rtd.)
Department of History
KMM Govt.Women's College, Kannur

**Dr. P. P. Abdul Razak**
Professor & Head (Rtd.)
Department of History
P.S.M.O. College, Tirurangadi

**Dr. Pradeep Kumar K.**
Associate Professor & Head (Rtd.)
Department of Political Science
Govt. College, Attingal, Thiruvananthapuram

**Members**

**Yousuf Kumar S. M.**
Principal, G.H.S.S. Chithara, Kollam

**Haripradeep S.**
HST (Rtd.), SVHS, Pullad, Pathanamthitta

**Dr. Anjana V.R. Chandran.**
Research Officer, SCERT, Kerala

**Dr. Ajith R. Pillai**
Principal, DBHSS, Parumala, Pathanamthitta

**Aju S.**
HSST, History, G.M.G.H.S.S.
Pattom, Thiruvananthapuram

**Jayakrishnan O.K.**
HSST, K.P.C.H.S.S. Pattanur, Kannur

**Pradeepan T.**
HSST, History, GHSS Palayad, Kannur

**Margaret Lini V. P.**
HST Social Science,
GV & HSS Vellanad, Thiruvananthapuram

**Vishvambharan N.**
HSST (Rtd.), Boys Higher Secondary School, Karunagappally, Kollam.

**Sreejith M. Moothedath**
HST, Social Science,
CNN G.H.S. Cherp, Thrissur

**Anas N.S.**
Research Student, University of Kerala

**Kannada Version**

**Subject Expert**

**Narayana D.** Headmaster, GHS Udyawar

**Language Expert**

**Vishalaksha M.,** Rtd. HST (Kan) SGKHS Kudlu.

**Participants**

**Ganesh Kumar S.,** HST, Social Science, SGKHS Kudlu.

**Sanjeeva M.,** Headmaster, GVHSS Karadka

**Bhanu A.C.,** HST, Social Science, GVHSS Mulleria

**Praveena V.,** HST, Social Science, SNHS Perla

**Raviraja,** HST, Social Science, GHSS Adoor.

**Academic Co-ordinator**

**Jagadeesh K. T.**
Research Officer, SCERT, Kerala

**State Council for Educational Research and Training (SCERT) Kerala**
Vidyabhavan, Poojappuram - 695 012

# ಅನುಕ್ರಮಣಿಕೆ


| | | |
|---|---|---|
| 1 | ಮಾನವೀಯತೆ | 7-26 |
| 2 | ಸ್ವಾತಂತ್ರ್ಯ - ಸಮಾನತೆ - ಸಹೋದರತೆ | 27-46 |
| 3 | ಸಮಾಜಶಾಸ್ತ್ರದ ಪರಿಕಲ್ಪನೆಯ ಮೂಲಕ ಸಾಮಾಜಿಕ ವಿಶ್ಲೇಷಣೆ | 47-64 |
| 4 | ಸಂಪತ್ತು ಮತ್ತು ಜಗತ್ತು | 65-86 |
| 5 | ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕಾಭಿಪ್ರಾಯ | 87-102 |


**ಈ ಪಠ್ಯಪುಸ್ತಕದಲ್ಲಿ ಕಲಿಕೆಯ ಸೌಕರ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ**



ಹೆಚ್ಚಿನ ಓದಿಗಾಗಿ - ಮೌಲ್ಯನಿರ್ಣಯಕ್ಕೆ ಒಳಪಡಿಸಬೇಕಾಗಿಲ್ಲ



ಕಲಿಕಾ ಚಟುವಟಿಕೆ



ಮುಂದುವರಿದ ಚಟುವಟಿಕೆಗಳು

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



# 1

# ಮಾನವೀಯತೆ

*“ಜ್ಞಾನದ ನಿರಾಕರಣೆಯು ಒಳಿತಿನ ನಿರಾಕರಣೆಯೇ ಆಗಿದೆ; ಒಳಿತಿನ ಜ್ವಾಲೆಯಿಂದ ಪ್ರಕಾಶಿತವಾಗುವ ಬುದ್ಧಿಗೆ ಆ ಜ್ವಾಲೆಯನ್ನು ಪ್ರೀತಿಸದಿರಲು ಸಾಧ್ಯವಿಲ್ಲ. ಪ್ರೀತಿಯು ಜ್ಞಾನದ ಮಾತ್ರ ಸಂತತಿಯಾಗಿದೆ. ಯುಕ್ತಿಚಿಂತನೆಯು ಸರಿಯಾದ ಇಚ್ಛೆಯ ಮಾರ್ಗದರ್ಶಿ. ಯುಕ್ತಿಚಿಂತನೆಯೇ ನಮ್ಮನ್ನು ಮೋಕ್ಷದೆಡೆಗೆ ಕೊಂಡೊಯ್ಯುತ್ತದೆ.”*

ಇದು ಹದಿಮೂರನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಜೀವಿಸಿದ್ದ ತತ್ವಜ್ಞಾನಿಯಾದ ರೋಜರ್ ಬೇಕನ್‌ನ ಮಾತುಗಳಾಗಿವೆ. ಯುಕ್ತಿಚಿಂತನೆ, ಜ್ಞಾನ, ಪ್ರೀತಿ ಎಂಬಿವುಗಳ ಪ್ರಾಮುಖ್ಯದ ಕುರಿತು ಇಲ್ಲಿ ಪರಾಮರ್ಶಿಸಲಾಗಿದೆ. ಅವರು ಜೀವಿಸಿರುವಾಗ ಯುರೋಪಿನ ಆಡಳಿತಾಧಿಕಾರಿಗಳು ಯುಕ್ತಿಚಿಂತನೆಯನ್ನು ನಿಷೇಧಿಸಿದ್ದರು. ರೋಜರ್ ಬೇಕನ್‌ನಂತಹ ಚಿಂತಕರು ಆಗ ಅಸ್ತಿತ್ವದಲ್ಲಿದ್ದ ಫ್ಯೂಡಲ್ ಅಧಿಕಾರ ವ್ಯವಸ್ಥೆ ಹಾಗೂ ಅದರ ಆಶಯಗಳನ್ನು ಪ್ರಶ್ನಿಸಿದರು. ಇದರ ಪರಿಣಾಮವಾಗಿ ಅವರಲ್ಲಿ ಹಲವರು ಅಧಿಕಾರಿಗಳ ಕ್ರೂರವಾದ ಪೀಡನೆ ಮತ್ತು ಸೆರೆಮನೆವಾಸವನ್ನು ಅನುಭವಿಸಬೇಕಾಯಿತು. ಕೆಲವರಿಗೆ ಜೀವನವೇ ನಷ್ಟವಾಯಿತು. ಆದರೆ ಅನಂತರದ ಕಾಲದಲ್ಲಿ ಸ್ಥಿತಿಗತಿಗಳಲ್ಲಿ ಬದಲಾವಣೆಯುಂಟಾಗಲು ಪ್ರಾರಂಭವಾಯಿತು.




ರೋಜರ್ ಬೇಕನ್ ಮತ್ತು ಆತನು ರಚಿಸಿದ ಡಯಗ್ರಾಂಗಳು

ಹದಿನಾಲ್ಕನೇ ಶತಮಾನದಲ್ಲಿ ಯುರೋಪಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ರಂಗಗಳಲ್ಲಿ ಹಲವು ಬದಲಾವಣೆಗಳುಂಟಾದವು. ಪ್ರಾಚೀನ ಯುರೋಪಿನ ಗ್ರೀಕೋ-ರೋಮನ್ ಸಂಸ್ಕೃತಿಯ ಪ್ರಭಾವದೊಂದಿಗೆ ಮಧ್ಯಕಾಲದ ಆಶಯಗಳಿಂದಾಗಿಯೂ ಗತಿಬದಲಾವಣೆಗಿರುವ ಒಲವುಗಳು ಈ ಕಾಲದಲ್ಲಿ ಬಲ ಗೊಂಡವು. ಈ ಬದಲಾವಣೆಗಳ ವಿಶೇಷತೆಗಳು ಯಾವುವೆಂಬುದನ್ನು ನೋಡೋಣ.

### ಗ್ರೀಕೋ – ರೋಮನ್ ಸಂಸ್ಕೃತಿಗಳು

ಗ್ರೀಕ್ ಸಂಸ್ಕೃತಿ ಮತ್ತು ರೋಮನ್ ಸಂಸ್ಕೃತಿಗಳು ಪ್ರಾಚೀನ ಯುರೋಪಿನಲ್ಲಿದ್ದ ಎರಡು ಪ್ರಧಾನ ಸಂಸ್ಕೃತಿಗಳಾಗಿದ್ದವು. ಇವುಗಳನ್ನು ಶಾಸ್ತ್ರೀಯ (ಕ್ಲಾಸಿಕಲ್) ಸಂಸ್ಕೃತಿಗಳೆಂದು ಕರೆಯುತ್ತಾರೆ. ಬಿ.ಸಿ.ಇ. ಹನ್ನೆರಡನೇ ಶತಮಾನದಿಂದ ಬಿ.ಸಿ.ಇ. ನಾಲ್ಕನೇ ಶತಮಾನದವರೆಗಿನ ಕಾಲವು ಗ್ರೀಕ್ ಸಂಸ್ಕೃತಿಯ ಕಾಲವಾಗಿತ್ತು. ಬಿ.ಸಿ.ಇ. ಏಳನೇ ಶತಮಾನದಿಂದ ಬಿ.ಸಿ.ಇ. ಐದನೇ ಶತಮಾನದವರೆಗಿನ ಕಾಲವು ರೋಮನ್ ಸಂಸ್ಕೃತಿಯ ಕಾಲವಾಗಿತ್ತು.

- ಮಾನವ ಕೇಂದ್ರೀಕೃತವಾದ ದೃಷ್ಟಿಕೋನ (ಮಾನವೀಯತೆ)
- ನಗರ ಜೀವನದ ಬೆಳವಣಿಗೆ
- ವ್ಯಾಪಾರದ ಪ್ರಗತಿ
- ದೇಶರಾಷ್ಟ್ರಗಳ ಬೆಳವಣಿಗೆ
- ವ್ಯಕ್ತಿ ಸ್ವಾತಂತ್ರ್ಯ
- ಯುಕ್ತಿಚಿಂತನೆ
- ಜಾತ್ಯತೀತ ಮೌಲ್ಯಗಳ ವ್ಯಾಪನೆ
- ಹಣ ಆಧಾರಿತ ಆರ್ಥಿಕ ವ್ಯವಸ್ಥೆ
- ಪ್ರಾದೇಶಿಕ ಭಾಷೆಗಳಿಗೆ ಲಭಿಸಿದ ಪ್ರಾಮುಖ್ಯ
- ಕಲೆ, ವೈಜ್ಞಾನಿಕ ಕ್ಷೇತ್ರಗಳಲ್ಲುಂಟಾದ ಬದಲಾವಣೆಗಳು

ಪ್ರಾಚೀನ ರೋಮನ್ ಸಂಸ್ಕೃತಿಯ ಭಾಗವಾಗಿದ್ದ ಇಟಲಿಯಲ್ಲಿ ಈ ಬದಲಾವಣೆಗಳು ಹೆಚ್ಚಾಗಿ ಕಂಡುಬಂದವು. ಇಟಲಿಯಲ್ಲುಂಟಾದ ಈ ಬದಲಾವಣೆಗಳಿಗೆ ಚರಿತ್ರೆಗಾರರು 'ನವೋತ್ಥಾನ' (Renaissance) ಎಂಬ ಹೆಸರನ್ನು ನೀಡಿದರು. ಮಧ್ಯಕಾಲದ ಫ್ಯೂಡಲ್ ವ್ಯವಸ್ಥೆಯಿಂದ ಆಧುನಿಕಕಾಲಕ್ಕಿರುವ ಪರಿವರ್ತನೆಯ ಕಾಲವಾಗಿ ನವೋತ್ಥಾನವು ಚರಿತ್ರೆಯಲ್ಲಿ ಸ್ಥಾನ ಗಳಿಸಿತು.

ನವೋತ್ಥಾನ ಕಾಲವು ಮಧ್ಯಕಾಲದಿಂದ ಆಧುನಿಕ ಕಾಲಕ್ಕಿರುವ ಪರಿವರ್ತನೆಯ ಕಾಲವಾಗಿತ್ತು (Transition Period). ಈ ಹೇಳಿಕೆಯನ್ನು ಅವಲೋಕಿಸಿರಿ.

**ನವೋತ್ಥಾನ (Renaissance)**

'ರಿನೈಸಾನ್ಸ್' ಎಂಬ ಪದಕ್ಕೆ ಕನ್ನಡದಲ್ಲಿ ನವೋತ್ಥಾನ, ಪುನರುಜ್ಜೀವನ ಎಂಬೀ ಅರ್ಥಗಳಿವೆ. ಹದಿನಾಲ್ಕನೇ ಶತಮಾನಕ್ಕಾಗುವಾಗ ಪ್ರಾಚೀನ ಗ್ರೀಕೋ – ರೋಮನ್ ಸಂಸ್ಕೃತಿಗಳಿಗುಂಟಾದ ಪುನರ್ಜನ್ಮ ಎಂಬುದಾಗಿ ಇದನ್ನು ಅರ್ಥೈಸಬಹುದು.

## ನವೋತ್ಥಾನವು ಇಟಲಿಯಲ್ಲೇ ಯಾಕೆ?

ಕೊಟ್ಟಿರುವ ಭೂಪಟ 1.1 ನ್ನು ನಿರೀಕ್ಷಿಸಿರಿ. ಅದರಿಂದ ಮಧ್ಯಕಾಲೀನ ಇಟಲಿಯಲ್ಲಿದ್ದ ನಗರಗಳ ಪಟ್ಟಿ ತಯಾರಿಸಿರಿ.

- 
- 
- 
- 

ಇಟಲಿಯ ನಗರಗಳು ಯುರೋಪಿನ ಇತರ ನಗರಗಳಿಗಿಂತ ವ್ಯತ್ಯಸ್ತವಾಗಿದ್ದವು. ಕಾರಣ:

- ಅವು ಹೆಚ್ಚು ಸ್ವತಂತ್ರವೂ ಬಲಶಾಲಿಯೂ ಶ್ರೀಮಂತವೂ ಆಗಿದ್ದವು.
- ಇಲ್ಲಿನ ವ್ಯಾಪಾರಿಗಳು ಬ್ಯಾಂಕಿಂಗ್, ವಿಮೆ ಎಂಬೀ ರಂಗಗಳ ಬಗ್ಗೆ ಜ್ಞಾನವನ್ನು ಹೊಂದಿದವರಾಗಿದ್ದರು. 'ಬುಕ್ ಕೀಪಿಂಗ್' ನಂತಹ ವಾಣಿಜ್ಯ ತಾಂತ್ರಿಕತೆಯಲ್ಲಿ ಕಾರ್ಯದಕ್ಷತೆಯನ್ನು ಗಳಿಸಿದವರೂ ಅವರಲ್ಲಿದ್ದರು. ಅವರಲ್ಲಿ ಅನೇಕರು ವ್ಯಾಪಾರದಿಂದಾಗಿ ಅತಿ ಶ್ರೀಮಂತರಾದರು.




ಭೂಪಟ 1.1

**ಬುಕ್ ಕೀಪಿಂಗ್**

ಬುಕ್ ಕೀಪಿಂಗ್ ಎಂದರೆ ಒಂದು ಸಂಸ್ಥೆಯ ಆದಾಯ ಮತ್ತು ಖರ್ಚನ್ನು ದೈನಂದಿನ ಆಧಾರದಲ್ಲಿ ಕ್ರಮಬದ್ಧವಾಗಿ ದಾಖಲಿಸುವುದಾಗಿದೆ. ಬುಕ್ ಕೀಪಿಂಗ್ ಎಂಬುದು ಅಕೌಂಟಿಂಗ್‌ನ ಮೊದಲ ಹಂತವಾಗಿದೆ.

ಹನ್ನೊಂದನೇ ಶತಮಾನದಲ್ಲಿ ಯುರೋಪಿನಲ್ಲುಂಟಾದ ವಾಣಿಜ್ಯೀಕರಣವು ಮಧ್ಯಕಾಲೀನ ಫ್ಯೂಡಲ್ ವ್ಯವಸ್ಥೆಯ ಅಧಃಪತನಕ್ಕೆ ಹಾಗೂ ಮತಮೇಧಾವಿತ್ವವು ಕ್ಷಯಿಸಲು ಕಾರಣವಾಯಿತು. ಇದು ಸಿರಿವಂತರಾದ ಒಂದು ವಿಭಾಗದ ಏಳಿಗೆ ಮತ್ತು ಆಧಿಪತ್ಯಕ್ಕೆ ದಾರಿಮಾಡಿಕೊಟ್ಟಿತು. ವಾಣಿಜ್ಯದ ಪ್ರಗತಿಯಿಂದಾಗಿ ಇಟೆಲಿಯಲ್ಲಿ ಅನೇಕ ಸಿರಿವಂತ ಕುಟುಂಬಗಳು ಹುಟ್ಟಿಕೊಂಡವು. ಇವರು ರಾಜಕೀಯಾಧಿಕಾರದಲ್ಲಿ ಪಾಲ್ಗೊಳ್ಳುವಿಕೆ ಬೇಕೆಂಬ ಬೇಡಿಕೆಯನ್ನೊಡ್ಡಿದರು. ಈ ರೀತಿಯಲ್ಲಿ ಹುಟ್ಟಿಕೊಂಡ ಕುಟುಂಬಗಳು ಮತ್ತು ಅವು ಬೆಳೆದುಬಂದ ನಗರಗಳು ಯಾವುವು ಎಂದು ನೋಡುವ.

| ಇಟೆಲಿಯ ಕುಟುಂಬಗಳು | ಬೆಳೆದುಬಂದ ನಗರಗಳು |
|---|---|
| ಮೆದಿಚಿ | ಫ್ಲೋರೆನ್ಸ್ |
| ಸ್ಪಾರ್ಸಾ | ಮಿಲಾನ್ |
| ಫರ್ನೀಸಿ | ಪಾರ್ಮಾ |
| ಓರ್ಸಿನಿ | ನೇಪಲ್ಸ್ |
| ವಿಸ್ಕೋಂತಿ | ಮಿಲಾನ್ |

### ಶಿಲುಬೆಯುದ್ಧಗಳು

ಪವಿತ್ರ ನಾಡೆಂದು ತಿಳಿಯುತ್ತಿದ್ದ ಜೆರುಸಲೇಂಗಾಗಿ ಇಸ್ಲಾಂ ಮತದವರು ಮತ್ತು ಕ್ರೈಸ್ತರ ನಡುವೆ ನಡೆದ ಯುದ್ಧಗಳನ್ನು ಶಿಲುಬೆಯುದ್ಧಗಳೆಂದು ಕರೆಯುತ್ತಾರೆ. ಏಷ್ಯಾ ಹಾಗೂ ಯುರೋಪಿನ ರಾಜಕೀಯ, ಸಾಮಾಜಿಕ, ಆರ್ಥಿಕ ಜೀವನದ ಮೇಲೆ ಇವು ನಿರ್ಣಾಯಕ ಪ್ರಭಾವ ಬೀರಿದವು. ಸಿ.ಇ. ಹನ್ನೊಂದನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ ಇದರ ಕಾಲವಾಗಿತ್ತು.

ಮಧ್ಯಕಾಲದಲ್ಲಿ ನಡೆದ ಶಿಲುಬೆಯುದ್ಧಗಳು ಪೂರ್ವ ಮತ್ತು ಪಶ್ಚಿಮಗಳ ನಡುವೆ ಸಾಂಸ್ಕೃತಿಕ ವಿನಿಮಯಕ್ಕೆ ದಾರಿಮಾಡಿಕೊಟ್ಟವು. ಪೂರ್ವ ಪ್ರಪಂಚದ ಸಂಸ್ಕೃತಿಗಳು, ನಗರಗಳು, ಅಲ್ಲಿನ ಜನಜೀವನ ಮೊದಲಾದವುಗಳನ್ನು ಇಟೆಲಿಯ ನಗರಗಳು ಪರಿಚಯಿಸಿಕೊಂಡವು. ಇದು ಇಟೆಲಿಯ ನಗರಗಳ ಬೆಳವಣಿಗೆಯ ವೇಗವನ್ನು ಹೆಚ್ಚಿಸಿತು. ಇಸ್ಲಾಂ ಸಾಮ್ರಾಜ್ಯ, ಬೈಝಾಂಟೈನ್ (ಪೂರ್ವ ರೋಮ್) ಸಾಮ್ರಾಜ್ಯ ಎಂಬಿವುಗಳೊಂದಿಗೆ ನಡೆಸಿದ ವಾಣಿಜ್ಯ ಸಂಬಂಧದಿಂದಾಗಿ ಬೃಹತ್ ಪ್ರಮಾಣದ ಸಂಪತ್ತು ಇಟೆಲಿಯ ನಗರಗಳಿಗೆ ಹರಿದುಬಂತು. ಕಾಲಾಂತರದಲ್ಲಿ ಮೆಡಿಟರೇನಿಯನ್ ಪ್ರದೇಶವನ್ನು ಕೇಂದ್ರೀಕರಿಸಿ ನಡೆಯುತ್ತಿದ್ದ ಪೂರ್ವ-ಪಶ್ಚಿಮಗಳ ನಡುವಿನ ವಾಣಿಜ್ಯವು ಇಟೆಲಿಯ ನಗರಗಳ ವ್ಯಾಪಾರಿಗಳ ನಿಯಂತ್ರಣದಲ್ಲಾಯಿತು.

ಯುರೋಪಿನ ಇತರ ನಗರಗಳಿಗೆ ಹೋಲಿಸಿದರೆ ಇಟೆಲಿಯ ನಗರಗಳು ಹೆಚ್ಚು ಶ್ರೀಮಂತವಾಗಿದ್ದವು. ಇದಕ್ಕೆ ದಾರಿ ಮಾಡಿಕೊಟ್ಟ ಸನ್ನಿವೇಶವನ್ನು ಸ್ಪಷ್ಟಪಡಿಸಿರಿ.

ಹದಿನಾಲ್ಕನೇ ಶತಮಾನದ ಮಧ್ಯದಲ್ಲಿ ಭುಗಿಲೆದ್ದ ಬ್ಯುಬೊನಿಕ್ ಪ್ಲೇಗ್ ಎಂಬ ಮಹಾಮಾರಿಯು ಇಟೆಲಿಯ ನಗರಗಳಿಗೆ ಬಹಳಷ್ಟು ನಾಶನಷ್ಟಗಳನ್ನುಂಟುಮಾಡಿತು. 'ಬ್ಲ್ಯಾಕ್ ಡೆತ್' ಎಂದು ಕರೆಯಲ್ಪಡುವ ಈ ದುರಂತದಲ್ಲಿ ಬೃಹತ್ ಸಂಖ್ಯೆಯಲ್ಲಿ ಜನರು ಮರಣ ಹೊಂದಿದ್ದು ಕಾರ್ಮಿಕರ ಲಭ್ಯತೆಯಲ್ಲಿ ಬಹಳಷ್ಟು ಕುಸಿತವನ್ನುಂಟುಮಾಡಿತು. ಇದು ಕೃಷಿಕ್ಷೇತ್ರವನ್ನು ಆಶ್ರಯಿಸಿಕೊಂಡಿದ್ದ ಮಧ್ಯಕಾಲೀನ ಫ್ಯೂಡಲ್ ವ್ಯವಸ್ಥೆಯ ಅಧಃಪತನ

ಹಾಗೂ ವಾಣಿಜ್ಯ ಕೇಂದ್ರೀಕೃತವಾದ ಒಂದು ಮಧ್ಯಮವರ್ಗದ ಬೆಳವಣಿಗೆಗೆ ದಾರಿಮಾಡಿಕೊಟ್ಟಿತು. ಅಸ್ತಿತ್ವದಲ್ಲಿದ್ದ ಔಷಧಿಗಳು ಪ್ಲೇಗನ್ನು ನಿಯಂತ್ರಿಸುವಲ್ಲಿ ಪರಾಜಯಗೊಂಡಾಗ ಜನರು ಪ್ರಾಚೀನ ಗ್ರೀಕ್ ಮತ್ತು ರೋಮಿನ ವೈದ್ಯಕೀಯ ವಿಜ್ಞಾನದ ಕುರಿತು ಹೆಚ್ಚು ಅಧ್ಯಯನ ಮಾಡಲು ಪ್ರಾರಂಭಿಸಿದರು. ಪ್ಲೇಗಿನ ಭೀಕರತೆಯು ಮಾನವ ಜೀವನದ ನಶ್ವರತೆ ಮತ್ತು ಅನಿಶ್ಚಿತತ್ವದ ಕುರಿತು ಚಿಂತಿಸಲು, ಸುಖಗಳ ಕುರಿತು ಅನ್ವೇಷಣೆ ಮಾಡಲು ಹಾಗೂ ಸ್ವಚಿಂತನೆಗೆ ಪ್ರೇರಣೆಯನ್ನಿತ್ತಿತು. ಇದು ಮಾನವೀಯತೆಗೆ (Humanism) ದಾರಿಮಾಡಿತು.

ಹದಿನಾಲ್ಕನೇ ಶತಮಾನದಲ್ಲಿ ಭುಗಿಲೆದ್ದ ಪ್ಲೇಗ್ ಯುರೋಪಿನ ವಿವಿಧ ವಲಯಗಳಲ್ಲುಂಟುಮಾಡಿದ ಬದಲಾವಣೆಗಳನ್ನು ಚರ್ಚಿಸಿರಿ.

ನಗರಗಳಲ್ಲಿನ ಸಂಪತ್ತು, ರಾಜಕೀಯ, ಸ್ವಾತಂತ್ರ್ಯ, ಸಾಮಾಜಿಕ ಏಕತೆ ಮೊದಲಾದವುಗಳು ಜನರಲ್ಲಿ ಪೌರಪ್ರಜ್ಞೆ ಮತ್ತು ಆತ್ಮಾಭಿಮಾನವನ್ನು ಬೆಳೆಸಿದವು. ಪ್ರಾಚೀನ ರೋಮ್ ಸಾಮ್ರಾಜ್ಯದಲ್ಲಿದ್ದ ಶಾಂತಿಪಾಲನೆ, ಆಡಳಿತ ಒಕ್ಕೂಟ ಎಂಬಿವುಗಳಿಗೆ ಸಂಬಂಧಿಸಿದ ಆಶಯಗಳು ಇಟೆಲಿಯಲ್ಲಿ ಪ್ರಚಾರವಾದವು. ಪ್ರಾಚೀನ ರೋಮಿನ ಕಾನೂನುಗಳಲ್ಲೂ ಲ್ಯಾಟಿನ್ ಭಾಷೆಯಲ್ಲೂ ಪಾಂಡಿತ್ಯವಿದ್ದ ವಿದ್ಯಾಸಂಪನ್ನರಾದ ಒಂದು ವಿಭಾಗದವರು ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಇದರ ಪರಿಣಾಮವಾಗಿ ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಥೆಗಳು, ಪೌರಾಣಿಕತೆ ಎಂಬಿವುಗಳಲ್ಲಿ ಇವರಿಗೆ ಆಸಕ್ತಿ ಹುಟ್ಟಿಕೊಂಡಿತು. ಪ್ರತಿಯೊಂದು ನಗರವೂ ಕಲೆ ಮತ್ತು ಸಾಹಿತ್ಯದ ಕೇಂದ್ರವಾಗಲು ಬಯಸಿದವು. ಪ್ರಾಚೀನ ರೋಮ್ ನಗರದ ಚಿತ್ರಗಳು, ಹಸ್ತಪ್ರತಿಗಳು, ಕಟ್ಟಡಗಳ ಅವಶೇಷಗಳನ್ನು ರಾಜರ ಹಾಗೂ ಪುರೋಹಿತರ ನೇತೃತ್ವದಲ್ಲಿ ಕಂಡುಹಿಡಿದು ಸಂರಕ್ಷಿಸಲಾಯಿತು. ಕಟ್ಟಡಗಳನ್ನು ನಿರ್ಮಿಸುವುದು, ಕಲೆ ಮತ್ತು ಸಾಹಿತ್ಯವನ್ನು ಪ್ರೋತ್ಸಾಹಿಸುವುದು ಮೊದಲಾದವುಗಳಿಂದಾಗಿ ನಾವು ಯುದ್ಧಕ್ಕಿಂತಲೂ ಮಿಗಿಲಾಗಿ ಜನರ ಮನಸ್ಸಿನಲ್ಲಿ ಶಾಶ್ವತವಾಗಿರುತ್ತೇವೆಂದು ರಾಜರು ಭಾವಿಸಿದರು.

ಶ್ರೀಮಂತರು ತಮ್ಮ ಪ್ಯಾರಿಷ್ ಚರ್ಚುಗಳನ್ನು ಸುಂದರಗೊಳಿಸಿದರಲ್ಲದೆ ಸನ್ಯಾಸಿ ಮಠಗಳು, ಕ್ಯಾಥೆಡ್ರಲ್‌ಗಳು ಎಂಬಿವುಗಳ ನಿರ್ಮಾಣವನ್ನು ಪ್ರೋತ್ಸಾಹಿಸಿದರು. ಫ್ಲೋರೆನ್ಸ್, ಮಿಲಾನ್, ರೋಮ್, ವೆನಿಸ್ ಮೊದಲಾದ ಇಟೆಲಿಯ ನಗರಗಳಲ್ಲಿ ಕಲಾಗಾರರನ್ನು ಪ್ರೋತ್ಸಾಹಿಸುವುದನ್ನು ಪೌರಧರ್ಮವಾಗಿ ಪರಿಗಣಿಸಿದ್ದರು. 1453ರಲ್ಲಿ ತುರುಕರು ಪೂರ್ವ ರೋಮ್ ಸಾಮ್ರಾಜ್ಯದ ರಾಜಧಾನಿಯಾದ ಕೋನ್‌ಸ್ಟಾಂಟಿನೋಪಲನ್ನು ವಶಪಡಿಸಿಕೊಂಡರು.

### ಬ್ಲ್ಯಾಕ್ ಡೆತ್ (Black Death)

1347 ಮತ್ತು 1351 ರ ಮಧ್ಯೆ ಯುರೋಪನ್ನು ನಾಶಪಡಿಸಿದ ಪ್ಲೇಗ್ ಎಂಬ ಮಹಾಮಾರಿಯನ್ನು ಬ್ಲ್ಯಾಕ್ ಡೆತ್ ಎಂದು ಬಣ್ಣಿಸುತ್ತಾರೆ. ರೋಗ ಬಾಧಿತರ ಶರೀರದಲ್ಲಿ ಕಪ್ಪುಕಲೆಗಳು ರೂಪುಗೊಳ್ಳುತ್ತವೆ. ಆದುದರಿಂದ ಈ ದುರಂತವನ್ನು ಕಪ್ಪು ಮರಣ ಎಂದು ಕರೆಯುತ್ತಾರೆ. ವಾಣಿಜ್ಯಕ್ಕಾಗಿ ಬಂದ ಹಡಗುಗಳ ಮೂಲಕ ತಲುಪಿದ ಇಲಿಗಳಲ್ಲಿರುವ ಚಿಗಟೆಗಳು ಪ್ಲೇಗನ್ನು ಹರಡಿದ್ದವು.

### ಯುರೋಪಿನ ನವೋತ್ಥಾನ – ಒಂದು ವಸಾಹತುಶಾಹಿ ದೃಷ್ಟಿಕೋನ

ಯುರೋಪನ್ನು ಕೇಂದ್ರೀಕರಿಸಿ ನವೋತ್ಥಾನವು ಆವಿರ್ಭವಿಸಿತು ಎಂಬ ಆಶಯಕ್ಕೆ ವಿರುದ್ಧವಾಗಿ ಇಂದು ಅನೇಕ ಅಭಿಪ್ರಾಯಗಳು ಮೂಡಿಬರುತ್ತಿವೆ. ಜೋರ್ಜ್ ಜೇಮ್ಸ್‌ನ 'ಸ್ಟೋಲನ್ ಲೆಗಸಿ', ಮಾರ್ಟಿನ್ ಬರ್ನಲಿನ 'ಬ್ಲ್ಯಾಕ್ ಅಥೇನ:ದ ಆಫ್ರೋ ಏಷ್ಯಾಟಿಕ್ ರೂಟ್ಸ್ ಆಫ್ ಕ್ಲಾಸಿಕಲ್ ಸಿವಿಲೈಸೇಶನ್' ಎಂಬೀ ಗ್ರಂಥಗಳು ಈ ಅಭಿಪ್ರಾಯವನ್ನು ಹಂಚಿಕೊಳ್ಳುತ್ತವೆ. ಯುರೋಪು ಮಾತ್ರ ಸರಿಯಾದುದು ಉಳಿದುದೆಲ್ಲ ಸರಿಯಾದುದಲ್ಲ, ಅಲ್ಲದಿದ್ದರೆ ಯುರೋಪಿಯನ್ನರು ಮಾತ್ರ ಸುಸಂಸ್ಕೃತರು ಇತರರೆಲ್ಲರೂ ಅಸಂಸ್ಕೃತರೆಂದು ಭಾವಿಸಲು ವಸಾಹತುಶಾಹಿ ಚರಿತ್ರೆಗಾರರು ಶ್ರಮಿಸುತ್ತಾರೆ ಎಂದು ಇವರು ವಾದಿಸುತ್ತಾರೆ.


I

ΙΠΠΟΚΡΑΤΟΥΣ
ΟΡΚΟΣ
HIPPOCRATIS
IVSIVRANDVM

ಗ್ರೀಕಿನ ಹಸ್ತಪ್ರತಿ

ಕೋನ್‌ಸ್ಟಾಂಟಿನೋಪಲ್ ಪ್ರಾಚೀನ ಗ್ರೀಕೋ - ರೋಮನ್ ಸಾಹಿತ್ಯಕೃತಿಗಳ ಹಸ್ತಪ್ರತಿಗಳನ್ನು ಕೈವಶವಿರಿಸಿಕೊಂಡಿದ್ದ ಅನೇಕ ಪಂಡಿತರ ಕೇಂದ್ರವಾಗಿತ್ತು. ತುರುಕರ ಆಕ್ರಮಣದಿಂದಾಗಿ ತಮ್ಮ ಕೈವಶವಿರುವ ಹಸ್ತಪ್ರತಿಗಳೊಂದಿಗೆ ಅವರು ಇಟಲಿಯ ನಗರಗಳಿಗೆ ಹೋದರು. ಮಧ್ಯಕಾಲದಲ್ಲಿ ವಿಶ್ವವಿದ್ಯಾಲಯಗಳಿಗೆ ಮಾತ್ರ ಸೀಮಿತವಾಗಿದ್ದ ಅನ್ವೇಷಣೆಗಳು ಹಾಗೂ ಅಧ್ಯಯನಗಳು ಗ್ರಂಥಾಲಯಗಳಿಗೆ ವ್ಯಾಪಿಸಲು ಆರಂಭವಾದವು. ಸಂಪತ್ತು ಹಾಗೂ ರಾಜಕೀಯ ಸ್ವಾತಂತ್ರ್ಯವು ಕಲೆಯ ಪ್ರಗತಿಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಯೋಗಗಳಿಗೂ ದಾರಿಮಾಡಿಕೊಟ್ಟಿತು. ಇದರೊಂದಿಗೆ ಸಾಂಸ್ಕೃತಿಕ ಕ್ಷೇತ್ರದಲ್ಲೂ ಬೌದ್ಧಿಕ ಕ್ಷೇತ್ರದಲ್ಲೂ ನೂತನ ಆಶಯಗಳು ಪ್ರಕಟವಾಗಲು ಆರಂಭವಾದವು.




ಭೂಪಟ 1.2

ಭೂಪಟ 1.2 ನ್ನು ನಿರೀಕ್ಷಿಸಿ ಕೋನ್‌ಸ್ಟಾಂಟಿನೋಪಲಿನ ಸ್ಥಾನವನ್ನು ಕಂಡುಹಿಡಿಯಿರಿ. ಅದರ ಭೌಗೋಳಿಕ ಪ್ರಾಮುಖ್ಯವನ್ನು ಚರ್ಚಿಸಿರಿ.

ತುರುಕರು ಕೋನ್‌ಸ್ಟಾಂಟಿನೋಪಲನ್ನು ಆಕ್ರಮಿಸಿದ್ದು ಇಟಲಿಯ ಬೌದ್ಧಿಕ ಕ್ಷೇತ್ರದ ಮೇಲೆ ಹೇಗೆ ಪ್ರಭಾವ ಬೀರಿತೆಂಬುದನ್ನು ಅವಲೋಕಿಸಿರಿ.

## ಮಾನವರು ಕೇಂದ್ರವಾದಾಗ

ಸ್ಕೊಲಾಸ್ಟಿಸಿಸಂ (Scholasticism) ಎಂದು ಪ್ರಸಿದ್ಧವಾದ ತತ್ವಶಾಸ್ತ್ರವು ಮಧ್ಯಕಾಲದ ಮೇಲೆ ಪ್ರಮುಖವಾಗಿ ಪ್ರಭಾವ ಬೀರಿತು. ಕ್ರೈಸ್ತ ಮತಚಿಂತನೆಯ ಆಧಾರದಲ್ಲಿರುವ ಈ ತತ್ವ ಶಾಸ್ತ್ರವು ವಿಜ್ಞಾನ ಮತ್ತು ಅನ್ವೇಷಣೆಯನ್ನು ಪ್ರೋತ್ಸಾಹಿಸಿದರೂ ದೇವರು ಮತ್ತು ಪರಲೋಕಜೀವನಕ್ಕೆ ಒತ್ತು ನೀಡಿತು. ಇದಕ್ಕೆ ಹೊರತಾಗಿ ಮಾನವ, ಇಹಲೋಕ ಹಾಗೂ ಯುಕ್ತಿ ಚಿಂತನೆಗೆ ಪ್ರಾಮುಖ್ಯವನ್ನು ನೀಡಿ ಮಾನವೀಯತೆ ಎಂಬ ಆಶಯವು ರೂಪುಗೊಂಡಿತು. ಮಾನವನಲ್ಲಿ ಅಂತರ್ಲೀನವಾದ ಅನನ್ಯತೆ, ಭಾವನೆಗಳು, ಸಾಮರ್ಥ್ಯಗಳು, ಬರಹ, ಸಂಭಾಷಣೆ ಎಂಬಿವುಗಳಿಗೆ ಮಾನವತಾವಾದಿಗಳು ಒತ್ತು ನೀಡಿದರು. ದೇವಕೇಂದ್ರೀಕೃತವಾದ ದೃಷ್ಟಿಕೋನದಿಂದ ಮಾನವ ಕೇಂದ್ರೀಕೃತವಾದ ನಿರೀಕ್ಷಣೆಯೆಡೆಗಿರುವ ಪರಿವರ್ತನೆಯೇ ಇದರ ಅಡಿಪಾಯವಾಗಿದೆ. ಭಿನ್ನಾಭಿಪ್ರಾಯಗಳು ಹಾಗೂ ವಿಮರ್ಶೆಗಳಿಗೆ ಮಾನವೀಯತೆಯಲ್ಲಿ ಸ್ಥಾನ ಲಭಿಸಿತು. ಅವರು ಧರ್ಮದ ಆಧಿಪತ್ಯವನ್ನು ಪ್ರಶ್ನಿಸಿದರು.

### ಅರಿಸ್ಟಾಟಲ್



ಅರಿಸ್ಟಾಟಲ್ ಪ್ರಾಚೀನ ಗ್ರೀಸಿನಲ್ಲಿ ಜೀವಿಸಿದ್ದ ಚಿಂತಕನಾಗಿದ್ದನು. ಅವನ ಆಶಯಗಳು ನವೋತ್ಥಾನ ಕಾಲದಲ್ಲಿ ನೂತನ ಪ್ರಶ್ನೆಗಳಿಗೆ ಹಾಗೂ ಸಂವಾದಗಳಿಗೆ ಹಿನ್ನೆಲೆಯನ್ನೊದಗಿಸಿದವು. ಹನ್ನೆರಡು, ಹದಿಮೂರನೇ ಶತಮಾನಗಳಲ್ಲಿ ಯುರೋಪಿನಲ್ಲಿ ಅರಿಸ್ಟಾಟಲಿನ ಕೃತಿಗಳು ಲ್ಯಾಟಿನ್ ಮತ್ತು ಪ್ರಾದೇಶಿಕ ಭಾಷೆಗಳಿಗೆ ಅನುವಾದಗೊಂಡು ಪ್ರಚಾರವಾದವು. ಸತ್ಯಾನ್ವೇಷಣೆಗೆ ಅವನು ನೀಡಿದ ಪ್ರಾಮುಖ್ಯ ಹಾಗೂ ಅಧ್ಯಯನಗಳ ವ್ಯಾಪ್ತಿಯು ಇದಕ್ಕೆ ಕಾರಣವಾಗಿತ್ತು.

ಈ ಸಮಯದಲ್ಲಿ ಪ್ರಾಚೀನ ಗ್ರೀಕೋ–ರೋಮನ್ ಗ್ರಂಥಗಳನ್ನು ಜನರು ಹೆಚ್ಚು ಹೆಚ್ಚು ಆಸಕ್ತಿಯಿಂದ ಓದಿದರು. ಪ್ರಾಚೀನ ಗ್ರೀಕ್ ತತ್ವಚಿಂತಕನಾದ ಅರಿಸ್ಟಾಟಲಿನ ಆಶಯಗಳನ್ನು ಅರಬರು ಯುರೋಪಿನಲ್ಲಿ ಪ್ರಚಾರ ಮಾಡಿದರು. ಮಾನವತಾವಾದಿಗಳು ಪ್ರಾದೇಶಿಕ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದರಲ್ಲದೆ ಗ್ರೀಕೋ – ರೋಮನ್ ಶೈಲಿಯಲ್ಲಿ ಚಿತ್ರಗಳನ್ನು ರಚಿಸಿದರು ಮತ್ತು ಶಿಲ್ಪಗಳನ್ನು ನಿರ್ಮಿಸಿದರು. ಗ್ರೀಕೋ – ರೋಮನ್ ಸಂಸ್ಕೃತಿಯು ಅವರಿಗೆ ಪ್ರಮುಖವಾಗಿ ಪ್ರಚೋದನೆಯನ್ನಿತ್ತರೂ ಅವರ ದೃಷ್ಟಿಕೋನವು ವ್ಯತ್ಯಸ್ತವಾಗಿತ್ತು. ಗ್ರೀಕೋ – ರೋಮನ್ ಕಲೆಯು ದೇವರನ್ನೂ ಶ್ರೀಮಂತರನ್ನೂ ಸಾಮರ್ಥ್ಯವಂತರನ್ನೂ ಚಿತ್ರಿಸಿತ್ತು. ರೂಪಗಳನ್ನು ಪೂರ್ಣ ಸೌಂದರ್ಯದಿಂದ ಆವಿಷ್ಕರಿಸಲು ಅವರು ಪ್ರಯತ್ನಿಸಿದರು. ಆದರೆ ನವೋತ್ಥಾನ ಕಲೆಯು ಮಾನವನನ್ನು ಸ್ವಾಭಾವಿಕವಾಗಿ ಚಿತ್ರಿಸಿತು. ನವೋತ್ಥಾನ ಕಾಲದ ಕಲಾ ಸಾಹಿತ್ಯ ಸೃಷ್ಟಿಗಳು ಇದನ್ನು ಪುಷ್ಟೀಕರಿಸುತ್ತವೆ. ಮಾನವೀಯತೆಯು ಅನಂತರದ ಕಾಲದಲ್ಲಿ ಚಿತ್ರಕಲೆ, ಶಿಲ್ಪಕಲೆ, ಸಾಹಿತ್ಯ, ರಾಜಕೀಯ, ಚರಿತ್ರೆ, ವಿಜ್ಞಾನ, ಧರ್ಮ ಮೊದಲಾದ ವಿವಿಧ ರಂಗಗಳಲ್ಲಿ ಪರಿವರ್ತನೆಗಿರುವ ಪ್ರಚೋದನೆ ಹಾಗೂ ಮೂಲವಾಗಿ ಬದಲಾಯಿತು. ಈ ಪರಿವರ್ತನೆಗಳನ್ನು ನವೋತ್ಥಾನವು ಪ್ರತಿನಿಧೀಕರಿಸುತ್ತದೆ.

ಮಾನವೀಯತೆಯ ಆವಿರ್ಭಾವವು ಜಾಗತಿಕ ಚರಿತ್ರೆಯ ಮೇಲೆ ಹೇಗೆ ಪ್ರಭಾವ ಬೀರಿತು?

## ನವೋತ್ಥಾನ ಕಲೆ



ಮಧ್ಯಕಾಲೀನ ಚಿತ್ರ



ನವೋತ್ಥಾನ ಕಾಲದ ಚಿತ್ರ

ಮೇಲೆ ಕೊಟ್ಟಿರುವುದು ಮಧ್ಯಕಾಲದ ಮತ್ತು ನವೋತ್ಥಾನ ಕಾಲದ ಚಿತ್ರಗಳಾಗಿವೆ. ಎರಡರ ವಿಷಯವೂ ಒಂದೇ ಆಗಿದೆ. ಆದರೆ ಅವುಗಳ ಶೈಲಿಯಲ್ಲಿ ಯಾವೆಲ್ಲ ವ್ಯತ್ಯಾಸಗಳಿವೆಯೆಂದು ಕಂಡುಕೊಳ್ಳಬಹುದೆ?

ಮಧ್ಯಕಾಲೀನ ಚಿತ್ರವು ದೇವತೆಗಳು, ಪರಲೋಕ ಮೊದಲಾದ ಆಧ್ಯಾತ್ಮಿಕ ಘಟಕಗಳಿಗೆ ಪ್ರಾಮುಖ್ಯವನ್ನೀಯುವಾಗ, ನವೋತ್ಥಾನ ಚಿತ್ರವು ಶರೀರದ ಸೌಂದರ್ಯ, ಮೌಲ್ಯ, ಬಣ್ಣಗಳ ಸ್ವಾಭಾವಿಕ ಪ್ರಯೋಗ ಮೊದಲಾದ ಭೌತಿಕ ಘಟಕಗಳಿಗೆ ಒತ್ತು ನೀಡುತ್ತದೆ. ಈ ರೀತಿಯಲ್ಲಿ ನವೋತ್ಥಾನ ಕಾಲದಲ್ಲಿ ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ ಎಂಬೀ ರಂಗಗಳು ವಿಶೇಷವಾದ ಪರಿವರ್ತನೆಗಳಿಗೆ ಒಳಪಟ್ಟವು. ಯುರೋಪಿನ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲೊಂದಾದ ಫ್ಲೋರೆನ್ಸ್ ನಗರವು ಇಟಲಿಯ ನವೋತ್ಥಾನ ಕಲೆಯ ಪ್ರಮುಖ ಕೇಂದ್ರವಾಗಿತ್ತು.

## ಚಿತ್ರಕಲೆ

ನವೋತ್ಥಾನ ಕಾಲದಲ್ಲಿ ಮಾನವೀಯತೆಯು ಅತ್ಯಂತ ಪ್ರಬಲವಾಗಿ ಪ್ರತಿಫಲಿಸಿದ ಕ್ಷೇತ್ರವು ಚಿತ್ರಕಲೆಯಾಗಿತ್ತು. ಚಿತ್ರಗಾರರು ಅವರ ಚಿತ್ರಗಳಲ್ಲಿ ಮನುಷ್ಯ ರೂಪಗಳನ್ನು ನೈಜವಾಗಿಯೂ ಸ್ಪಷ್ಟವಾಗಿಯೂ ಸೂಕ್ಷ್ಮತೆಯಿಂದಲೂ ಮಂಡಿಸಿದರು. ಅಂಗರಚನಾ ಶಾಸ್ತ್ರ (Anatomy) ದಲ್ಲಿ ಅವರು ಗಳಿಸಿದ್ದ ಜ್ಞಾನವು ಅದಕ್ಕೆ ಸಹಕಾರಿಯಾಯಿತು. ಯುಕ್ತಿಚಿಂತನೆ ಹಾಗೂ ಮಾನವ ಸ್ವಭಾವದ ಭಾವನೆಗಳಿಗೆ ಚಿತ್ರಗಾರರು ತಮ್ಮ ರಚನೆಗಳಲ್ಲಿ ಒತ್ತು ನೀಡಿದರು. ಇಹಲೋಕದ ಮೌಲ್ಯಗಳಿಗೆ ಪ್ರಾಧಾನ್ಯ ಲಭಿಸಿತು. ಮಾನವೀಯತೆಯ ಪ್ರಭಾವದಿಂದಾಗಿ ಕಲಾ ಸೃಷ್ಟಿಗಳು ಹೆಚ್ಚು ನಿಖರವೂ ವಾಸ್ತವಿಕತೆಯೊಂದಿಗೆ ಹೊಂದಿಕೊಳ್ಳುವವುಗಳೂ ಆದವು.

ದೇವತಾಶಾಸ್ತ್ರಗಳಿಗೆ ಪ್ರಾಮುಖ್ಯವನ್ನೀಯುವ ವಿಷಯಗಳನ್ನು ತಮ್ಮ ರಚನೆಗಳಿಗೆ ಕಲಾಕಾರರು ಸಾಮಾನ್ಯವಾಗಿ ಆರಿಸಿಕೊಂಡಿದ್ದರು. ಆದರೆ ಅವರ ಚಿತ್ರಗಳಲ್ಲಿ ಕೆಳಗೆ ಕೊಟ್ಟಿರುವ ವಿಶೇಷತೆಗಳನ್ನು ಕಾಣಬಹುದು.

- ಭೂದೃಶ್ಯಗಳು (Landscape)
- ಬಣ್ಣಗಳನ್ನುಪಯೋಗಿಸಿ ಪ್ರಕಾಶ ಮತ್ತು ಬಾಹ್ಯಾಕಾಶದ ಚಿತ್ರ
- ಮಾನವ ಶರೀರದ ವಾಸ್ತವ ಚಿತ್ರ
- ತೈಲ ವರ್ಣದ ಬಳಕೆ
- ಭಾವಚಿತ್ರಗಳು (Portrait)
- ಆದರ್ಶೀಕರಿಸಿದ (Idealised) ಮಾನವ ರೂಪದ ದೇವರ ಚಿತ್ರ



ಇದು ಇಟಲಿಯ ನವೋತ್ಥಾನ ಚಿತ್ರಗಾರನಾದ ಜಿಯೋವನಿ ಬೆಲ್ಲಿನಿ ರಚಿಸಿದ "ಅಗೊನಿ ಇನ್ ದ ಗಾರ್ಡನ್" (ಹೂದೋಟದ ನೋವು) ಎಂಬ ಚಿತ್ರವಾಗಿದೆ. ಓಲಿವ್ ಪರ್ವತದಲ್ಲಿ ಕ್ರಿಸ್ತನು ಮಂಡಿಯೂರಿ ಪ್ರಾರ್ಥಿಸುವಾಗ ಶಿಷ್ಯರು ಅವನ ಸಮೀಪದಲ್ಲಿ ನಿದ್ರಿಸುತ್ತಾರೆ. ಕ್ರಿಸ್ತನನ್ನು ಸೆರೆಹಿಡಿಯಲು ರೋಮಿನ ಸೈನಿಕರು ಬರುವುದನ್ನು ಹಿನ್ನೆಲೆಯಲ್ಲಿ ಕಾಣಬಹುದು.

ಇಟಲಿಯ ನವೋತ್ಥಾನ ಚಿತ್ರಗಾರನಾದ ಪಿಯೆರೊ ಡೆಲ್ಲ ಫ್ರಾನ್ಸೆಸ್ಕೊವಿನ ಪ್ರಸಿದ್ಧವಾದ ಅವಳಿ ತೈಲ ವರ್ಣ ಚಿತ್ರವಾದ "ಡಿಪ್ಟಿಕ್ ಆಫ್ ಫೆಡರಿಕೊ ಡಾ ಮೋಂಟೆ ಫೆಲ್‌ಟ್ರೋ ಹಾಗೂ ಬಾಟಿಸ್ಟಾ ಸ್ಫೋರ್ಸಾ"



ನೀಡಿರುವ ಚಿತ್ರಗಳನ್ನು ನಿರೀಕ್ಷಿಸಿ ನವೋತ್ಥಾನ ಚಿತ್ರಕಲೆಯ ಯಾವ ಯಾವ ವಿಶೇಷತೆಗಳು ಇವುಗಳಲ್ಲಿ ಪ್ರತಿಫಲಿತವಾಗಿವೆ ಎಂಬುದನ್ನು ಕಂಡುಹಿಡಿಯಿರಿ.

ಜಿಯೋಟ್ಟೋವಿನ ಚಿತ್ರಗಳಲ್ಲಿ ಗ್ರೀಕೋ - ರೋಮನ್‌ನ ಪ್ರಭಾವವು ಮೊತ್ತಮೊದಲು ಪ್ರಕಟಗೊಂಡಿತು. ಅನಂತರದ ಕಾಲದಲ್ಲಿ ಚಿತ್ರಕಲಾರಂಗಕ್ಕೆ ಬಂದವರ ಮೇಲೆ ಚಿತ್ರಗಾರನಾದ ಮಸಾಚ್ಚೋವು ಪ್ರಭಾವ ಬೀರಿದನು. ಅವನ ಭಿತ್ತಿಚಿತ್ರಗಳು ವೃತ್ತಾಕಾರದಲ್ಲಿತ್ತಲ್ಲದೆ ಭಿತ್ತಿಯಿಂದ ಹೊರಕ್ಕೆ ತಳ್ಳಿದಂತೆ ಕಂಡುಬರುತ್ತಿತ್ತು. ದೈನಂದಿನ ಜೀವಿತಾನುಭವಗಳನ್ನು ಸೂಚಿಸುವ ಮಾನವ ರೂಪಗಳನ್ನು ಅವನು ತನ್ಮಯತೆಯಿಂದ ಚಿತ್ರಿಸಿದನು.

ಕೊನೆಯ ಭೋಜನ, ಮೊನಾಲಿಸ ಎಂಬಿವುಗಳು ಲಿಯನಾರ್ಡೊ ಡಾ ವಿಂಚಿಯ ಜಗತ್ಪ್ರಸಿದ್ಧವಾದ ಚಿತ್ರಗಳಾಗಿವೆ. ಬಣ್ಣ, ನೆರಳು, ಬೆಳಕು ಎಂಬಿವುಗಳನ್ನು ಸಂಯೋಜಿಸುವುದರಲ್ಲಿ ಡಾ ವಿಂಚಿಯು ಅನನ್ಯನಾಗಿದ್ದನೆಂಬುದನ್ನು ಈ ಚಿತ್ರಗಳು ಹೇಳುತ್ತವೆ. ಲಿಯಾನಾರ್ಡೊ ಡಾ ವಿಂಚಿಯು ಮಾನವ ಶರೀರದ ಕುರಿತು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ ಒಬ್ಬ ಬಹುಮುಖ ಪ್ರತಿಭೆಯಾಗಿದ್ದನು.

ನಿಮ್ಮಲ್ಲಿ ಒಬ್ಬರು ನನಗೆ ದ್ರೋಹ ಬಗೆಯುತ್ತಾರೆಂದು ಯೇಸು ಕ್ರಿಸ್ತನು ತನ್ನ ಶಿಷ್ಯರಲ್ಲಿ ಹೇಳಿದಾಗ ಅವರ ಮುಖದಲ್ಲಿ ವ್ಯಕ್ತವಾಗುವ ಅದ್ಭುತ, ಭಯ, ಅಪರಾಧಿಪ್ರಜ್ಞೆ ಮೊದಲಾದ ಮಾನವ ಭಾವನೆಗಳು 'ಕೊನೆಯ ಭೋಜನ' ದಲ್ಲಿ ಪ್ರತಿಫಲಿತವಾಗಿವೆ. ಮೊನಾಲಿಸದ ನಿಗೂಢವಾದ ಮುಖಭಾವನೆಯಲ್ಲಿ ಉತ್ತರ ಲಭಿಸದ ಅನೇಕ ಪ್ರಶ್ನೆಗಳನ್ನು ಡಾ ವಿಂಚಿ ಹುದುಗಿರಿಸಿದ್ದಾನೆಂಬುದಾಗಿ ಸರ್ವ ಸಾಮಾನ್ಯವಾಗಿ ಅವಲೋಕಿಸಲಾಗಿದೆ.



ಲಿಯನಾರ್ಡೊ ಡಾ ವಿಂಚಿ     ಕೊನೆಯ ಭೋಜನ     ಮೊನಾಲಿಸ

ವ್ಯಾಟಿಕನ್‌ನಲ್ಲಿರುವ ಸಿಸ್ಟೈನ್ ಚಾಪೆಲ್‌ನ ಮೇಲ್ಛಾವಣಿಯಲ್ಲಿ (Ceiling) ರಚಿಸಿದ ಭಿತ್ತಿಚಿತ್ರಗಳು ಹಾಗೂ 'ದಿ ಲಾಸ್ಟ್ ಜಡ್ಜ್‌ಮೆಂಟ್' (ಅಂತಿಮ ವಿಧಿ) ಮೈಕಲ್ ಏಂಜಲೋ ಎಂಬ ಮತ್ತೊಬ್ಬ ಪ್ರತಿಭಾಶಾಲಿಯನ್ನು ಅಮರನನ್ನಾಗಿಸುತ್ತದೆ. ಅವನ ಹೆಚ್ಚಿನ ಚಿತ್ರಗಳ ಕೇಂದ್ರಬಿಂದು ಸಮರ್ಥರೂ ಸುಂದರರೂ ಆದ ಮನುಷ್ಯರಾಗಿದ್ದರು.

ಟಿಷ್ಯ ಮತ್ತು ರಾಫೆಲ್ ನವೋತ್ಥಾನ ಕಾಲದಲ್ಲಿ ಗಮನ ಸೆಳೆದ ಇತರ ಇಬ್ಬರು ಚಿತ್ರಕಾರರಾಗಿದ್ದಾರೆ. ರಾಫೆಲ್ ಮಾನವರನ್ನು ವಿವೇಕಿಗಳೂ ಮಿತವಾದಿಗಳೂ ಗೌರವಾನ್ವಿತರೂ ಆಗಿ ಚಿತ್ರಿಸಿದನು. ಇವರ ಚಿತ್ರಗಳಲ್ಲಿ ಆಶಯದೊಂದಿಗೆ ಸೌಂದರ್ಯಕ್ಕೂ ಒತ್ತು ನೀಡಿದ್ದರು.



ಮೈಕಲ್ ಏಂಜಲೋ     ಟಿಷ್ಯ     ರಾಫೆಲ್



ನವೋತ್ಥಾನ ಚಿತ್ರಕಲೆಯ ವಿಶೇಷತೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ಶಿಲ್ಪಕಲೆ



ಡೊನಾಟೆಲ್ಲೋವಿನ ಡೇವಿಡ್

ಶಿಲ್ಪಕಲೆಯು ಚಿತ್ರಕಲೆಯಂತೆಯೇ ಗಮನಾರ್ಹವಾದ ಮತ್ತೊಂದು ಕ್ಷೇತ್ರವಾಗಿತ್ತು. ಡೊನಾಟೆಲ್ಲೋ ನವೋತ್ಥಾನ ಕಾಲದ ಗಮನಾರ್ಹವಾದ ಶಿಲ್ಪಿಗಳಲ್ಲಿ ಒಬ್ಬನಾಗಿದ್ದಾನೆ. ಶಿಲ್ಪಕಲೆಯನ್ನು ಮಧ್ಯಕಾಲದ ಗೋಥಿಕ್ ಶೈಲಿಯಿಂದ ವಿಮೋಚನೆಗೊಳಿಸಿದ ಡೊನಾಟೆಲ್ಲೋ ಶಿಲ್ಪಗಳಿಗೆ ಹೆಚ್ಚು ಚೈತನ್ಯ ಮತ್ತು ವ್ಯಕ್ತಿತ್ವವನ್ನು ನೀಡಿದನು. ಒಂದೇ ಕಾಲಿನಲ್ಲಿ ತನ್ನ ಶರೀರ ಭಾಗವನ್ನೇ ಸಂಪೂರ್ಣವಾಗಿ ಹೇರಿಕೊಂಡು ನಿಂತ ಒಬ್ಬ ಹದಿಹರೆಯದವನನ್ನು ಅವನು 'ಡೇವಿಡ್' ಎಂಬ ಕಂಚಿನ ಶಿಲ್ಪದ ಮೂಲಕ ಪ್ರಸ್ತುತಪಡಿಸಿದನು. ಅವನು ರಚಿಸಿದ 'ಗಟ್ಟಾಮೆಲಾಟ' ಎಂಬ ಕುದುರೆಯನ್ನೇರಿರುವ ಯೋಧನ ಶಿಲ್ಪವು ಪ್ರಾಚೀನ ರೋಮಿನ ಅಶ್ವಸೇನೆಯನ್ನು ನೆನಪಿಸುತ್ತದೆ. ಜಾತ್ಯತೀತನಾದ ಒಬ್ಬ ವೀರನನ್ನು ಅಮರನನ್ನಾಗಿಸುವ ಕಾರ್ಯವನ್ನು ಡೊನಾಟೆಲ್ಲೋ ಇದರಲ್ಲಿ ನಿರ್ವಹಿಸಿದ್ದಾನೆ.

ಮಾನವ ರೂಪದಲ್ಲಿ ದೇವರನ್ನು ಪ್ರಸ್ತುತಪಡಿಸುವ ಮೈಕಲೇಂಜಲೋವಿನ ಶಿಲ್ಪಗಳು ಪ್ರಾಚೀನ ಗ್ರೀಕೋ-ರೋಮನ್ ಶೈಲಿಯಿಂದ ಗತಿಬದಲಾಯಿಸಿ ಸಂಚರಿಸಿದುವು. ಕ್ರಿಸ್ತನ ಶರೀರವನ್ನು ತನ್ನ ಮಡಿಲಲ್ಲಿ ಮಲಗಿಸಿರುವ ಮೇರಿಯನ್ನು ಚಿತ್ರಿಸಿದ ಶಿಲ್ಪವಾದ ಪಿಯತ್ತ ಮತ್ತು ವೀರನಾದ ಡೇವಿಡ್‌ನ ಶಿಲ್ಪಗಳು ಅವನನ್ನು ಅಮರನನ್ನಾಗಿಸಿದವು.



ಗಟ್ಟಾಮೆಲಾಟ



ಪಿಯತ್ತ



ಮೈಕಲೇಂಜಲೋವಿನ ಡೇವಿಡ್

ನವೋತ್ಥಾನದ ಚಿತ್ರಕಲೆ ಮತ್ತು ಶಿಲ್ಪಕಲೆಯ ಸಾಮಾನ್ಯ ವಿಶೇಷತೆಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.

## ವಾಸ್ತುಶಿಲ್ಪ



ಬ್ರೂನಲ್ಲೆಸ್ಕಿ ವಿನ್ಯಾಸಗೊಳಿಸಿದ ಗುಮ್ಮಟ

ವಾಸ್ತುಶಿಲ್ಪವು ಚಿತ್ರಕಲೆ ಮತ್ತು ಶಿಲ್ಪಕಲೆಗೆ ಹೊರತಾಗಿ ಪರಿವರ್ತನೆಗಳಿಗೆ ಸಾಕ್ಷಿಯಾದ ಮತ್ತೊಂದು ಕ್ಷೇತ್ರವಾಗಿದೆ. ಫಿಲಿಪ್ಪೋ ಬ್ರೂನಲ್ಲೆಸ್ಕಿ ವಾಸ್ತುಶಿಲ್ಪದಲ್ಲಿ ನೂತನ ಶೈಲಿಗೆ ನಾಂದಿಹಾಡಿದನು. ಮಧ್ಯಕಾಲದಲ್ಲಿದ್ದ ಗೋಥಿಕ್ ವಾಸ್ತುಶಿಲ್ಪದಿಂದ ವ್ಯತ್ಯಸ್ತವಾಗಿ ಪ್ರಾಚೀನ ಗ್ರೀಕೋ - ರೋಮನ್ (ಕ್ಲಾಸಿಕಲ್) ಶೈಲಿಯ ಪ್ರಭಾವವನ್ನು ಅವನು

## ಗೋಥಿಕ್ ಶೈಲಿ

ಗೋಥಿಕ್ ಶೈಲಿಯು ಮಧ್ಯಕಾಲದ ದ್ವಿತೀಯಾರ್ಧದಲ್ಲಿ ಯುರೋಪಿನಲ್ಲಿ ವಿಕಾಸ ಹೊಂದಿದ ವಾಸ್ತುಶೈಲಿಯಾಗಿದೆ. ಇದು ಫ್ರಾನ್ಸಿನಲ್ಲಿ ಉದಯವಾಯಿತು. ಮೊನೆಯುಳ್ಳ ಕಮಾನುಗಳು (Pointed Arch) ಇದರ ಪ್ರಮುಖ ವಿಶೇಷತೆಯಾಗಿತ್ತು. ಅನೇಕ ದೇವಾಲಯಗಳನ್ನು ಮತ್ತು ವಿಶ್ವವಿದ್ಯಾಲಯಗಳನ್ನು ಈ ಮಾದರಿಯಲ್ಲಿ ಯುರೋಪಿನಲ್ಲಿ ನಿರ್ಮಿಸಿದರು.



ಫ್ಲೋರೆನ್ಸಿನಲ್ಲಿ ನಿರ್ಮಿಸಿದ ಕ್ಯಾಥೆಡ್ರೆಲಿನಲ್ಲಿ ಕಾಣಬಹುದು. ಗೋಥಿಕ್ ಶೈಲಿಯ ಉನ್ನತವಾದ ಗೋಪುರಗಳಿಗೆ ಬದಲಾಗಿ ಗುಮ್ಮಟಗಳು (ಡ್ಯೂಮೊ) ಇವುಗಳಲ್ಲಿದ್ದವು. ಮೈಕಲೇಂಜಲೋ, ಬ್ರಮಾಂಟೆ ಮೊದಲಾದವರ ನೇತೃತ್ವದಲ್ಲಿ ರೋಮಿನಲ್ಲಿ ನಿರ್ಮಿಸಿದ ಸೈಂಟ್ ಪೀಟರ್ಸ್ ಬೆಸಿಲಿಕಾದಲ್ಲಿ ಈ ಶೈಲಿಯು ಹೆಚ್ಚು ಸ್ಪಷ್ಟವಾಗಿತ್ತು.



ಸೈಂಟ್ ಪೀಟರ್ಸ್ ಬೆಸಿಲಿಕಾ

ನವೋತ್ಥಾನ ಕಲೆಯಲ್ಲಿ ಮಾನವೀಯತೆಯ ಪ್ರಭಾವವನ್ನು ಸ್ಪಷ್ಟಪಡಿಸುವ ಒಂದು ಡಿಜಿಟಲ್ ಆಲ್ಬಂನ್ನು ವಿವರಣೆಗಳೊಂದಿಗೆ ತಯಾರಿಸಿರಿ.

## ನವೋತ್ಥಾನ ಸಾಹಿತ್ಯ

“ ನಮ್ಮ ಭವಿಷ್ಯವನ್ನು ನಿರ್ಧರಿಸಲು ಸಾಧ್ಯವಾಗುವುದು ನಕ್ಷತ್ರಗಳಿಗಲ್ಲ, ನಮಗೇ ಆಗಿದೆ ”

ಇವು ಇಂಗ್ಲೀಷ್ ಸಾಹಿತಿ ವಿಲಿಯಂ ಶೇಕ್ಸ್‌ಪಿಯರನ ಪ್ರಸಿದ್ಧ ನಾಟಕವಾದ ‘ಜೂಲಿಯಸ್ ಸೀಸರ್’ನ ಸಾಲುಗಳಾಗಿವೆ. ನವೋತ್ಥಾನವು ಪ್ರಭಾವ ಬೀರಿದ ಸಾಹಿತಿಗಳಲ್ಲೊಬ್ಬನಾದ ಶೇಕ್ಸ್‌ಪಿಯರ್‌ನ ಈ ಸಾಲುಗಳಲ್ಲಿ ಮಾನವೀಯತೆಯ ಶಕ್ತಿಯು ಎಷ್ಟರ ಮಟ್ಟಿಗೆ ಪ್ರತಿಫಲಿಸಿದೆ ಎಂಬುದನ್ನು ಪರಿಶೀಲಿಸಿರಿ.

ನವೋತ್ಥಾನ ಸಾಹಿತಿಗಳು ವ್ಯಕ್ತಿಸ್ವಾತಂತ್ರ್ಯ ಮತ್ತು ಜಾತ್ಯತೀತ ಮೌಲ್ಯಗಳಿಗೆ ಪ್ರಾಮುಖ್ಯವನ್ನು ನೀಡಿದರು. ನವೋತ್ಥಾನ ಸಾಹಿತ್ಯದ ಒಂದು ಮೂಲಭೂತ ವಿಶೇಷತೆಯೆಂದರೆ ಮಧ್ಯಕಾಲೀನ ಪಾಂಡಿತ್ಯದಿಂದಿರುವ ವಿಮೋಚನೆಯಾಗಿದೆ. ಪ್ರಾಚೀನ

ಗ್ರೀಕೋ – ರೋಮನ್ ಸಂಸ್ಕೃತಿಯ ಪ್ರಭಾವವು ಇದ್ದರೂ ಹೆಚ್ಚಿನ ನವೋತ್ಥಾನ ಸಾಹಿತಿಗಳು ಲ್ಯಾಟಿನ್ ಭಾಷೆಗೆ ಬದಲಾಗಿ ಪ್ರಾದೇಶಿಕ ಭಾಷೆಗಳಲ್ಲಿ ತಮ್ಮ ಕೃತಿಗಳನ್ನು ರಚಿಸಿದರು. ಈ ಕಾಲದಲ್ಲಿ ಗದ್ಯ ಸಾಹಿತ್ಯಕ್ಕೆ ಹೆಚ್ಚಿನ ಮಹತ್ವ ಲಭಿಸಿತು.

ಪ್ರಾದೇಶಿಕ ಭಾಷೆಯಲ್ಲೂ ಗದ್ಯರೂಪದಲ್ಲೂ ಕೃತಿ ರಚನೆ ಮಾಡುವುದು ಸಮಾಜಕ್ಕೆ ಯಾವೆಲ್ಲ ವಿಧದಲ್ಲಿ ಪ್ರಯೋಜನಕಾರಿಯಾಗಬಹುದು ಎಂಬುದನ್ನು ತರಗತಿಯಲ್ಲಿ ಚರ್ಚಿಸಿರಿ.

ಡಿವೈನ್ ಕಾಮಿಡಿಯನ್ನು ರಚಿಸಿದ ಡಾಂಟೆಯು ನವೋತ್ಥಾನ ಕಾಲದ ಗಮನಾರ್ಹನಾದ ಸಾಹಿತಿಯಾಗಿದ್ದನು. ನರಕ, ಶುದ್ಧೀಕರಣ ಸ್ಥಳ (Purgatory), ಸ್ವರ್ಗ ಎಂಬಿವುಗಳ ಮೂಲಕವಿರುವ ಡಾಂಟೆಯ ಕಾಲ್ಪನಿಕ ತೀರ್ಥಯಾತ್ರೆಯೇ ಈ ಕವಿತೆಯ ಕಥಾವಸ್ತು. ಆದರೆ ಮಾನವ ಸ್ನೇಹ, ದೇಶಪ್ರೇಮ, ಪ್ರಾಕೃತಿಕ ಸನ್ನಿವೇಶಗಳೊಂದಿಗಿನ ಆಸಕ್ತಿ, ಸ್ವತಂತ್ರ ಹಾಗೂ ಏಕೀಕೃತವಾದ ಇಟೆಲಿಗಾಗಿರುವ ಹಂಬಲ ಎಂಬಿವುಗಳು ಇದರಲ್ಲಿ ಬಲವಾಗಿ ಪ್ರತಿಫಲಿಸುತ್ತವೆ. ಇಟೆಲಿಯ ಪ್ರಾದೇಶಿಕ ಭಾಷೆಯಲ್ಲಿ ಡಾಂಟೆಯು 'ಡಿವೈನ್ ಕಾಮಿಡಿ' ಯನ್ನು ರಚಿಸಿದನು.



ಡಾಂಟೆ

ಮತ್ತೋರ್ವ ಜಗತ್ಪ್ರಸಿದ್ಧ ಸಾಹಿತಿಯಾದ ಪೆಟ್ರಾರ್ಕನು ಮಾನವೀಯತೆಯ ಪ್ರಮುಖ ಪ್ರಚಾರಕರಲ್ಲೊಬ್ಬನಾಗಿದ್ದನು. ಅವನು ಲೋರಾಳಿಗೆ ಬರೆದ ಪ್ರೇಮಗೀತೆಗಳು ಕೆಚ್ಚೆದೆಯದ್ದೂ ಪ್ರತ್ಯೇಕ ಶೈಲಿಯನ್ನು ಹೊಂದಿರುವುದೂ ಆಗಿತ್ತು. ಆದರೆ ಲ್ಯಾಟಿನ್ ಭಾಷೆಯನ್ನು ಬಿಟ್ಟುಬಿಡಲು ಪೆಟ್ರಾರ್ಕನು ತಯಾರಾಗಿರಲಿಲ್ಲ. 'ದಕ್ಕಾಮರನ್' ಎಂಬ ಕೃತಿಯ ರಚನೆಗಾರನಾದ ಬೊಕ್ಕಾಚಿಯೋ ಜಾಗತಿಕ ಗಮನ ಸೆಳೆದ ಮತ್ತೊಬ್ಬ ನವೋತ್ಥಾನ ಸಾಹಿತಿಯಾಗಿದ್ದನು.



ಪೆಟ್ರಾರ್ಕ್

ನಿಕೊಲೋ ಮಾಕ್ಯವೆಲ್ಲಿಯು 'ದಿ ಪ್ರಿನ್ಸ್' ಎಂಬ ಕೃತಿಯಲ್ಲಿ ರಾಜಕೀಯ ಚಿಂತನೆಗಳನ್ನು ಹಂಚಿಕೊಳ್ಳುತ್ತಾನೆ. ತಾನು ಆಳ್ವಿಕೆ ಮಾಡುವ ದೇಶದ ಅಧಿಕಾರ ಮತ್ತು ಸುರಕ್ಷೆಯನ್ನು ಕಾಪಾಡುವುದು ಆಡಳಿತಾಧಿಕಾರಿಯ ಪ್ರಮುಖ ಕರ್ತವ್ಯವೆಂದು ಅವನು ಭಾವಿಸಿದನು. ಜನರು ಸರ್ವ ಸಾಮಾನ್ಯವಾಗಿ ಸ್ವಾರ್ಥಿಗಳೂ ಅಧಿಕಾರ ಮತ್ತು ಭೌತಿಕ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿದವರೂ ಆಗಿರುತ್ತಾರೆ. ಆದ್ದರಿಂದ ರಾಷ್ಟ್ರದ ಮುಖ್ಯಸ್ಥರು ಒಮ್ಮೆಯೂ ತಮ್ಮ ಪ್ರಜೆಗಳಲ್ಲಿ ಒಂದು ವಿಭಾಗದೊಂದಿಗೆ ಸ್ನೇಹವನ್ನೋ ಕೃತಜ್ಞತೆಯನ್ನೋ ತೋರಿಸಬಾರದೆಂದು ಅವನು ಅಭಿಪ್ರಾಯಪಟ್ಟನು. ಮಧ್ಯಕಾಲದ ಫ್ಯೂಡಲ್ ಆಡಳಿತಾಧಿಕಾರಿಗಳಿಂದ ವ್ಯತ್ಯಸ್ತವಾದ ಓರ್ವ ಆಡಳಿತಾಧಿಕಾರಿಯನ್ನು ಮಾಕ್ಯವೆಲ್ಲಿಯು ತನ್ನ 'ದಿ ಪ್ರಿನ್ಸ್' ನಲ್ಲಿ ಪ್ರಸ್ತುತಪಡಿಸುತ್ತಾನೆ.



ಮಾಕ್ಯವೆಲ್ಲಿ



"ಪ್ರತಿಯೊಬ್ಬ ರಾಜನೂ 'ಕ್ರೂರತೆಯಿಲ್ಲದ ಕರುಣಾಳು' ಎಂಬ ಉತ್ತಮ ಹೆಸರನ್ನು ಗಳಿಸಲು ಬಯಸಬೇಕು. ಅದೇ ಸಮಯದಲ್ಲಿ ಆ ಕರುಣೆ ದುರುಪಯೋಗವಾಗದಿರುವಂತೆಯೂ ಅವನು ಗಮನಹರಿಸಬೇಕು. ಆದುದರಿಂದ, ತನ್ನ ಜನರ ಮಧ್ಯೆ ಏಕತೆ ಹಾಗೂ ನಿಷ್ಠೆಯನ್ನು ಕಾಪಾಡುವುದಕ್ಕಾಗಿ ಕ್ರೂರಿಯ ಹೆಸರನ್ನು ಕೇಳಬೇಕಾಗಿ ಬಂದರೂ ಅದಕ್ಕಾಗಿ ಓರ್ವ ರಾಜನು ಚಿಂತಿಸಬೇಕಾದುದಿಲ್ಲ."

ಮೇಲೆ ಕೊಟ್ಟಿರುವುದು ರಾಜನ ಕುರಿತಾದ ಮಾಕ್ಯವೆಲ್ಲಿಯ ದೃಷ್ಟಿಕೋನವಾಗಿದೆ. ಇದರ ಆಧಾರದಲ್ಲಿ ರಾಜಾಡಳಿತಕ್ಕೆ ಸಂಬಂಧಿಸಿ ಮಾಕ್ಯವೆಲ್ಲಿಯು ಯಾವ ಯಾವ ಆಶಯಗಳನ್ನು ಮುಂದಿರಿಸಿದ್ದಾನೆ ಎಂಬುದನ್ನು ಚರ್ಚಿಸಿರಿ. ಇದರಲ್ಲಿ ಮಾನವೀಯತೆಯು ಎಷ್ಟರ ಮಟ್ಟಿಗೆ ಪ್ರತಿಫಲಿತವಾಗಿದೆ ಎಂದು ಕಂಡುಹಿಡಿಯಿರಿ.



ಕಸಾಂದ್ರ ಫೆಡೆಲ್

ಮಾನವೀಯತೆಯ ಪ್ರಾಮುಖ್ಯವನ್ನು ಗುರುತಿಸಿದ ಕೆಲವರು ವನಿತೆಯರೂ ಈ ಕಾಲದಲ್ಲಿ ಇಟೆಲಿಯಲ್ಲಿ ಜೀವಿಸಿದ್ದರು. ಮಾನವತಾವಾದಿಯೂ ಬರಹಗಾರಳೂ ಆಗಿದ್ದ ಕಸಾಂದ್ರ ಫೆಡೆಲ್ ಅವರಲ್ಲಿ ಪ್ರಮುಖಳಾಗಿದ್ದಳು. ತನ್ನ ಕೃತಿಗಳು ಹಾಗೂ ಭಾಷಣಗಳ ಮೂಲಕ ಪ್ರಸಿದ್ಧಳಾದ ಕಸಾಂದ್ರಳು ಸ್ತ್ರೀಯರಿಗೆ ಉನ್ನತ ಶಿಕ್ಷಣವನ್ನು ನೀಡಬೇಕಾದುದರ ಪ್ರಾಮುಖ್ಯದ ಬಗ್ಗೆ ಪ್ರತಿಪಾದಿಸಿದಳು. ಇಟೆಲಿಯ ಮಾನವೀಯತಾವಾದಿಗಳಾದ ಪ್ರಭುಗಳೊಂದಿಗೆ ಪತ್ರದ ಮೂಲಕ ಆಶಯ ವಿನಿಮಯವನ್ನು ನಡೆಸಿದ ಅವರ ಭಾಷಣಗಳು ಮತ್ತು ಬರಹಗಳು ಅನೇಕ ಪುಸ್ತಕಗಳಾಗಿ ಮುದ್ರಿತಗೊಂಡು ಪ್ರಚಾರವಾದವು.

ಅನಂತರದ ಕಾಲದಲ್ಲಿ ನವೋತ್ಥಾನವು ಇಟೆಲಿಯಿಂದ ಇತರ ದೇಶಗಳ ಸಾಹಿತ್ಯಗಳಿಗೂ ವ್ಯಾಪಿಸಲು ಪ್ರಾರಂಭವಾದುವು. ಅಲ್ಲಿಯೂ ಅನೇಕ ಕೃತಿಗಳು ರಚಿತವಾದವು. ಅವುಗಳಲ್ಲಿ ಕೆಲವನ್ನು ಪರಿಚಯಿಸಿಕೊಳ್ಳುವ.

| ಸಾಹಿತಿಗಳು | ಕೃತಿ | ದೇಶ |
|---|---|---|
| ಇರಾಸ್ಮಸ್ | ಇನ್ ಪ್ರೈಸ್ ಆಫ್ ಫೋಲಿ | ನೆದರ್ಲೆಂಡ್ಸ್ |
| ಜೆಫ್ರಿ ಚೋಸರ್ | ಕಾಂಟರ್ ಬರಿ ಕಥೆಗಳು | ಇಂಗ್ಲೆಂಡ್ |
| ತೋಮಸ್ ಮೂರ್ | ಉಟೋಪಿಯಾ | ಇಂಗ್ಲೆಂಡ್ |
| ಮಿಗುಯೆಲ್ ಡಿ ಸರ್ವಾಂಟೆ | ಡಾನ್ ಕ್ವಿಕ್ಸೋಟ್ | ಸ್ಪೈನ್ |
| ಫ್ರಾಂಕೋಯಿಸ್ ರೆಬೆಲೈಸ್ | ಗರ್ಗಾಂಟ್ವಾ ಮತ್ತು ಪಾಂಟಾ ಗ್ರುಯೆಲ್ | ಫ್ರಾನ್ಸ್ |

ನವೋತ್ಥಾನ ಕಾಲದ ಸಾಹಿತ್ಯಕೃತಿಗಳನ್ನು ಜನಪ್ರಿಯಗೊಳಿಸುವುದರಲ್ಲಿ ಮುದ್ರಣವು ಪ್ರಮುಖ ಪಾತ್ರವಹಿಸಿತು. ಜರ್ಮನಿಯವನಾದ ಜೊಹಾನ್ಸ್ ಗುಟನ್ ಬರ್ಗ್ ಯುರೋಪಿನ ಮೊದಲ ಮುದ್ರಣಾಲಯವನ್ನು ಆರಂಭಿಸಿದನು. ಹದಿನೈದನೇ ಶತಮಾನದಲ್ಲಿ ಸ್ಥಾಪಿಸಿದ ಈ ಮುದ್ರಣಾಲಯದಲ್ಲಿ ಮುದ್ರಣಯಂತ್ರವು ಲೋಹದಿಂದ ನಿರ್ಮಿಸಿದುದೂ ಸ್ಥಳದಿಂದ ಸ್ಥಳಕ್ಕೆ ಕೊಂಡುಹೋಗಲು ಸಾಧ್ಯವಿರುವುದೂ ಆಗಿತ್ತು. ಮುದ್ರಣಯಂತ್ರದ ಸಂಶೋಧನೆಯು ಅಂದಿನ ಸಮಾಜದ ಮೇಲೆ ಹೇಗೆಲ್ಲ ಪ್ರಭಾವ ಬೀರಿರಬಹುದು?

- ಜ್ಞಾನದ ವ್ಯಾಪನೆ
- ಸಾಕ್ಷರತೆಯಲ್ಲುಂಟಾದ ಪ್ರಗತಿ
- 
- 

ಮುದ್ರಣ ಯಂತ್ರದ ಸಂಶೋಧನೆಯಿಂದಾಗಿ ಸಾಹಿತ್ಯ ಕೃತಿಗಳು ಮತ್ತು ಇತರ ಗ್ರಂಥಗಳನ್ನು ಜನರು ವ್ಯಾಪಕವಾಗಿ ಓದಲು ಪ್ರಾರಂಭಿಸಿದರು.



ಮುದ್ರಣ ಯಂತ್ರ

ಮಾನವೀಯತೆ ಹಾಗೂ ನವೋತ್ಥಾನ ಸಾಹಿತ್ಯ ಎಂಬ ವಿಷಯದಲ್ಲಿ ಒಂದು ಪ್ರಬಂಧ ತಯಾರಿಸಿರಿ.

## ನವೋತ್ಥಾನ ಹಾಗೂ ಚರಿತ್ರೆ ರಚನೆ

**ಜಾಗತಿಕ ಚರಿತ್ರೆ**

- ಪ್ರಾಚೀನ ಕಾಲ
- ಮಧ್ಯಕಾಲ
- ಆಧುನಿಕ ಕಾಲ

ಸಿ.ಇ. ಐದನೇ ಶತಮಾನ

ಸಿ.ಇ.. ಹದಿನೈದನೇ ಶತಮಾನ

ಕಲಿಕಾ ಸೌಕರ್ಯಕ್ಕಾಗಿ ಜಾಗತಿಕ ಚರಿತ್ರೆಯನ್ನು ವಿಂಗಡಿಸಿರುವುದರಲ್ಲಿ ಅತ್ಯಂತ ಗಮನಾರ್ಹವಾದ ವಿಧಾನವನ್ನು ಮೇಲೆ ಕೊಡಲಾಗಿದೆ. ಇದರ ಪ್ರಕಾರ ಸಿ.ಇ. ಐದನೇ ಶತಮಾನದ ವರೆಗಿನ ಕಾಲವನ್ನು ಪ್ರಾಚೀನ ಕಾಲವೆಂದೂ ಅನಂತರ ಹದಿನೈದನೇ ಶತಮಾನದ ವರೆಗಿನ ಕಾಲವನ್ನು ಮಧ್ಯಕಾಲವೆಂದೂ ಕರೆಯುತ್ತಾರೆ. ಹದಿನೈದನೇ ಶತಮಾನದ ನಂತರದ ಕಾಲವನ್ನು ಆಧುನಿಕ ಕಾಲವೆಂದು ಪರಿಗಣಿಸಲಾಗುತ್ತದೆ. ನವೋತ್ಥಾನ ಕಾಲದಲ್ಲಿ ಈ ವಿಧಾನವು ಅಸ್ತಿತ್ವಕ್ಕೆ ಬಂತು. ಇಟೆಲಿಯ ಚರಿತ್ರೆಗಾರರಾದ ಫ್ಲಾವಿಯೋ ಬಿಯೊಂಡೊ, ಲಿಯನಾರ್ಡೋ ಬ್ರೂನಿ ಎಂಬವರು ಈ ವಿಧಾನವನ್ನು ಆವಿಷ್ಕರಿಸಿದರು. ಈ ಕಾಲದಲ್ಲಿ ಚರಿತ್ರೆಯ ರಚನೆಯಲ್ಲಿ ಯಾವೆಲ್ಲ ಬದಲಾವಣೆಗಳುಂಟಾದವು ಎಂಬುದನ್ನು ನೋಡುವ.

ಮಧ್ಯಕಾಲೀನ ಕ್ರೈಸ್ತ ಸಂಪ್ರದಾಯದಿಂದ ಜಾತ್ಯತೀತ ಜೀವನ ಹಾಗೂ ಚಿಂತನೆ ಯೆಡೆಗಿರುವ ಪರಿವರ್ತನೆಯು ಚರಿತ್ರೆ ರಚನೆಯಲ್ಲಿಯೂ ಪ್ರತಿಫಲಿಸಿತು. ಚರಿತ್ರೆಯ ಘಟನೆಗಳು ದೇವರ ಸೃಷ್ಟಿ ಯಾಗಿವೆ ಮತ್ತು ಚರಿತ್ರೆಯ ಗತಿಯನ್ನು ನಿರ್ಣಯಿಸುವುದು ಅತೀಂದ್ರಿಯ ಶಕ್ತಿ ಯಾಗಿದೆ ಎಂಬ (Super natural power) ದೃಷ್ಟಿಕೋನವು ಮಧ್ಯಕಾಲದಲ್ಲಿತ್ತು. ಆದರೆ ನವೋತ್ಥಾನ ಕಾಲದಲ್ಲಿ ಈ ದೃಷ್ಟಿಕೋನದ



ಫ್ಲಾವಿಯೋ ಬಿಯೊಂಡೊ



ಲಿಯನಾರ್ಡೋ ಬ್ರೂನಿ

ಪ್ರಾಮುಖ್ಯವು ನಷ್ಟವಾಯಿತು. ಮಾನವ ಕೇಂದ್ರೀಕೃತವಾದ ಚರಿತ್ರೆ ವ್ಯಾಖ್ಯಾನಗಳಿಗೆ ಅಂಗೀಕಾರ ಲಭಿಸಲು ಪ್ರಾರಂಭವಾಯಿತು. ಸನ್ಯಾಸಿಗಳ ದಿನವೃತ್ತಾಂತಗಳು (Chronicles), ಪುರೋಹಿತರ ಜೀವನ ಕಥೆಗಳಿಗೂ ಮಿಗಿಲಾಗಿ ಮಾನವ ಜೀವನವು ಚರಿತ್ರೆ ರಚನೆಯ ಕೇಂದ್ರಬಿಂದುವಾಗಿ ಬದಲಾಯಿತು.

### ವೃತ್ತಾಂತ

ರಾಜರು ತಮ್ಮ ರಾಜ್ಯದ ಘಟನೆಗಳನ್ನು ದಾಖಲಿಸುವುದಕ್ಕಾಗಿ ಅರಮನೆಯ ಚರಿತ್ರೆಗಾರರಿಗೆ ಜವಾಬ್ದಾರಿಯನ್ನಿತ್ತಿದ್ದರು. ಇವರು ತಮ್ಮ ರಾಜರ ಕಾಲದ ಘಟನೆಗಳನ್ನು ದಾಖಲಿಸಿದರು. ಇಂತಹ ಗ್ರಂಥಗಳನ್ನು ಆಧುನಿಕ ಚರಿತ್ರೆಗಾರರು ವೃತ್ತಾಂತಗಳು ಎಂದು ಕರೆದರು. ಯಾಕೆಂದರೆ ಅವು ಘಟನೆಗಳ ನಿರಂತರವಾದ ಹಾಗೂ ಕಾಲಾನುಕ್ರಮದ ವಿವರಣೆಯನ್ನು ನೀಡುವವುಗಳಾಗಿದ್ದವು.

ಪುರಾತತ್ವ ಶಾಸ್ತ್ರದ ವಸ್ತುಗಳಿಗೆ ಹಾಗೂ ಅವಶೇಷಗಳಿಗೆ ಚರಿತ್ರೆ ರಚನೆಯಲ್ಲಿ ಪ್ರಮುಖ ಸ್ಥಾನ ಲಭಿಸಿದುದು ನವೋತ್ಥಾನ ಕಾಲದ ಚರಿತ್ರೆ ರಚನೆಯ ಮತ್ತೊಂದು ಪ್ರಧಾನ ವಿಶೇಷತೆಯಾಗಿದೆ. ಇದರ ಪರಿಣಾಮವಾಗಿ ಚರಿತ್ರೆಗಾರರು ಶಾಸನಗಳು, ನಾಣ್ಯಗಳು, ಪ್ರಾಚೀನ ಹಸ್ತಪ್ರತಿಗಳು ಮೊದಲಾದ ಪುರಾವೆಗಳಿಗೆ ಚರಿತ್ರೆಯ ರಚನೆಯಲ್ಲಿ ವಿಶೇಷ ಸ್ಥಾನವನ್ನು ನೀಡಿದರು. ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸಲಿರುವ ಮತ್ತು ಸಂರಕ್ಷಿಸುವ ಪ್ರಯತ್ನಗಳು ಹೆಚ್ಚು ತೀವ್ರವಾದವು.

ಮಾನವೀಯತೆಯ ಆಗಮನದೊಂದಿಗೆ ಚರಿತ್ರೆ ರಚನೆಯಲ್ಲಿ ವಿಮರ್ಶೆಗಳಿಗೂ ಸ್ಥಾನ ಲಭಿಸಿತು. ಕಥೆಗಳು ಮತ್ತು ಪುರಾಣಗಳ ಸ್ಥಾನವನ್ನು ವೈಜ್ಞಾನಿಕವಾದ ಅನ್ವೇಷಣೆಗಳು ಹಾಗೂ ಅಧ್ಯಯನಗಳು ವಶಪಡಿಸಿದವು. ಮಾಕ್ಯವೆಲ್ಲಿಯೂ ನವೋತ್ಥಾನ ಚರಿತ್ರೆ ರಚನೆಯನ್ನು ಶ್ರೀಮಂತಗೊಳಿಸಿದನು.

ವೈಜ್ಞಾನಿಕವಾಗಿ ಚರಿತ್ರೆ ರಚಿಸುವಂತೆ ಮಾಡುವುದರಲ್ಲಿ ನವೋತ್ಥಾನವು ವಹಿಸಿದ ಪಾತ್ರವನ್ನು ಸ್ಪಷ್ಟಪಡಿಸಿರಿ.

## ನವೋತ್ಥಾನ ಮತ್ತು ವಿಜ್ಞಾನ

> "ಸಾವಿರದ ಆರುನೂರ ಒಂಬತ್ತರಲ್ಲಿ ವಿಜ್ಞಾನವು ಪ್ರಕಾಶಿಸಲು ಪ್ರಾರಂಭವಾಯಿತು. ಪಾದುವಾ ನಗರದ ತನ್ನ ಮನೆಯಲ್ಲಿದ್ದುಕೊಂಡು ಗೆಲಿಲಿಯೋ ಗೆಲಿಲಿ ಸೂರ್ಯನು ನಿಶ್ಚಲನಾಗಿದ್ದಾನೆಂದೂ ಭೂಮಿ ಚಲಿಸುತ್ತಿದೆಯೆಂದೂ ಸಾಧಿಸಲು ಪ್ರಯತ್ನವನ್ನಾರಂಭಿಸಿದನು."

ಇದು ಜರ್ಮನಿಯ ಪ್ರಸಿದ್ಧ ನಾಟಕಗಾರನಾದ ಬೆರ್ತೋಲ್ಟ್ ಬ್ರಹ್ತ್‌ನ 'ಗೆಲಿಲಿಯೋವಿನ ಜೀವನ' ಎಂಬ ನಾಟಕದ ಪ್ರಾರಂಭದ ವಾಕ್ಯವಾಗಿದೆ. ಭೂಮಿಯು ಪ್ರಪಂಚದ ಕೇಂದ್ರ ಎಂಬ ನಂಬಿಕೆಯು ಹದಿನಾರನೇ ಶತಮಾನದವರೆಗೆ ಅಸ್ತಿತ್ವದಲ್ಲಿತ್ತು. ಆದರೆ ಆ ನಂಬಿಕೆಯನ್ನು ನಿರಾಕರಿಸುವ ಗೆಲಿಲಿಯೋವಿನ ಪ್ರಯತ್ನಗಳನ್ನು ಈ ಸಾಲುಗಳು ಸೂಚಿಸುತ್ತವೆ. ಹೀಗೆ ಅಸ್ತಿತ್ವದಲ್ಲಿದ್ದ ಚಿಂತನೆಗಳು ಮತ್ತು ತಾರ್ಕಿಕ ಚಿಂತನೆಗಳ ಮೇಲೆ ನವೋತ್ಥಾನವು ಯಾವೆಲ್ಲ ರೀತಿಯಲ್ಲಿ ಪ್ರಭಾವ ಬೀರಿತು ಎಂಬುದನ್ನು ನಾವು ಚರ್ಚಿಸುವ.

ನವೋತ್ಥಾನವು ಆಧುನಿಕ ವಿಜ್ಞಾನದ ಬೆಳವಣಿಗೆಗೆ ಅಡಿಪಾಯವನ್ನಿತ್ತಿತು. ಜ್ಯೋತಿಷ್ಯ ಶಾಸ್ತ್ರವು ನವೋತ್ಥಾನ ಕಾಲದಲ್ಲಿ ಗಮನಾರ್ಹವಾದ ಪರಿವರ್ತನೆಗಳುಂಟಾದ ಒಂದು ಪ್ರಮುಖ ಕ್ಷೇತ್ರವಾಗಿದೆ. ಭೌತಿಕ ಶಕ್ತಿಗಳು ಪ್ರಪಂಚದ ಚಲನೆಗಳನ್ನು ನಿಯಂತ್ರಿಸುತ್ತವೆ ಎಂಬ ದೃಷ್ಟಿಕೋನವನ್ನು ವಿಜ್ಞಾನಿಗಳು ಮುಂದಿಟ್ಟರು. ಭೂಮಿಯು ಪ್ರಪಂಚದ ಕೇಂದ್ರವೆಂಬ ಟೋಲಮಿಯ ಸಿದ್ಧಾಂತವು ಹದಿನಾರನೇ ಶತಮಾನದವರೆಗೂ ಸವಾಲುಗಳಿಲ್ಲದೆ ಅಸ್ತಿತ್ವದಲ್ಲಿತ್ತು. ಆದರೆ ಪೋಲೆಂಡಿನವನೂ ಪುರೋಹಿತನೂ ಆದ ಕೋಪರ್ನಿಕಸನು ಇದಕ್ಕೆ ಸವಾಲೆಸೆದನು. ಪ್ರಪಂಚದ ಕೇಂದ್ರವು ಭೂಮಿಯಲ್ಲ ಸೂರ್ಯನೆಂದು ಅವನು ವಾದಿಸಿದನು. ಭೂಮಿ ಮತ್ತು ಇತರ ಗ್ರಹಗಳು ಸೂರ್ಯನನ್ನು ಸುತ್ತುತ್ತಿವೆ ಎಂದು ಅವನು ತನ್ನ ನಿರೀಕ್ಷಣೆಗಳಿಂದ ತಿಳಿಸಿದನು.

ಕೋಪರ್ನಿಕಸನ ಕ್ರಾಂತಿಕಾರಕವಾದ ಸಂಶೋಧನೆಗಳನ್ನು ಜೊಹಾನ್ಸ್ ಕೆಪ್ಲರ್ ಮತ್ತು ಗೆಲಿಲಿಯೋ ಗೆಲಿಲಿ ಎಂಬವರು ಮತ್ತಷ್ಟೂ ಸ್ಪಷ್ಟವಾಗಿ ಮಂಡಿಸಿದರು. ಸೂರ್ಯನಿಂದಿರುವ ದೂರಕ್ಕನುಸಾರವಾಗಿ ಗ್ರಹಗಳ ವೇಗದಲ್ಲಿಯೂ ವ್ಯತ್ಯಾಸ ಉಂಟಾಗುತ್ತದೆ ಎಂದು ಕೆಪ್ಲರನು ಕಂಡುಹಿಡಿದನು. ಇದು ಹದಿನೇಳನೇ ಶತಮಾನದ ಅಂತ್ಯದಲ್ಲಿ ಐಸಾಕ್ ನ್ಯೂಟನನು ಗುರುತ್ವಾಕರ್ಷಣೆ ಸಿದ್ಧಾಂತವನ್ನು ಆವಿಷ್ಕರಿಸುವುದಕ್ಕೆ ಕಾರಣವಾಯಿತು. ಗೆಲಿಲಿಯೋ ಗೆಲಿಲಿ ತಾನು ನಿರ್ಮಿಸಿದ ದೂರದರ್ಶಕದ ಸಹಾಯದಿಂದ ಗುರುವಿನ ಉಪಗ್ರಹಗಳು, ಶನಿಗ್ರಹದ ಬಳೆಗಳು ಎಂಬಿವುಗಳನ್ನು ಕಂಡುಹಿಡಿದನು. ಗೆಲಿಲಿಯೋವಿನ ಸಂಶೋಧನೆಗಳು ಕೋಪರ್ನಿಕಸನ ಸಿದ್ಧಾಂತವನ್ನು ದೃಢಪಡಿಸಿದವು.



ಕೋಪರ್ನಿಕಸ್    ಗೆಲಿಲಿಯೋ ಮತ್ತು ದೂರದರ್ಶಕ    ಐಸಾಕ್ ನ್ಯೂಟನ್

ನವೋತ್ಥಾನವು ವೈದ್ಯಕೀಯ ಶಾಸ್ತ್ರದಲ್ಲಿ ಸಾಮಾನ್ಯವಾಗಿಯೂ ಶರೀರ ಶಾಸ್ತ್ರದಲ್ಲಿ ವಿಶೇಷವಾಗಿಯೂ ಸಾಧನೆಗಳನ್ನು ಮಾಡಿತು. ಸ್ವಿಜರ್‌ಲೇಂಡಿನವನಾದ ಪಾರಾಸೆಲ್ಸಸ್ ರೋಗಗಳಿಗಿರುವ ಕಾರಣಗಳನ್ನು ಕಂಡುಹಿಡಿದನಲ್ಲದೆ ಅವುಗಳಿಗಿರುವ ಪ್ರತಿರೋಧಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದನು. ಆಂಡ್ರಿಯಾಸ್ ವೆಸಾಲಿಯಸ್ ಮೃತ ಶರೀರಗಳನ್ನು ಸೀಳಿ ಪರಿಶೀಲಿಸಿದನಲ್ಲದೆ ಅಂಗರಚನಾ ಶಾಸ್ತ್ರಕ್ಕೆ ನೂತನ ಜ್ಞಾನಗಳನ್ನು ಕೊಡುಗೆಗಳಾಗಿ ನೀಡಿದನು.

ಆಧುನಿಕ ಸಮಾಜದ ಬೆಳವಣಿಗೆಗೆ ನವೋತ್ಥಾನ ಕಾಲದ ವಿಜ್ಞಾನವು ನೀಡಿದ ಕೊಡುಗೆಗಳ ಕುರಿತು ಒಂದು ಪ್ಯಾನಲ್ ಚರ್ಚೆಯನ್ನು ಏರ್ಪಡಿಸಿರಿ.

## ಮತನವೀಕರಣ (Reformation)

ನವೋತ್ಥಾನದ ಪ್ರಭಾವವು ಯುರೋಪಿನ ಧಾರ್ಮಿಕ ಕ್ಷೇತ್ರದಲ್ಲೂ ಪ್ರತಿಫಲಿಸಿತು. ಇರಾಸ್ಮಸ್ ನಂತಹ ಮಾನವತಾವಾದಿಗಳು ರಚಿಸಿದ ವಿಡಂಬನಾತ್ಮಕ ಕೃತಿಗಳು ಮತ್ತು ಜೋನ್ ವೈಕ್ಲಿಫ್, ಜೋನ್ ಹಸ್, ಸವೋನರೋಲ ಮೊದಲಾದವರ ವಿಮರ್ಶೆಗಳು ಕೆಥೋಲಿಕ್ ಸಭೆಯಲ್ಲಿದ್ದ ಕೆಲವು ಪ್ರವೃತ್ತಿಗಳು ಮತ್ತು ನಂಬಿಕೆಗಳಿಗೆದುರಾಗಿ ಪ್ರತಿಭಟನೆಗಳು ರೂಪುಗೊಳ್ಳಲು ಬೇಕಾದ ಹಿನ್ನೆಲೆಯನ್ನೊದಗಿಸಿದವು. ಜನರಿಂದ ಧನ ಸಂಗ್ರಹಕ್ಕಾಗಿ ಹೊರಡಿಸಿದ ಪಾಪವಿಮೋಚನ ಪತ್ರ (Indulgence) ದ ಮಾರಾಟವು ಆ ಕಾಲದಲ್ಲಿ ಅತ್ಯಧಿಕ ಪ್ರತಿಭಟನೆಗೆ ಕಾರಣವಾಯಿತು. ಪಾಪವಿಮೋಚನ ಪತ್ರವನ್ನು ಹಣನೀಡಿ ಪಡೆದುಕೊಂಡರೆ ಪಾಪಗಳಿಂದ ಮುಕ್ತಿ ಪಡೆಯಬಹುದೆಂದು ಧಾರ್ಮಿಕ ನಾಯಕತ್ವವು ಜನರಿಗೆ ಆಹ್ವಾನವನ್ನಿತ್ತಿತು. ಪಾಪವಿಮೋಚನ ಪತ್ರದ ಮಾರಾಟದ ಮೂಲಕ ಸಂಗ್ರಹಿಸುವ ಹಣದಿಂದ ಆಸ್ಪತ್ರೆಗಳು, ಕ್ಯಾಥೆಡ್ರಲ್‌ಗಳು ಇತ್ಯಾದಿಗಳನ್ನು ನಿರ್ಮಿಸುವುದು ಕ್ರೈಸ್ತ ಸಭೆಯ ಉದ್ದೇಶವಾಗಿತ್ತು. ಜೊಹಾನ್ ಟೆಟ್ಜೆಲ್ ಎಂಬ ಡೊಮಿನಿಕನ್ ಸನ್ಯಾಸಿಯು ಇದನ್ನು ಮಾರಾಟ ಮಾಡುವುದಕ್ಕಾಗಿ ಜರ್ಮನಿಗೆ ತಲುಪಿದನು. ಪಾಪವಿಮೋಚನ ಪತ್ರದ ಮಾರಾಟವನ್ನು ಪ್ರತಿಭಟಿಸಿ 1517 ರಲ್ಲಿ ಮಾರ್ಟಿನ್ ಲೂಥರ್ ಎಂಬ ಪುರೋಹಿತನು ಜರ್ಮನಿಯ ವಿಟನ್ ಬರ್ಗ್ ದೇವಾಲಯದ ಬಾಗಿಲಿನಲ್ಲಿ ತನ್ನ 95 ಪ್ರಬಂಧಗಳನ್ನು (Ninety five theses) ಅಂಟಿಸಿದನು. ಇದನ್ನು ಪ್ರೊಟೆಸ್ಟಂಟ್ ಚಳುವಳಿಯೆಂಬ ಮತನವೀಕರಣಾ ಸುಧಾರಣೆ ಚಳುವಳಿಯ ಆರಂಭವೆಂದು ಪರಿಗಣಿಸಲಾಗಿದೆ. ಇದರ ಮೂಲಕ ಮಾರ್ಟಿನ್ ಲೂಥರ್ ಕೇವಲ ಒಂದು ಸೈದ್ಧಾಂತಿಕ ಚರ್ಚೆಯ ಗುರಿಯನ್ನು ಮಾತ್ರ ಹೊಂದಿದ್ದರು. ಆದುದರಿಂದಲೇ ಜರ್ಮನ್‌ಗೆ ಬದಲಾಗಿ ಲ್ಯಾಟಿನ್ ಭಾಷೆಯಲ್ಲಿ ಅವನು ತನ್ನ ಪ್ರಬಂಧಗಳನ್ನು ತಯಾರಿಸಿದ್ದನು. ಆದರೆ ಕೆಲವು ಅಪರಿಚಿತರು ಇದನ್ನು ಜರ್ಮನ್ ಗೆ ಅನುವಾದಿಸಿ ಪ್ರಚಾರ ಮಾಡಿದರು. ಅನಂತರ ಅವನು ಚರ್ಚಿನೊಂದಿಗಿನ ಸಂಬಂಧವನ್ನು ತೊರೆದನು.



ಇರಾಸ್ಮಸ್

ಜರ್ಮನಿಯ ವಿಶ್ವವಿದ್ಯಾಲಯಗಳೂ ಮತನವೀಕರಣ ವೇದಿಕೆಯನ್ನು ಸಿದ್ಧಗೊಳಿಸಿದವು. ಮಾರ್ಟಿನ್ ಲೂಥರ್ ಅಧ್ಯಾಪಕನಾಗಿದ್ದ ಜರ್ಮನಿಯ ವಿಟನ್ ಬರ್ಗ್ ವಿಶ್ವವಿದ್ಯಾಲಯವು ಅವನ ಪ್ರೊಟೆಸ್ಟಂಟ್ ಮತ ನವೀಕರಣದ ಕೇಂದ್ರವಾಗಿ ಕಾರ್ಯವೆಸಗಿತು. ಪುರೋಹಿತರ ಮತ್ತು ಧಾರ್ಮಿಕ ನ್ಯಾಯಾಲಯಗಳ ಅಧಿಕಾರವನ್ನು ನಿಯಂತ್ರಿಸಲು ಬಯಸಿದ ಆಡಳಿತಾಧಿಕಾರಿಗಳ ಆಸಕ್ತಿಯು ಮತನವೀಕರಣಕ್ಕೆ ಬಲವನ್ನೊದಗಿಸಿತು. ತೆರಿಗೆ ಸಂಗ್ರಹ ಮತ್ತು ದೇವಾಲಯಗಳ ನೇಮಕಾತಿಗಳಲ್ಲಿ ಪುರೋಹಿತರಿಗಿದ್ದ ಅಧಿಕಾರ ಹಾಗೂ ಸಾರ್ವಭೌಮತ್ವವನ್ನು ಆಡಳಿತಾಧಿಕಾರಿಗಳು ಇಷ್ಟಪಡಲಿಲ್ಲ.



ಮಾರ್ಟಿನ್ ಲೂಥರ್

ಮಾನವೀಯತೆಯ ಪ್ರಭಾವವು ಮತನವೀಕರಣಕ್ಕೆ ಕಾರಣವಾಯಿತು. ಈ ಹೇಳಿಕೆಯನ್ನು ಸ್ಪಷ್ಟಪಡಿಸಿರಿ.

ಜರ್ಮನಿಯಲ್ಲಿ ಆರಂಭವಾದ ಮತನವೀಕರಣವು ಯುರೋಪಿನ ಇತರ ದೇಶಗಳಿಗೂ ವ್ಯಾಪಿಸಿತು. ಸ್ವಿಝರ್ಲೇಂಡಿನಲ್ಲಿ ಉಲ್ ರಿಚ್ ಸ್ವಿಂಗ್ಲಿ, ಜೋನ್ ಕಾಲ್ವಿನ್ ಎಂಬವರೂ ಇಂಗ್ಲೆಂಡಿನಲ್ಲಿ ರಾಜನಾದ ಎಂಟನೇ ಹೆನ್ರಿಯೂ ಮತನವೀಕರಣಕ್ಕೆ ನೇತೃತ್ವ ವಹಿಸಿದರು. ಇಂಗ್ಲೆಂಡಿನಲ್ಲಿ ರಾಜ ಉನ್ನತಾಧಿಕಾರಿಯಾಗಿರುವ ಆಂಗ್ಲಿಕನ್ ಸಭೆಯು ಅಸ್ತಿತ್ವಕ್ಕೆ ಬಂತು. ಇದನ್ನು 'ರಾಷ್ಟ್ರೀಯ ಚರ್ಚ್' (National Church) ಎಂದು ಕರೆದರು.

## ಪ್ರತಿ ಮತನವೀಕರಣ (Counter Reformation)

ಮತನವೀಕರಣದಿಂದಾಗಿ ಕೆಥೋಲಿಕ್ ಚರ್ಚ್ ಸ್ವತಃ ನವೀಕರಣಕ್ಕೆ ಪ್ರಯತ್ನಗಳನ್ನಾರಂಭಿಸಿತು. ಇದನ್ನು ಪ್ರತಿ ಮತನವೀಕರಣ ಎಂದು ಹೇಳುತ್ತಾರೆ. ಇದರ ಅಂಗವಾಗಿ ಉತ್ತರ ಇಟಲಿಯ ಟ್ರೆಂಟ್‌ನಲ್ಲಿ ಸಭಾ ನೇತೃತ್ವದಲ್ಲಿ ಒಂದು ಸಮ್ಮೇಳನ (ಸುನಹಾದೋಸ್) ವನ್ನು ಕರೆದರು. ಧಾರ್ಮಿಕ ಕ್ಷೇತ್ರದಲ್ಲಿರುವ ತಪ್ಪಾದ ಪ್ರವೃತ್ತಿಯನ್ನು ಹೋಗಲಾಡಿಸಿ, ಸುಧಾರಣೆಯೊಂದಿಗೆ ಮುನ್ನಡೆಯಬೇಕೆಂಬುದೇ ಇದರ ಉದ್ದೇಶವಾಗಿತ್ತು. ಇದರ ಪರಿಣಾಮವಾಗಿ ಪಾಪ ವಿಮೋಚನ ಪತ್ರದ ಮಾರಾಟವನ್ನು ನಿಷೇಧಿಸಿದರು. ಭಕ್ತರು ಓದಬಾರದ ಪುಸ್ತಕಗಳ ತಖ್ತೆಯಾದ 'ಇಂಡೆಕ್ಸ್' ಪ್ರಕಟಿಸಿದರು. ಮಧ್ಯಕಾಲದಲ್ಲಿದ್ದ ಧಾರ್ಮಿಕ ನ್ಯಾಯಾಲಯ (Inquisition) ವನ್ನು ಪುನಃ ಸ್ಥಾಪಿಸಿದರು.

ಸ್ಪೈನ್ ನವನಾದ ಇಗ್ನೇಷಿಯಸ್ ಲೊಯೋಲಾ ಎಂಬ ಪುರೋಹಿತನು ಸ್ಥಾಪಿಸಿದ ಸೊಸೈಟಿ ಆಫ್ ಜೀಸಸ್ ಎಂಬ ಸಭೆಯು ಪ್ರತಿ ಮತನವೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿತು. ಇದರ ಸದಸ್ಯರು ಕಟ್ಟುನಿಟ್ಟಾದ ಶಿಸ್ತು ಮತ್ತು ಪ್ರಶ್ನಾತೀತವಾದ ವಿಧೇಯತೆಗೆ ಒಳಪಟ್ಟಿದ್ದರು. ಅವರು ವಿದ್ಯಾಲಯಗಳನ್ನು ಸ್ಥಾಪಿಸಿಯೂ ಧರ್ಮಪ್ರಚಾರ ಕಾರ್ಯಗಳಲ್ಲಿ ತೊಡಗಿಸಿಕೊಂಡೂ ಕೆಥೋಲಿಕ್ ಚರ್ಚ್ ನ ಪ್ರಾಬಲ್ಯವನ್ನು ಗಟ್ಟಿಗೊಳಿಸಲು ಪ್ರಯತ್ನಿಸಿದರು. ಆ ಕಾಲದಲ್ಲಿ ಕೆಥೋಲಿಕ್ ಚರ್ಚಿನಲ್ಲಿದ್ದ ಅನೇಕ ತಪ್ಪು ನಡವಳಿಕೆಗಳನ್ನು ಹೋಗಲಾಡಿಸಲು ಪ್ರತಿ ಮತನವೀಕರಣಕ್ಕೆ ಸಾಧ್ಯವಾಯಿತು. ಪ್ರತಿ ಮತನವೀಕರಣವನ್ನು ಕೆಥೋಲಿಕ್ ಮತ ನವೀಕರಣ (Catholic Reformation) ಎಂದೂ ಕರೆಯುತ್ತಾರೆ.



ಇಗ್ನೇಷಿಯಸ್ ಲೊಯೋಲಾ

ಮತನವೀಕರಣ ಮತ್ತು ಪ್ರತಿ ಮತನವೀಕರಣಗಳೊಳಗಿನ ವ್ಯತ್ಯಾಸವನ್ನು ಕಂಡುಹಿಡಿದು ಬರೆಯಿರಿ.

ಗ್ರೀಕೋ - ರೋಮ್ ಕಾಲದಿಂದ ಮೊದಲ್ಗೊಂಡು ಅಸ್ತಿತ್ವದಲ್ಲಿದ್ದ ಮಾನವೀಯ ವಿಚಾರಗಳ ಅಭಿವೃದ್ಧಿ ಮತ್ತು ವಿಕಾಸದ ಅಭಿವೃದ್ಧಿಯನ್ನು ನವೋತ್ಥಾನವು ಗುರುತಿಸುತ್ತದೆ. ನವೋತ್ಥಾನವು ಪ್ರಾಚೀನ – ಮಧ್ಯಕಾಲಗಳ ಮುಂದುವರಿಕೆಯೂ ಕೂಡಾ ಆಗಿದೆ. ಮಾನವನ ಆವಶ್ಯಕತೆಗಳು, ಸಾಧ್ಯತೆಗಳು ಹಾಗೂ ವಿಶೇಷತೆಗಳಿಗೆ ಮುಖ್ಯ ಸ್ಥಾನವನ್ನೀಯುವ ಮಾನವೀಯತೆಯು ನವೋತ್ಥಾನದ ತಿರುಳಾಗಿದೆ. ಯುರೋಪ್ ಮತ್ತು ಇತರ ಸಮಾಜಗಳೊಂದಿಗಿನ ಪರಸ್ಪರ ಸಂಬಂಧದ ಮೂಲಕವೂ ವ್ಯಾಪಾರ, ವಿನಿಮಯದ ಮೂಲಕವೂ ಬೆಳೆದುಬಂದ ನವೋತ್ಥಾನವು ಜಾಗತಿಕವಾಗಿ ವ್ಯಾಪಿಸಿತು.

'ವಿವಿಧ ವಲಯಗಳಲ್ಲಿ ನವೋತ್ಥಾನದ ಪ್ರಭಾವ' ಎಂಬ ವಿಷಯದಲ್ಲಿ ತರಗತಿಯಲ್ಲೊಂದು ವಿಚಾರಗೋಷ್ಠಿಯನ್ನು ಏರ್ಪಡಿಸಿರಿ. ಪರಿಗಣಿಸಬೇಕಾದ ವಲಯಗಳು:

- ಕಲೆ
- ಸಾಹಿತ್ಯ
- ರಾಜಕೀಯ
- ಚರಿತ್ರೆ
- ವಿಜ್ಞಾನ
- ಧರ್ಮ

## ಮುಂದುವರಿದ ಚಟುವಟಿಕೆಗಳು

- ನವೋತ್ಥಾನ ಕಾಲದ ಕಲೆ, ಸಾಹಿತ್ಯ ಎಂಬೀ ಕ್ಷೇತ್ರಗಳ ಕೊಡುಗೆಗಳನ್ನು ಸೇರಿಸಿ ಒಂದು ಫ್ಲಿಪ್ ಸಂಚಿಕೆ ತಯಾರಿಸಿ, ತರಗತಿಯಲ್ಲಿ ಪ್ರದರ್ಶಿಸಿರಿ.
- ನವೋತ್ಥಾನ ಕಾಲದಲ್ಲಿ ವಿಜ್ಞಾನ ಕ್ಷೇತ್ರದಲ್ಲುಂಟಾದ ಸಂಶೋಧನೆಗಳು ಮತ್ತು ಸಮಕಾಲೀನ ಜಗತ್ತು ಎಂಬ ವಿಷಯದಲ್ಲಿ ಪೋಸ್ಟರ್ ಪ್ರದರ್ಶನವೊಂದನ್ನು ಏರ್ಪಡಿಸಿರಿ.
- ಭಾರತದ ಭಕ್ತಿ ಚಳುವಳಿಯು ಯುರೋಪಿನ ಮತನವೀಕರಣದಂತೆಯೇ ಒಂದು ಪ್ರತಿಭಟನಾ ಚಳುವಳಿಯಾಗಿತ್ತು. ಇವುಗಳೊಳಗಿನ ಸಮಾನತೆ ಮತ್ತು ವ್ಯತ್ಯಾಸಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.
- ನವೋತ್ಥಾನ, ಮತನವೀಕರಣ ಎಂಬಿವುಗಳು ಪ್ರಚಾರಗೊಂಡಿದ್ದ ಯುರೋಪಿನ ಪ್ರಮುಖ ದೇಶಗಳನ್ನು ಜಾಗತಿಕ ಭೂಪಟದಲ್ಲಿ ಗುರುತಿಸಿ ಡಿಜಿಟಲ್ ಅಟ್ಲಸ್ ತಯಾರಿಸಿರಿ.



# 2

# ಸ್ವಾತಂತ್ರ್ಯ ಸಮಾನತೆ ಸಹೋದರತೆ

1789 ಜೂನ್ 20

ಫ್ರಾನ್ಸಿನ ರಾಜಕೀಯ ನಾಡಿಕೇಂದ್ರ ಮತ್ತು ಯುರೋಪಿನ ಪ್ರಧಾನ ನಗರಗಳಲ್ಲೊಂದಾಗಿದ್ದ ಪ್ಯಾರಿಸ್ ಮಳೆಯಿಂದ ತೊಯ್ದುಕೊಂಡಿತ್ತು. ಆದರೆ ಪ್ಯಾರಿಸಿನ ರಾಜಕೀಯ ಸನ್ನಿವೇಶವು ಪೂರ್ಣವಾಗಿ ಹಬೆಯಾಡುತ್ತಿತ್ತು. ಫ್ರೆಂಚ್ ಪಾರ್ಲಿಮೆಂಟಾದ ಎಸ್ಟೇಟ್ ಜನರಲ್‌ನ ಮೂರನೇ ವಿಭಾಗದ ಪ್ರತಿನಿಧಿಗಳಿಗೆ, ಪಾರ್ಲಿಮೆಂಟಿಗೆ ಪ್ರವೇಶವನ್ನು ನಿಷೇಧಿಸಲಾಯಿತು. ಈ ಕಾರಣದಿಂದ ಅವರು ಹತ್ತಿರದ ಟೆನಿಸ್ ಕೋರ್ಟಿನಲ್ಲಿ ಸಭೆ ಸೇರಿದರು. ಫ್ರಾನ್ಸಿನ ಜನತೆಗೆ ಪರಮಾಧಿಕಾರವುಳ್ಳ ಲಿಖಿತ ಸಂವಿಧಾನ ಜಾರಿಗೆ ಬರುವ ವರೆಗೆ ನಾವಿಲ್ಲಿಂದ ಕದಲುವುದಿಲ್ಲ ಎಂದು ಅವರು ಪ್ರತಿಜ್ಞೆ ಮಾಡಿದರು.

ಫ್ರಾನ್ಸ್ ಮತ್ತು ಯುರೋಪಿನ ಅನಂತರದ ಚರಿತ್ರೆಯ ಮೇಲೆ ಗಣನೀಯ ಪ್ರಭಾವ ಬೀರಿದ ಜನಪರ ಚಳುವಳಿಯ ಕುರಿತು ಈ ಪಾಠಭಾಗದಲ್ಲಿ ಚರ್ಚಿಸಲಾಗಿದೆ.

## ಫ್ರಾನ್ಸಿನ ಸ್ವೇಚ್ಛಾಧಿಪತ್ಯ ಆಡಳಿತ ವ್ಯವಸ್ಥೆ

ಫ್ರಾನ್ಸಿನಲ್ಲಿ ಅಸ್ತಿತ್ವದಲ್ಲಿದ್ದ ಸ್ವೇಚ್ಛಾಧಿಪತ್ಯ ಆಡಳಿತ ವ್ಯವಸ್ಥೆಗೆದುರಾಗಿ ಜನಪರ ಹೋರಾಟವು ರೂಪುಗೊಂಡಿತು. ಶತಮಾನಗಳಿಂದಲೇ ಫ್ರಾನ್ಸಿನಲ್ಲಿ ಬೂರ್ಬನ್ ರಾಜವಂಶವು ಆಡಳಿತವನ್ನು ನಡೆಸುತ್ತಿತ್ತು. ಈ ರಾಜವಂಶದ ಆಡಳಿತಗಾರರೆಲ್ಲ ಸ್ವೇಚ್ಛಾಧಿಪತಿಗಳಾಗಿದ್ದರು. ರಾಜಾಧಿಕಾರವು ದೈವದತ್ತವಾಗಿದೆ ಎಂಬುದು ಅವರ ನಂಬಿಕೆಯಾಗಿತ್ತು. ಎಸ್ಟೇಟ್ಸ್ ಜನರಲ್ ಎಂಬ ಹೆಸರಿನಲ್ಲಿ ಒಂದು ಪಾರ್ಲಿಮೆಂಟ್ ಅಸ್ತಿತ್ವದಲ್ಲಿದ್ದರೂ ದೀರ್ಘಕಾಲದಿಂದ ಅದರ ಯಾವುದೇ ಸಭೆಗಳನ್ನು ನಡೆಸದೆ ಬೂರ್ಬನ್ ರಾಜರು ಆಡಳಿತವನ್ನು ನಡೆಸುತ್ತಿದ್ದರು. 1614ರಲ್ಲಿ ಎಸ್ಟೇಟ್ ಜನರಲ್‌ನ ಕೊನೆಯ ಸಭೆಯು ನಡೆದಿತ್ತು.'ನಾನೇ ರಾಷ್ಟ್ರ' ಎಂದು ಸ್ವಯಂ ಘೋಷಿಸಿದ ಹದಿನಾಲ್ಕನೆಯ ಲೂಯಿ ಬೂರ್ಬನ್ ರಾಜರಲ್ಲಿ ಪ್ರಮುಖನಾಗಿದ್ದನು.

### ದೈವಿಕ ಬಲ ಸಿದ್ಧಾಂತ (Divine Right Theory)

ದೈವಿಕ ಬಲ ಸಿದ್ಧಾಂತದ ಪ್ರಕಾರ ರಾಜನು ದೇವರ ಪ್ರತಿನಿಧಿಯಾಗಿದ್ದಾನೆ. ರಾಜರಿಗೆ ಅವರ ಅಧಿಕಾರವು ದೇವರಿಂದ ಲಭಿಸಿದೆ. ಆದುದರಿಂದ ಅವರು ದೇವರಿಗೆ ಕೃತಜ್ಞರಾಗಿರಬೇಕಲ್ಲದೆ ಜನರಿಗಲ್ಲ. ಸ್ವೇಚ್ಛಾಧಿಪತ್ಯ ಆಡಳಿತವನ್ನು ಬೆಂಬಲಿಸುವವರು ಈ ಸಿದ್ಧಾಂತದ ಮೇಲೆ ನಂಬಿಕೆ ಇರಿಸಿದರು.




ಭೂಪಟ 2.1 ಯುರೋಪ್ 1789 ರಲ್ಲಿ

ಭೂಪಟ 2.1 ನ್ನು ನಿರೀಕ್ಷಣೆ ಮಾಡಿ ಫ್ರಾನ್ಸಿನ ಸ್ಥಾನವನ್ನು ಕಂಡುಕೊಳ್ಳಿರಿ. ಫ್ರಾನ್ಸಿನ ನೆರೆಯ ದೇಶಗಳನ್ನು ಕಂಡುಕೊಂಡು ಪಟ್ಟಿ ಮಾಡಿರಿ.

ಹದಿನಾಲ್ಕನೆಯ ಲೂಯಿಯ ನಂತರ ಅಧಿಕಾರಕ್ಕೆ ಬಂದ ಹದಿನೈದನೆಯ ಲೂಯಿಯ ಕಾಲದಲ್ಲಿ ನಡೆದ ಭ್ರಷ್ಟಾಚಾರ, ದುಂದುವೆಚ್ಚ, ನಿರಂತರವಾದ ಯುದ್ಧಗಳು ದೇಶ ಮತ್ತು ಜನತೆಯ ಪರಿಸ್ಥಿತಿಯನ್ನು ಶೋಚನೀಯವಾಗಿಸಿದವು. ತನ್ನ ದುಂದುವೆಚ್ಚಕ್ಕಾಗಿ ಹಣವನ್ನು ಕಂಡುಕೊಳ್ಳಲು ಅವನು ಜನರ ಮೇಲೆ ಹೊಸತಾಗಿ ತೆರಿಗೆಯನ್ನು ಹೇರಿದನು. ಹದಿನೈದನೆಯ ಲೂಯಿಯ ನಂತರ ಹದಿನಾರನೇ ಲೂಯಿ ಅಧಿಕಾರಕ್ಕೆ ಬಂದನು. ಆದರೆ ಆಡಳಿತ ವ್ಯವಹಾರಗಳಲ್ಲಿ ಅವನು ಬೇಕಾದಷ್ಟು ಆಸಕ್ತಿಯನ್ನು ವಹಿಸಿರಲಿಲ್ಲ. ವಿಶ್ವಾಸಾರ್ಹರಾದ ಮಂತ್ರಿಗಳ ಕೈಯಲ್ಲಿ ದೇಶವು ಭದ್ರವಾಗಿರುವುದೆಂದು ಅವನು ನಂಬಿದ್ದನು ಆಡಳಿತ ಕಾರ್ಯಗಳಲ್ಲಿ ರಾಣಿ ಮೇರಿ ಆಂಟೋಯಿನೆಟ್ (Marie Antoinette) ನಿರಂತರ ಹಸ್ತಕ್ಷೇಪ ನಡೆಸುತ್ತಿದ್ದಳು. ರಾಣಿಯ ದುಂದುವೆಚ್ಚ ಮತ್ತು ದಾರಾಳಿತ್ವವನ್ನು ರಾಜನು ಕಂಡೂ ಕಾಣದಂತೆ ನಟಿಸಿದನು. ಇದು ಜನರಲ್ಲಿ ಅಸಂತೃಪ್ತಿಯನ್ನುಂಟುಮಾಡಿತು.

ಫ್ರಾನ್ಸಿನ ಆಡಳಿತಾಧಿಕಾರಿಗಳು ಜನರಿಗೆ ಅಪ್ರಿಯರಾಗಲು ಇದ್ದ ಕಾರಣಗಳನ್ನು ವಿಶ್ಲೇಷಿಸಿ ಪಟ್ಟಿ ಮಾಡಿರಿ.

## ಫ್ರಾನ್ಸಿನ ಸಾಮಾಜಿಕ ವ್ಯವಸ್ಥೆ

“ಪ್ರಭುಗಳು ಯುದ್ಧ ಮಾಡುತ್ತಾರೆ,
ಪುರೋಹಿತರು ಪ್ರಾರ್ಥಿಸುತ್ತಾರೆ
ಜನಸಾಮಾನ್ಯರು ತೆರಿಗೆ ಸಲ್ಲಿಸುತ್ತಾರೆ”

ಇದು ಫ್ರಾನ್ಸಿನ ಜನಸಾಮಾನ್ಯರ ನಡುವೆ ಪ್ರಚಾರದಲ್ಲಿದ್ದ ಒಂದು ನಾಣ್ಣುಡಿಯಾಗಿತ್ತು. ಇದರಿಂದ ಏನನ್ನು ಅರ್ಥಮಾಡಿಕೊಳ್ಳಬಹುದು? ನಾವು ನೋಡುವ.

ಹದಿನೆಂಟನೆಯ ಶತಮಾನದ ಫ್ರೆಂಚ್ ಸಮಾಜವನ್ನು ಮೂರು ವಿಭಾಗಗಳಾಗಿ (ಎಸ್ಟೇಟುಗಳು) ವಿಂಗಡಿಸಲಾಗಿತ್ತು. ಪುರೋಹಿತರು ಒಂದನೇ ಎಸ್ಟೇಟಿನಲ್ಲೂ ಪ್ರಭುಗಳು ಎರಡನೇ ಎಸ್ಟೇಟಿನಲ್ಲೂ ಜನಸಾಮಾನ್ಯರು ಮೂರನೇ ಎಸ್ಟೇಟಿನಲ್ಲೂ ಒಳಗೊಂಡಿದ್ದರು.

## ಪುರೋಹಿತರು (ಒಂದನೆಯ ಎಸ್ಟೇಟು)

ಫ್ರಾನ್ಸಿನ ಕ್ಯಾಥೋಲಿಕ್ ಸಭೆಯು ಪ್ರಬಲ ಮತ್ತು ಸಂಪದ್ಭರಿತವಾಗಿತ್ತು. ಭೂ ಒಡೆತನದ ಬಹುಪಾಲು ಭಾಗವೂ ಕ್ಯಾಥೋಲಿಕ್ ಸಭೆಯ ಅಧೀನದಲ್ಲಿತ್ತು.

ಪುರೋಹಿತರಿಗೆ ಎಲ್ಲಾ ರೀತಿಯ ತೆರಿಗೆಗಳಿಂದ ವಿನಾಯಿತಿಯಿತ್ತು. ಅಲ್ಲದೆ ಅವರಿಗೆ ಸಾಮಾನ್ಯ ಕೃಷಿಕರಿಂದ ತಿಥೆ (Tithe) ಎಂಬ ತೆರಿಗೆಯನ್ನು ಸಂಗ್ರಹಿಸುವ ಅಧಿಕಾರವಿತ್ತು. ಫಸಲಿನ ಹತ್ತರಲ್ಲಿ ಒಂದು ಭಾಗವನ್ನು ತೆರಿಗೆಯಾಗಿ ಕೊಡಬೇಕಾಗಿತ್ತು. ಇದು ಸಾಮಾನ್ಯ ಕೃಷಿಕರಿಗೆ, ಪುರೋಹಿತರ ಮೇಲೆ ದ್ವೇಷ ಉಂಟಾಗಲು ಕಾರಣವಾಯಿತು.

## ಪ್ರಭುಗಳು (ಎರಡನೆಯ ಎಸ್ಟೇಟ್)

ಆಡಳಿತ ವಿಭಾಗದ ಉನ್ನತ ಪದವಿಗಳು, ಸೈನ್ಯದ ಉನ್ನತ ಪದವಿಗಳು ಪ್ರಭುಗಳ ಕೈವಶದಲ್ಲಿದ್ದವು. ಅಲ್ಲದೆ ಇವರಿಗೆ ಭೂಮಿಯ ಒಡೆತನವೂ ಇತ್ತು. ಆಡಂಬರದ ಜೀವನವನ್ನು ನಡೆಸುತ್ತಿದ್ದ ಇವರು ಸಾಮಾನ್ಯ ಜನರಿಂದ ವಿವಿಧ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರು.

1749ರ ಕಾನೂನಿನಂತೆ ಎಲ್ಲಾ ವಿಭಾಗದ ಜನರು ತಮ್ಮ ಆದಾಯದ ಇಪ್ಪತ್ತನೆಯ ಒಂದು ಭಾಗವನ್ನು ತೆರಿಗೆಯಾಗಿ ಸರಕಾರಕ್ಕೆ ನೇರವಾಗಿ ಸಲ್ಲಿಸಬೇಕಾಗಿತ್ತು. ಈ ತೆರಿಗೆಯನ್ನು ವಿಂಗ್ಟೈಮ್ (Vingtieme) ಎಂದು ಕರೆಯುತ್ತಿದ್ದರು. ಮೊದಲ ಎರಡು ವಿಭಾಗಗಳು (ಪುರೋಹಿತರು ಮತ್ತು ಪ್ರಭುಗಳು) ಸಣ್ಣ ಪ್ರಮಾಣದ ಮೊತ್ತವನ್ನು ರಾಜನಿಗೆ ನೀಡಿ ಈ ತೆರಿಗೆಯಿಂದ ವಿನಾಯಿತಿಯನ್ನು ಪಡೆದಿದ್ದರು.

ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ರಾಜಾಡಾಳಿತವನ್ನು ಎದುರಿಸುವುದಕ್ಕೂ ಪುರೋಹಿತರು ಮತ್ತು ಪ್ರಭುಗಳು ಹಿಂಜರಿಯುತ್ತಿರಲಿಲ್ಲ.

### ಪ್ರಭುಗಳು ಜನಸಾಮಾನ್ಯರನ್ನು ಶೋಷಣೆಗೆ ಒಳಪಡಿಸಿದ ವಿವಿಧ ವಿಧಾನಗಳು

- ಕೋವಿ (Corvee) : ಒಂದು ವರ್ಷದಲ್ಲಿ ಜನಸಾಮಾನ್ಯರಿಂದ ಮೂರು ನಾಲ್ಕು ದಿವಸ ವೇತನ ರಹಿತವಾಗಿ ಕೆಲಸ ಮಾಡಿಸುವ ಹಕ್ಕು.
- ಬೆನಾಲಿಟಿ (Banalite's) : ಮದ್ಯ ತಯಾರಿಯ ಏಕಸ್ವಾಮಿತ್ವದಿಂದ ಲಭಿಸುವ ಅಧಿಕ ತೆರಿಗೆ ಮತ್ತು ದ್ರಾಕ್ಷಾರಸ, ರೊಟ್ಟಿ ಮೊದಲಾದವುಗಳ ನಿರ್ಮಾಣಕ್ಕಾಗಿ ಜಮೀನ್ದಾರರ ಒಡೆತನದಲ್ಲಿರುವ ಸೌಲಭ್ಯಗಳನ್ನು ಕಡ್ಡಾಯವಾಗಿ ಉಪಯೋಗಿಸಿದ್ದಕ್ಕೆ ಕೊಡಬೇಕಾದ ಬಾಡಿಗೆಯು ಇದರಲ್ಲಿ ಒಳಪಡುತ್ತದೆ.
- ಬನ್‌ವಿನ್ : ತಮ್ಮ ಪ್ರದೇಶದಲ್ಲಿ ಉತ್ಪಾದಿಸಿದ ಮದ್ಯದ ಮೇಲಿನ ಒಡೆತನ ತೆರಿಗೆ.
- ಪೀಯೇಷ್ : ಸೇತುವೆ, ರಸ್ತೆಗಳನ್ನು ಬಳಸಿದ್ದಕ್ಕಾಗಿ ಕೊಡಬೇಕಾದ ಸುಂಕ.
- ಟೆರಾಜ್ : ಕೊಯ್ಲಿನ ಕಾಲದಲ್ಲಿ ಕೃಷಿಕರಿಂದ ಸಂಗ್ರಹಿಸುವ ವಿಶೇಷ ತೆರಿಗೆ.

CDM Ketelby, A History of Modern Times from 1789

## ಜನಸಾಮಾನ್ಯರು (ಮೂರನೆಯ ಎಸ್ಟೇಟ್)




'ಉನ್ನತ ವಿಭಾಗದವರು ಅನುಭವಿಸಿದ ವಿಶೇಷ ಅನುಕೂಲತೆಗಳಿಂದಾಗಿ ತುಳಿತಕ್ಕೊಳಗಾದ ಜನಸಾಮಾನ್ಯರು'

ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸಿನಲ್ಲಿ ಜೀವಿಸಿದ್ದ ಜನಸಾಮಾನ್ಯರ ಸ್ಥಿತಿಯನ್ನು ಮೇಲಿನ ಚಿತ್ರದಲ್ಲಿ ಬಿಂಬಿಸಲಾಗಿದೆ. ಫ್ರಾನ್ಸಿನ ಮೂರನೆಯ ಎಸ್ಟೇಟ್‌ನಲ್ಲಿ ಮಧ್ಯಮ ವರ್ಗ, ಕೂಲಿ ಕಾರ್ಮಿಕರು, ಕೃಷಿಕರು ಒಳಗೊಂಡಿದ್ದರು. ಇವರನ್ನು ಕೋಮನ್ಸ್ (ಜನಸಾಮಾನ್ಯರು) ಎಂದು ಕರೆಯುತ್ತಿದ್ದರು. ಜನಸಂಖ್ಯೆಯ ಬಹುಪಾಲನ್ನು ಹೊಂದಿದ್ದ ಮೂರನೆಯ ಎಸ್ಟೇಟಿನ ಹೆಚ್ಚಿನ ಜನರ ಜೀವನವೂ ಬಡತನದಿಂದ ಕೂಡಿತ್ತು. ತಾವು ಕಷ್ಟಪಟ್ಟು ಬೆಳೆಸಿದ ಕೃಷಿಯ ಒಂದು ಭಾಗ ಮಾತ್ರವೇ ಇವರಿಗೆ ಲಭಿಸುತ್ತಿತ್ತು. ಇವರು ರಾಜರಿಗೆ, ಇಗರ್ಜಿಗೆ, ಪ್ರಭುಗಳಿಗೆ ವಿಭಿನ್ನ ತೆರಿಗೆಗಳನ್ನು ಕೊಡಲು ನಿರ್ಬಂಧಿತರಾಗಿದ್ದರು. ಅಲ್ಲದೆ ಪ್ರತಿಫಲವಿಲ್ಲದ ಅನೇಕ ಕಡ್ಡಾಯದ ಸೇವೆಗಳನ್ನೂ ಇವರು ಮಾಡಬೇಕಿತ್ತು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ:

- ಅಗತ್ಯದ ಸಂದರ್ಭಗಳಲ್ಲಿ ಸೈನಿಕ ಸೇವೆಯನ್ನು ನೀಡುವುದು.
- ಸಾರ್ವಜನಿಕ ರಸ್ತೆ, ಜಲಮಾರ್ಗ, ಸೇತುವೆಗಳ ನಿರ್ಮಾಣದ ಸಂದರ್ಭಗಳಲ್ಲಿ ಉಚಿತವಾಗಿ ಕೆಲಸವನ್ನು ನಿರ್ವಹಿಸುವುದು.

ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸಿನಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ವ್ಯವಸ್ಥೆಯನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಿರಿ.

**ಗಾಬೆಲ್ (Gabelle)**

ಇದು ಹದಿಮೂರನೆಯ ಶತಮಾನದಿಂದ ಎಲ್ಲಾ ಉತ್ಪನ್ನಗಳ ಮೇಲೆ ಹೇರಿದ ತೆರಿಗೆಯಾಗಿತ್ತು. ಹದಿನೈದನೆಯ ಶತಮಾನದಿಂದ ಉಪ್ಪಿನ ಮೇಲೆ ಮಾತ್ರ ಈ ತೆರಿಗೆಯನ್ನು ಸೀಮಿತಗೊಳಿಸಲಾಯಿತು. ಇದೊಂದು ಜನವಿರೋಧಿಯಾದ ತೆರಿಗೆಯಾಗಿತ್ತು.

## ಮಧ್ಯಮ ವರ್ಗದ ಉದಯ

ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸಿನ ಸಮಾಜದಲ್ಲಿ ಮಧ್ಯಮ ವರ್ಗವೊಂದು ಉದಯವಾಯಿತು. ಈ ಕಾಲದಲ್ಲಿ ಫ್ರಾನ್ಸಿನ ಕೃಷಿ ಮತ್ತು ಕೈಗಾರಿಕಾ ರಂಗದಲ್ಲುಂಟಾದ ಪ್ರಗತಿಯು ಮಧ್ಯಮ ವರ್ಗದ ಉದಯಕ್ಕೆ ಕಾರಣವಾಯಿತು. ಕೃಷಿ ಮತ್ತು ಕೈಗಾರಿಕಾ ರಂಗದಲ್ಲುಂಟಾದ ಪ್ರಗತಿಯಿಂದ ಹೊಸ ನಗರಗಳು ಬೆಳೆದು ಬಂದವು. ನಗರಗಳಲ್ಲಿ ಹೊಸತಾಗಿ ರೂಪುಗೊಂಡ ಉದ್ಯೋಗ ಸಾಧ್ಯತೆಗಳನ್ನು ಉಪಯೋಗಿಸಿಕೊಂಡವರು ಆರ್ಥಿಕವಾಗಿ ಸಬಲರಾಗುವುದರೊಂದಿಗೆ ಮಧ್ಯಮ ವರ್ಗದ ಭಾಗವಾಗಿ ಬದಲಾದರು.

ಆಂತರಿಕ ವಾಣಿಜ್ಯವೂ ವಸಾಹತುಗಳೊಂದಿಗಿನ ವ್ಯಾಪಾರವೂ ಫ್ರಾನ್ಸಿನಲ್ಲಿ ಕೈಗಾರಿಕೆಗಳಲ್ಲಿ ತೊಡಗಿಸಿಕೊಂಡವರನ್ನು ಶ್ರೀಮಂತರನ್ನಾಗಿಸಿತು. ಪ್ರಧಾನ ಬಂದರುಗಳು ಮತ್ತು ಪಟ್ಟಣಗಳು ಈ ಶ್ರೀಮಂತರ ನಿಯಂತ್ರಣದಲ್ಲಾಯಿತು. ಇವರೂ ಮಧ್ಯಮ ವರ್ಗದ ಭಾಗವಾಗಿದ್ದರು. ಹೀಗೆ ರೂಪುಗೊಂಡ ಮಧ್ಯಮ ವರ್ಗವು ಡಾಕ್ಟರ್‌ಗಳು, ಕಾನೂನು ತಜ್ಞರು, ಬ್ಯಾಂಕರ್‌ಗಳು ಎಂಬಿವರನ್ನು ಒಳಗೊಂಡಿತ್ತು. ಈ ಮಧ್ಯಮ ವರ್ಗವೂ ಜನಸಾಮಾನ್ಯರಂತೆ ಆಡಳಿತ ವರ್ಗಕ್ಕೂ ಪ್ರಭುಗಳಿಗೂ ತೆರಿಗೆಯನ್ನು ಸಲ್ಲಿಸಬೇಕಾಗಿತ್ತು. ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮುಂದಿದ್ದರೂ ಅವರಿಗೆ ಆಡಳಿತ ವ್ಯವಹಾರಗಳಲ್ಲಿಯೋ ಸೈನ್ಯದಲ್ಲಿಯೋ ಅರ್ಹವಾದ ಪದವಿ ಅಥವಾ ಅಧಿಕಾರ ಲಭಿಸಲಿಲ್ಲ. ಇದು ಮಧ್ಯಮ ವರ್ಗದ ಅಸಂತೃಪ್ತಿಗೆ ಕಾರಣವಾಯಿತು.

ಫ್ರಾನ್ಸಿನ ಸಮಾಜದಲ್ಲಿ ಉದಯವಾದ ಮಧ್ಯಮ ವರ್ಗದ ಬೆಳವಣಿಗೆ ಮತ್ತು ಅಸಂತೃಪ್ತಿಯು ಫ್ರಾನ್ಸಿನ ಕ್ರಾಂತಿಯ ಮೇಲೆ ನಿರ್ಣಾಯಕ ಪ್ರಭಾವವನ್ನು ಬೀರಿತು. ಈ ಹೇಳಿಕೆಯನ್ನು ಸಮರ್ಥಿಸಿ ಟಿಪ್ಪಣಿ ತಯಾರಿಸಿರಿ.

### ವಿಲ್ & ಏರಿಯಲ್ ಡ್ಯುರಾಂಟ್
### (Will and Ariel Durant)




ಪ್ರಸಿದ್ಧ ಚರಿತ್ರೆಗಾರರಾದ ವಿಲ್ ಡ್ಯೂರಾಂಟ್ ಮತ್ತು ಏರಿಯಲ್ ಡ್ಯುರಾಂಟ್ ಫ್ರಾನ್ಸಿನ ಕ್ರಾಂತಿಯಲ್ಲಿ ಮಧ್ಯಮ ವರ್ಗದ ಪಾತ್ರದ ಕುರಿತು ಹೀಗೆ ಹೇಳುತ್ತಾರೆ.

*'ಅಸಂತೃಪ್ತರಾದ ಕೃಷಿಕ ವರ್ಗವನ್ನು ಅಸ್ತ್ರವಾಗಿಸಿಕೊಂಡು, ಪುರೋಹಿತಶಾಹಿತ್ವವನ್ನು ಮತ್ತು ಪ್ರಭುತ್ವವನ್ನು ಬುಡ ಮೇಲು ಮಾಡಿಕೊಂಡು, ಅಸಂತೃಪ್ತ ನಗರವಾಸಿಗಳನ್ನು ಉಪಯೋಗಿಸಿಕೊಂಡು ರಾಜರ ಸೈನ್ಯವನ್ನು ನಿರ್ವೀರ್ಯಗೊಳಿಸಿದ ಬೂರ್ಷ್ವಾಸಿಗಳ (ಮಧ್ಯಮ ವರ್ಗ) ಕಾರ್ಯ ಚಟುವಟಿಕೆಯು ಫ್ರಾನ್ಸಿನ ಕ್ರಾಂತಿಯ ತಿರುಳಾಗಿತ್ತು.'*

(Will and Ariel Durant – Story of Civilisation–VOL-X Rousseau and Revolution Simon and Schuster New York 1967)

*(ಸ್ವತಂತ್ರ ಅನುವಾದ)*

ಹದಿನೆಂಟನೆಯ ಶತಮಾನದ ಫ್ರಾನ್ಸಿನ ಸಮಾಜದ ವಿಶೇಷತೆಗಳನ್ನು ಕಂಡುಕೊಂಡು ನೀಡಿರುವ ಡಯಾಗ್ರಾಂ ಪೂರ್ತಿಗೊಳಿಸಿರಿ.




## ಆರ್ಥಿಕ ಬಿಕ್ಕಟ್ಟು

1770ರ ಹೊತ್ತಿಗೆ ಫ್ರಾನ್ಸಿನ ಕೃಷಿಕ್ಷೇತ್ರವು ಕಠಿಣವಾದ ಬಿಕ್ಕಟ್ಟನ್ನು ಎದುರಿಸಿತು. ಉತ್ಪಾದನೆಯ ಕುಸಿತವು ಇದಕ್ಕೆ ಕಾರಣವಾಗಿತ್ತು. ಇದರಿಂದ ಧಾನ್ಯ ಮತ್ತು ರೊಟ್ಟಿಯ ಬೆಲೆಯು ಹೆಚ್ಚಿತು. 1730 ರಿಂದ 1789ರ ನಡುವಿನ ಕಾಲಗಳಲ್ಲಿ ಧಾನ್ಯದ ಬೆಲೆಯಲ್ಲಿ ಶೇಕಡಾ 60 ರಷ್ಟು ಹೆಚ್ಚಳ ಉಂಟಾಯಿತು. ಆದರೆ ಕಾರ್ಮಿಕರ ವೇತನದ ಹೆಚ್ಚಳವು ಶೇಕಡಾ 22 ರಷ್ಟು ಮಾತ್ರವಾಗಿತ್ತು. ಮೇವಿನ ಹುಲ್ಲಿನ ಕ್ಷಾಮವು ಜಾನುವಾರುಸಂಪತ್ತು ಕುಸಿಯಲು ಕಾರಣವಾಯಿತು. ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಜನರನ್ನು ಈ ಸಮಸ್ಯೆಯು ಪ್ರತಿಕೂಲವಾಗಿ ಬಾಧಿಸಿತು.

ಬ್ರಿಟನಿನೊಂದಿಗೆ ಫ್ರಾನ್ಸ್ ಮಾಡಿದ ವ್ಯಾಪಾರ ಒಪ್ಪಂದದಂತೆ, ಬ್ರಿಟನಿನಿಂದ ಬರುವ ಉತ್ಪನ್ನಗಳ ಮೇಲಿನ ಆಮದು ತೆರಿಗೆಯಲ್ಲಿ ಹೆಚ್ಚಿನ ಕಡಿತ ಉಂಟಾಯಿತು. ಇದರಿಂದಾಗಿ ಫ್ರಾನ್ಸಿನ ಮಾರುಕಟ್ಟೆಯಲ್ಲಿ ಬ್ರಿಟಿಷ್ ಉತ್ಪನ್ನಗಳು ಬಂದು ತುಂಬುವ ಮೂಲಕ ಫ್ರಾನ್ಸಿನ ಕರಕುಶಲ ಕೆಲಸಗಾರರು ನಿರುದ್ಯೋಗಿಗಳಾದರು. ಪರಿಣಾಮವಾಗಿ ಅಸಂತೃಪ್ತ ಕೃಷಿಕರು, ಕರಕುಶಲ ಕೆಲಸಗಾರರು, ಇತರ ಕಾರ್ಮಿಕರು ಆಡಳಿತ ಒಕ್ಕೂಟದ ವಿರುದ್ಧ ಹೋರಾಟಕ್ಕೆ ಅಣಿಯಾದರು. ಫ್ರಾನ್ಸಿನ ಆರ್ಥಿಕ ಬಿಕ್ಕಟ್ಟನ್ನು ನಿಯಂತ್ರಿಸುವುದಕ್ಕಾಗಿ ಹದಿನಾರನೆಯ

ಲೂಯಿ ಬ್ಯಾಂಕರ್‌ಗಳಿಂದ ಬೃಹತ್ ಮೊತ್ತದ ಹಣವನ್ನು ಸಾಲವಾಗಿ ತೆಗೆದುಕೊಂಡನು. ಈ ಸಾಲಗಳಿಗೆ ಬದಲಾಗಿ ಫ್ರಾನ್ಸಿನ ಸರಕಾರವು ಬ್ಯಾಂಕರ್‌ಗಳಿಗೆ ಬಾಂಡ್‌ಗಳನ್ನು ನೀಡಿತು. ಆದರೆ ಫ್ರಾನ್ಸಿನ ಖಜಾನೆಯು ಶೂನ್ಯವಾಗಿರುವುದನ್ನು ಮನಗಂಡ ಬ್ಯಾಂಕರ್‌ಗಳು ಸಾಲವನ್ನು ಕೊಡಲು ಹಿಂಜರಿದರು. ದೇಶದ ಎಲ್ಲ ವರ್ಗದ ಜನರಿಂದ ಒಂದೇ ರೀತಿಯ ತೆರಿಗೆಯನ್ನು ಸಂಗ್ರಹಿಸಬೇಕೆಂಬ ಬೇಡಿಕೆಯನ್ನು ಬ್ಯಾಂಕರ್‌ಗಳು ಮುಂದಿಟ್ಟರು. ಫ್ರಾನ್ಸಿನ ಸರಕಾರದ ಅಸಮಾನತೆಯಿಂದ ಕೂಡಿದ ತೆರಿಗೆ ನೀತಿಯು ಬ್ಯಾಂಕರ್‌ಗಳನ್ನು ಒಳಗೊಂಡ ಮಧ್ಯಮ ವರ್ಗವು ಆಡಳಿತ ಒಕ್ಕೂಟವನ್ನು ವಿರೋಧಿಸಲು ಕಾರಣವಾಯಿತು.

## ಚಿಂತಕರ ಪ್ರಭಾವ



ವಾಲ್ಟೇರ್



ರೂಸೋ

ಫ್ರಾನ್ಸಿನ ಚಿಂತಕರು ಮತ್ತು ಅವರ ಆಶಯಗಳು ಫ್ರಾನ್ಸಿನ ಜನತೆಗೆ ಅವರು ಅನುಭವಿಸುವ ಸಂಕಷ್ಟಗಳನ್ನು ಅರ್ಥೈಸಲು ಮತ್ತು ಅನ್ಯಾಯದ ವಿರುದ್ಧ ಪ್ರತಿಕ್ರಿಯಿಸಲು ಪ್ರೇರೇಪಣೆ ನೀಡಿತು. ಈ ರೀತಿಯಲ್ಲಿ ಫ್ರಾನ್ಸಿನ ಜನತೆಯ ಮೇಲೆ ಪ್ರಭಾವ ಬೀರಿದ ಕೆಲವೊಂದು ಚಿಂತಕರ ಬಗ್ಗೆ ತಿಳಿದುಕೊಳ್ಳುವ.

### ವಾಲ್ಟೇರ್

ಚರಿತ್ರೆಗಾರನೂ ವಿಡಂಬನಾ ಸಾಹಿತಿಯೂ ಆಗಿದ್ದ ವಾಲ್ಟೇರ್ ಓರ್ವ ಮಾನವಸ್ನೇಹಿಯೂ ಆಗಿದ್ದನು. ಅವನೊಬ್ಬ ನಾಸ್ತಿಕನಾಗಿರಲಿಲ್ಲವಾದರೂ ಪುರೋಹಿತ ವರ್ಗವನ್ನು ನಿರಂತರ ತನ್ನ ಲೇಖನಗಳ ಮೂಲಕ ಟೀಕಿಸುತ್ತಿದ್ದನು. ತನ್ನ ನಿಲುವು ಮತ್ತು ರಚನೆಗಳ ಕಾರಣಗಳಿಂದಾಗಿ ಅವನನ್ನು ಫ್ರಾನ್ಸಿನಿಂದ ಹೊರದಬ್ಬಲಾಯಿತು.

### ರೂಸ್ಸೋ

ರೂಸ್ಸೋ ಓರ್ವ ಶೈಕ್ಷಣಿಕ ಚಿಂತಕನೂ, ರಾಷ್ಟ್ರ ಮೀಮಾಂಸಕನೂ ಆಗಿದ್ದನು. ಅವನ ಪ್ರಸಿದ್ಧ ಕೃತಿ 'ಸಾಮಾಜಿಕ ಒಪ್ಪಂದ' (The Social Contract) ವು ವ್ಯಕ್ತಿ ಮತ್ತು ರಾಷ್ಟ್ರದ ನಡುವಿನ ಸಂಬಂಧವನ್ನು ನಿರ್ವಚಿಸಿತು. "ಜನರು ತಮ್ಮ ಕ್ಷೇಮ ಮತ್ತು ಅಭಿವೃದ್ಧಿಗಾಗಿ ಮಾಡಿಕೊಂಡ ಒಂದು ಒಪ್ಪಂದದ ಪ್ರಕಾರ ರಾಜನನ್ನು ಸೃಷ್ಟಿಸಿದರು. ಈಗ ಈ ಜವಾಬ್ದಾರಿಯನ್ನು ರಾಜನು ಉಲ್ಲಂಘಿಸಿರುತ್ತಾನೆ. ಆದುದರಿಂದ ರಾಜನಿಗೆ ದೇಶವನ್ನು ಆಳುವ ಅಧಿಕಾರವು ನಷ್ಟವಾಗಿದೆ" ಎಂದು ರೂಸ್ಸೋ ಅಭಿಪ್ರಾಯಪಟ್ಟನು. "ಉತ್ತಮ ಕಾನೂನುಗಳು ಉತ್ತಮ ಪೌರರನ್ನು ಸೃಷ್ಟಿಸುತ್ತದೆ" ಎಂಬುದು ಅವನ ವಾದವಾಗಿತ್ತು. ಫ್ರಾನ್ಸಿನಲ್ಲಿ ಅಸ್ತಿತ್ವದಲ್ಲಿದ್ದ ಅಧಿಕಾರ ರಚನೆಯನ್ನು ರೂಸ್ಸೋ ವಿರೋಧಿಸಿದನು. ರೂಸ್ಸೋನ ಆಶಯಗಳು ಪ್ರಕೃತಿ ವಾದವನ್ನು ಆಧರಿಸಿರುವುದಾಗಿತ್ತು. "ಮಾನವನು ಸ್ವತಂತ್ರವಾಗಿ ಜನಿಸುವನು. ಆದರೆ ಅವನು

ಎಲ್ಲಾ ಕಡೆಯಲ್ಲಿ ಸಂಕೋಲೆಯಿಂದ ಬಂಧಿಯಾಗಿರುವನು" ಎನ್ನುವುದು ರೂಸ್ಸೋನ ಅಭಿಪ್ರಾಯವಾಗಿತ್ತು. ರೂಸ್ಸೋನ ಕೃತಿಗಳು ಫ್ರಾನ್ಸಿನ ಕ್ರಾಂತಿಗೆ ಪ್ರಚೋದನೆಯಾದವು.

## ಮೋಂಟೆಸ್ಕ್ಯೂ

ಕ್ರೈಸ್ತ ಸಭೆಯ ತಪ್ಪುಗಳನ್ನು ಮತ್ತು ದೇಶದ ಸ್ವೇಚ್ಛಾಧಿಪತ್ಯ ಆಡಳಿತವನ್ನು ಮೋಂಟೆಸ್ಕ್ಯೂ ಟೀಕಿಸಿದನು. ನಿಯಂತ್ರಿತ ರಾಜಾಡಳಿತವನ್ನು ಬೆಂಬಲಿಸಿದ ಅವನು ಜನರಿಗೆ ತಮ್ಮ ಸ್ವಾತಂತ್ರ್ಯವನ್ನು ಖಚಿತಪಡಿಸುವುದಕ್ಕಾಗಿ ಸರಕಾರದ ಅಧಿಕಾರವನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂದು ವಿಭಜಿಸಬೇಕೆಂದು ಪ್ರಸ್ತಾಪಿಸಿದನು. ಅವನ ಪ್ರಸಿದ್ಧ ಗ್ರಂಥವಾದ 'ಕಾನೂನಿನ ಆತ್ಮ' (The Spirit of Laws) ದಲ್ಲಿ ಸರಕಾರದ ತತ್ವಗಳನ್ನು, ಕಾನೂನು ಮತ್ತು ಸಂವಿಧಾನದ ಪ್ರಾಧಾನ್ಯವನ್ನು ವಿಶ್ಲೇಷಿಸಲಾಗಿದೆ.



ಮೋಂಟೆಸ್ಕ್ಯೂ

ಬ್ರಿಟಿಷ್ ಚಿಂತಕನಾದ ಜೋನ್ ಲಾಕ್ ನ ಆಶಯಗಳೂ ಫ್ರಾನ್ಸಿನ ಕ್ರಾಂತಿಯ ಮೇಲೆ ಪ್ರಭಾವ ಬೀರಿದೆ. ಅವನು ತನ್ನ ಪ್ರಸಿದ್ಧ ಗ್ರಂಥವಾದ 'ಟು ಟ್ರೀಟಿಸಸ್ ಆಫ್ ಗವರ್ನ್ ಮೆಂಟ್' (Two Treatises of Government) ನಲ್ಲಿ ರಾಜರ ದೈವಿಕ ಬಲ ಹಕ್ಕು ಮತ್ತು ಅವರ ಸ್ವೇಚ್ಛಾಧಿಪತ್ಯವನ್ನು ನಿರಾಕರಿಸಿದನು. ಆರ್ಥಿಕ ಪಂಡಿತರಾದ ಫಿಸಿಯೋಕ್ರಾಟ್ ಗಳು ಫ್ರಾನ್ಸಿನ ಜನರ ಮೇಲೆ ಪ್ರಭಾವವನ್ನು ಬೀರಿದರು. ಟರ್ಗೋ (Turgot), ನೆಕ್ಕರ್ (Necker) ಇವರಲ್ಲಿ ಪ್ರಮುಖರು. ಹದಿನಾರನೆಯ ಲೂಯಿಯ ಸಲಹೆಗಾರರಲ್ಲಿ ಒಬ್ಬನಾಗಿದ್ದ ಟರ್ಗೋ ಫ್ರಾನ್ಸಿನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ಅನೇಕ ಯೋಜನೆಗಳನ್ನು ಆವಿಷ್ಕರಿಸಿದನು. ಇವನ ಆಶಯಗಳಲ್ಲಿ ಮಧ್ಯಮ ವರ್ಗದ ಆಸಕ್ತಿ ಮತ್ತು ಆರ್ಥಿಕ ನೀತಿಗಳು ಪ್ರತಿಫಲಿಸಿದವು. ಕೃಷಿಗೆ ಪ್ರೋತ್ಸಾಹವನ್ನು ನೀಡುವುದು, ಆಹಾರ ಧಾನ್ಯಗಳ ವ್ಯಾಪಾರ ಸ್ವಾತಂತ್ರ್ಯವನ್ನು ಕೃಷಿಕರಿಗೆ ನೀಡುವುದು ಇತ್ಯಾದಿ ಯೋಜನೆಗಳು ಅವುಗಳಲ್ಲಿ ಪ್ರಮುಖವಾಗಿದ್ದವು.

ಈ ಸುಧಾರಣೆಗಳು ಫ್ರಾನ್ಸಿನ ಆರ್ಥಿಕ ಸ್ಥಿತಿಯನ್ನು ಒಂದು ಹಂತದವರೆಗೆ ಉತ್ತಮಪಡಿಸಿತು. ಆದರೆ ಮೇರಿ ಆಂಟೋಯಿನೆಟ್ ತನ್ನ ದುಂದುವೆಚ್ಚಕ್ಕೆ ಕಡಿವಾಣ ಹಾಕದ್ದು ಟರ್ಗೋ ಮತ್ತು ರಾಣಿಯ ನಡುವಿನ ಶತ್ರುತ್ವಕ್ಕೆ ಕಾರಣವಾಯಿತು. ರಾಣಿಯ ವಿರೋಧದ ಕಾರಣದಿಂದ ಹದಿನಾರನೆಯ ಲೂಯಿ ಟರ್ಗೋನನ್ನು ಮಂತ್ರಿಸ್ಥಾನದಿಂದ ಉಚ್ಚಾಟಿಸಿದನು. ಹೊಸ ಸಲಹೆಗಾರನಾಗಿ ನೇಮಕವಾದ ನೆಕ್ಕರ್, ಟರ್ಗೋ ಪ್ರಾರಂಭಿಸಿದ ಸುಧಾರಣೆಗಳನ್ನು

### ಸಲೋನುಗಳು ಮತ್ತು ಕಾಫಿಹೌಸ್‌ಗಳು

ಫ್ರಾನ್ಸಿನಲ್ಲಿ ಸಲೋನುಗಳು ಮತ್ತು ಕಾಫಿಹೌಸ್ ಗಳು ರಾಜಕೀಯ ಚರ್ಚೆಗಳಿಗೆ ಮತ್ತು ಆಶಯ ವಿನಿಮಯಕ್ಕಿರುವ ಪ್ರಧಾನ ಕೇಂದ್ರಗಳಾಗಿದ್ದುವು. ವಿದ್ಯಾಸಂಪನ್ನರೂ ಪ್ರಬುದ್ಧರೂ ಆದ ಮಹಿಳೆಯರೂ ತಮ್ಮ ಮನೆಗಳಲ್ಲಿ ಸಲೋನುಗಳನ್ನು ಸಂಘಟಿಸಿದ್ದರು. ಈ ಸಲೋನುಗಳಲ್ಲಿ ದಾರ್ಶನಿಕರು, ಲೇಖಕರು, ಚಿಂತಕರು, ಸಮಾಜ ಸುಧಾರಕರ ಆಶಯಗಳ ಕುರಿತು ಚರ್ಚೆಗಳು ನಡೆಯುತ್ತಿದ್ದವು. ಈ ಚರ್ಚೆಗಳು ಕ್ರಾಂತಿಯ ಆಶಯಗಳಿಗೆ ಪ್ರಚೋದನಕಾರಿಯಾದವು. ಅದೇ ರೀತಿಯಲ್ಲಿ ಕಾಫಿಹೌಸ್ ಗಳು ಜನಸಾಮಾನ್ಯರು, ಪತ್ರಿಕಾ ಪ್ರತಿನಿಧಿಗಳು ನಿರಂತರವಾಗಿ ಚರ್ಚೆ ನಡೆಸುವ ಕೇಂದ್ರಗಳಾಗಿ ಬದಲಾದವು. ಇಂತಹ ಕೇಂದ್ರಗಳಲ್ಲಿ ಕ್ರಾಂತಿಕಾರಿ ಚಟುವಟಿಕೆಗಳ ಯೋಜನೆಗಳು ತಯಾರಾಗುವುದರೊಂದಿಗೆ ಸ್ವೇಚ್ಛಾಧಿಪತ್ಯ ಆಡಳಿತದ ಕುರಿತಾದ ಟೀಕೆಗಳು ನಡೆಯುತ್ತಿದ್ದವು.

ಮುಂದುವರಿಸಲು ಪ್ರಯತ್ನಿಸಿದನು. ಆದರೆ ರಾಷ್ಟ್ರೀಯ ಸಭೆಯ ವಿರೋಧ ಮತ್ತು ಇಂಗ್ಲೆಂಡಿನೊಂದಿಗಿನ ಯುದ್ಧದಿಂದಾಗಿ ಇವನನ್ನು ಪದಚ್ಯುತಗೊಳಿಸಿದನು. ಮಾತ್ರವಲ್ಲ ಇವನ ನಂತರ ಅಧಿಕಾರಕ್ಕೆ ಬಂದ ರಾಜರ ಸಲಹೆಗಾರರಿಗೂ ಫ್ರಾನ್ಸಿನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಸಾಧ್ಯವಾಗಲಿಲ್ಲ. ಬೇರೆ ದಾರಿಯಿಲ್ಲದೆ ನೆಕ್ಕರ್ ನನ್ನು ಆರ್ಥಿಕ ಸಲಹೆಗಾರನಾಗಿ ಪುನಃ ನೇಮಕಗೊಳಿಸಲು ರಾಜನು ನಿರ್ಬಂಧಿತನಾದನು.

ಫ್ರಾನ್ಸಿನ ಚಿಂತಕರನ್ನೂ ಅವರ ಪ್ರಮುಖ ಆಶಯಗಳನ್ನೂ ಪಟ್ಟಿ ಮಾಡಿ ಸಚಿತ್ರ ಚಾರ್ಟ್ ತಯಾರಿಸಿರಿ.

## ಎಸ್ಟೇಟ್ ಜನರಲ್ ಸಭೆ ಸೇರುತ್ತಿದೆ

18ನೇ ಶತಮಾನದಲ್ಲಿ ಫ್ರಾನ್ಸ್ ಎದುರಿಸಿದ ಕಠಿಣ ಆರ್ಥಿಕ ಸ್ಥಿತಿಯ ಕುರಿತು ನಾವು ಚರ್ಚಿಸಿದ್ದೇವಲ್ಲವೇ. ಇದನ್ನು ಪರಿಹರಿಸುವುದಕ್ಕೆ ಹೊಸ ತೆರಿಗೆಯನ್ನು ಹೇರುವುದು ಅನಿವಾರ್ಯವಾಯಿತು. ಇದಕ್ಕಾಗಿ ನೆಕ್ಕರ್‌ನ ಸಲಹೆಯಂತೆ ಹದಿನಾರನೆಯ ಲೂಯಿಯು ಫ್ರಾನ್ಸಿನ ಪಾರ್ಲಿಮೆಂಟಾದ ಎಸ್ಟೇಟ್ ಜನರಲ್‌ನ ಸಭೆ ಕರೆಯಲು ತೀರ್ಮಾನಿಸಿದನು.

ಸುದೀರ್ಘವಾದ 175 ವರ್ಷಗಳ ನಂತರ ಎಸ್ಟೇಟ್ ಜನರಲ್ ಸಭೆಯನ್ನು ನಡೆಸಲು ತೀರ್ಮಾನಿಸಿದಾಗ, ಅದನ್ನು ನಡೆಸುವ ರೀತಿಯ ಕುರಿತು ವಿವಾದಗಳು ಉಂಟಾಯಿತು. ಫ್ರಾನ್ಸಿನ ಸಮಾಜದಂತೆಯೇ, ಎಸ್ಟೇಟ್ ಜನರಲ್ ನಲ್ಲಿಯೂ ಮೂರು ವಿಭಾಗಳಿದ್ದುವು. ಮೂರು ಎಸ್ಟೇಟುಗಳೂ ಪ್ರತ್ಯೇಕ ಹಾಲ್‌ಗಳಲ್ಲಿ ಸಭೆ ಸೇರುತ್ತಿದ್ದವು.

ಫ್ರೆಂಚ್ ಜನಸಂಖ್ಯೆಯ ಸಣ್ಣ ಶೇಕಡಾ ಮಾತ್ರವಿರುವ ಪುರೋಹಿತರಿಗೆ ಪ್ರತಿನಿಧಿ ಸಭೆಯಲ್ಲಿ 285 ಸದಸ್ಯರಿದ್ದರು. ಫ್ರಾನ್ಸಿನ ಜನಸಂಖ್ಯೆಯಲ್ಲಿ ಅಂದಾಜು ಒಂದು ಲಕ್ಷದ ನಲ್ವತ್ತು ಸಾವಿರ ಮಾತ್ರವಿರುವ ಪ್ರಭುಗಳಿಗೆ ಪ್ರತಿನಿಧಿ ಸಭೆಯಲ್ಲಿ 308 ಸದಸ್ಯರಿದ್ದರು. ಜನಸಂಖ್ಯೆಯ ಬಹುಪಾಲು ಇರುವ ಸಾಮಾನ್ಯ ವರ್ಗದ ಜನರಿಗೆ ಪ್ರತಿನಿಧಿ ಸಭೆಯಲ್ಲಿ 621 ಸದಸ್ಯರು ಮಾತ್ರವೇ ಇದ್ದರು. ಒಂದು ಮತ್ತು ಎರಡನೇ ಎಸ್ಟೇಟುಗಳ ಸದಸ್ಯತನವು ಪಿತ್ರಾರ್ಜಿತವಾಗಿತ್ತು. ಆದರೆ ಮೂರನೇ ಎಸ್ಟೇಟಿನ ಸದಸ್ಯರು ಚುನಾಯಿತರಾದವರಾಗಿದ್ದರು.

ಒಂದು ಸಭೆಗೆ ಒಂದು ಮತ ಎಂಬುದು ಅಸ್ತಿತ್ವದಲ್ಲಿದ್ದ ವಿಧಾನವಾಗಿತ್ತು. ಮೊದಲ ಎರಡು ಸಭೆಗಳು ಇದನ್ನು ಬೆಂಬಲಿಸಿದವು. ಒಂದು ಮತ್ತು ಎರಡನೇ ಸಭೆಗಳು ಒಂದುಗೂಡಿದರೆ ಬಹುಮತ ಪಡೆದು ಆಡಳಿತ ವ್ಯವಸ್ಥೆಯನ್ನು ನಿಯಂತ್ರಿಸಬಹುದೆಂಬುದು ಇದಕ್ಕೆ ಕಾರಣವಾಗಿತ್ತು.

ಮೂರನೆಯ ಎಸ್ಟೇಟ್‌ನ ಎಲ್ಲಾ ನವಪ್ರತಿನಿಧಿಗಳು ತಾವು ಪ್ರತಿನಿಧಿಸುವ ಜನವಿಭಾಗಗಳ ಸಮಸ್ಯೆಗಳು ಮತ್ತು ಬೇಡಿಕೆಗಳೊಂದಿಗೆ ಸಭೆಗೆ ಆಗಮಿಸಿದ್ದರು. ಆದರೆ ರಾಜನಾಗಿದ್ದ ಹದಿನಾರನೆಯ ಲೂಯಿಯು ಜನಸಾಮಾನ್ಯರ ಈ ಸಮಸ್ಯೆಯನ್ನು ಪರಿಹರಿಸುವ ಯಾವುದೇ ಪೂರ್ವಸಿದ್ಧತೆಯನ್ನು ಮಾಡಿರಲಿಲ್ಲ. ಪಾರ್ಲಿಮೆಂಟರಿ ವಿಧಾನದ ಕುರಿತಾದ ತಿಳುವಳಿಕೆಯ ಕೊರತೆಯು ಇದಕ್ಕೆ ಕಾರಣವಾಗಿತ್ತು.

ಎಸ್ಟೇಟ್ ಜನರಲ್ ಫ್ರೆಂಚ್ ಸಮಾಜದ ಸೀಳುನೋಟವಾಗಿದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.

## ಟೆನ್ನಿಸ್ ಕೋರ್ಟ್ ಪ್ರತಿಜ್ಞೆ

ಮೂರು ಎಸ್ಟೇಟುಗಳೂ ಒಟ್ಟಾಗಿ ಸಭೆ ಸೇರಬೇಕೆಂದು ಮೂರನೆಯ ಎಸ್ಟೇಟಿನ ಪ್ರತಿನಿಧಿಗಳು ಬೇಡಿಕೆಯಿಟ್ಟರು. ಮೊದಲ ಎರಡು ಸಭೆಗಳು ಇದನ್ನು ಬೆಂಬಲಿಸಲಿಲ್ಲ. 1789 ಜೂನ್ 17 ರಂದು ಮೂರನೆಯ ಎಸ್ಟೇಟಿನ ಸದಸ್ಯರು, ತಾವು ಫ್ರಾನ್ಸಿನ ನಿಜವಾದ ಜನಪ್ರತಿನಿಧಿಗಳು ಎಂದು ಘೋಷಿಸಿ, ತಮ್ಮ ಸಭೆಯನ್ನು ಫ್ರಾನ್ಸಿನ ರಾಷ್ಟ್ರೀಯ ಸಭೆ (French National Assembly) ಎಂದು ನಾಮಕರಣ ಮಾಡಿದರು.

ಮೊದಲ ಎರಡು ಸಭೆಗಳ ಬೆಂಬಲದೊಂದಿಗೆ ಹದಿನಾರನೆಯ ಲೂಯಿ, ಮೂರನೆಯ ಎಸ್ಟೇಟ್ ಸಭೆ ಸೇರಿದ ಸಭಾಂಗಣವನ್ನು ಮುಚ್ಚಿ ಸೈನಿಕ ಕಾವಲನ್ನು ಏರ್ಪಡಿಸಿದನು. ಲೂಯಿಯ ಕ್ರಮಕ್ಕೆ ಹೆದರದ ಮೂರನೆಯ ಎಸ್ಟೇಟ್‌ನ ಜನರು, ಲಾಂಗ್ ಸಿಲ್‌ವಿಯನ್ ಬೈಲಿ, ಅಬೆಸಿಯಸ್, ಮಿರಾಬೋ ಮೊದಲಾದವರ ನೇತೃತ್ವದಲ್ಲಿ ಸಮೀಪದ ಟೆನ್ನಿಸ್ ಆಟದ ಮೈದಾನದಲ್ಲಿ ಜೂನ್ 20 ರಂದು ಸಭೆ ಸೇರಿದರು. ಒಂದು ಹೊಸ ಸಂವಿಧಾನವನ್ನು ರೂಪಿಸುವ ವರೆಗೆ ನಾವು ಹಿಂತಿರುಗಿ ಹೋಗಲಾರೆವು ಎಂದು ಅವರು ಪ್ರತಿಜ್ಞೆಗೈದರು. ಮುಂದೆ ಇದನ್ನು 'ಟೆನ್ನಿಸ್ ಕೋರ್ಟ್ ಪ್ರತಿಜ್ಞೆ' (Tennis court oath) ಎಂದು ಕರೆದರು. ಈ ಘಟನೆಯನ್ನೇ ಪಾಠಭಾಗದ ಮುನ್ನುಡಿಯಲ್ಲಿ ಪರಾಮರ್ಶಿಸಲಾಗಿದೆ. ರಾಷ್ಟ್ರೀಯ ಸಭೆಯ ಈ ಸಮ್ಮೇಳನವು, ನಂತರದ ಚರಿತ್ರೆಯಲ್ಲಿ 'ಟೆನ್ನಿಸ್ ಕೋರ್ಟ್ ಅಸೆಂಬ್ಲಿ' (Tennis court assembly) ಎಂದು ಪ್ರಸಿದ್ಧವಾಯಿತು.



ಟೆನಿಸ್ ಕೋರ್ಟ್ ಪ್ರತಿಜ್ಞೆ

ಟೆನ್ನಿಸ್ ಕೋರ್ಟ್ ಪ್ರತಿಜ್ಞೆಯನ್ನು ಆಧರಿಸಿ ಒಂದು ಸ್ಕ್ರಿಪ್ಟ್ ತಯಾರಿಸಿ, ಸ್ಕಿಟ್ ಒಂದನ್ನು ತರಗತಿಯಲ್ಲಿ ಪ್ರದರ್ಶಿಸಿರಿ.

## ಬಾಸ್ಟಿಲ್‌ನ ಪತನ ಮತ್ತು ಕ್ರಾಂತಿಯ ಆರಂಭ

ಹದಿನಾರನೆಯ ಲೂಯಿಯು ತನ್ನ ಸಲಹೆಗಾರನಾಗಿದ್ದ ನೆಕ್ಕರನನ್ನು ಪದಚ್ಯುತಗೊಳಿಸಿ ಪ್ಯಾರಿಸನ್ನು ತೊರೆಯಲು ಆದೇಶಿಸಿದ್ದಾನೆಂಬ ವಾರ್ತೆಯು ಕಾಡ್ಗಿಚ್ಚಿನಂತೆ ಹರಡಿತು. ಉದ್ರಿಕ್ತರಾದ ಜನರು ಪ್ಯಾರಿಸ್ ನಗರದ ಧಾನ್ಯ ಸಂಗ್ರಹಾಗಾರಗಳನ್ನೂ ರೊಟ್ಟಿ ಅಂಗಡಿಗಳನ್ನೂ ಆಕ್ರಮಿಸಿ ವಶಪಡಿಸಿದರು. ಆಯುಧಗಳನ್ನು ಸಂಗ್ರಹಿಸಿದ ಅವರು 1789 ಜುಲೈ 14 ರಂದು ಬೂರ್ಬನ್

ಸ್ವೇಚ್ಛಾಧಿಪತ್ಯದ ಪ್ರತೀಕವಾದ ಪ್ಯಾರಿಸಿನ ಬಾಸ್ಟಿಲ್ ಕೋಟೆಯನ್ನು ಕೆಡವಿ ಕೆಲವೇ ಗಂಟೆಗಳಲ್ಲಿ ಪ್ಯಾರಿಸ್ ನಗರವನ್ನು ವಶಪಡಿಸಿಕೊಂಡರು.

ಬಾಸ್ಟಿಲ್ ಕೋಟೆಯ ಪತನವನ್ನು ಫ್ರಾನ್ಸಿನ ಕ್ರಾಂತಿಯ ಆರಂಭವಾಗಿ ಪರಿಗಣಿಸಲಾಗುತ್ತದೆ. ಫ್ರಾನ್ಸಿನ ಗ್ರಾಮೀಣ ಪ್ರದೇಶಗಳಲ್ಲಿಯೂ ಹಿಂಸಾಚಾರಗಳು ನಡೆದವು. ತೆರಿಗೆಯನ್ನು ಸಂಗ್ರಹಿಸುವವರೂ ಕ್ರಾಂತಿಕಾರಿಗಳ ಕೋಪಕ್ಕೆ ತುತ್ತಾದರು. ಕ್ರಾಂತಿಕಾರಿ ಜನರ ಗುಂಪಿಗೆ ಬೆದರಿದ ಹದಿನಾರನೆಯ ಲೂಯಿಯು ರಾಷ್ಟ್ರೀಯ ಸಭೆಯು ಅಂಗೀಕರಿಸಿದ ಕಾನೂನುಗಳಿಗೆ ಅಂಗೀಕಾರವನ್ನು ನೀಡಿದನು.

ಫ್ರಾನ್ಸಿನ ರಾಷ್ಟ್ರೀಯ ಸಭೆಯು ಕಾನೂನಿನ ಮೂಲಕ ಜಾರಿಗೊಳಿಸಿದ ಕೆಲವು ಸುಧಾರಣೆಗಳನ್ನು ಕೆಳಗೆ ನೀಡಲಾಗಿದೆ.

- ಗುಲಾಮಗಿರಿಯನ್ನು ನಿಷೇಧಿಸಲಾಯಿತು.
- ಪ್ರಭುಗಳ ವಿಶೇಷ ಅಧಿಕಾರಗಳನ್ನು ರದ್ದುಗೊಳಿಸಲಾಯಿತು.
- ಜನರು ಕೆಥೋಲಿಕ್ ಸಭೆಗೆ ನೀಡಬೇಕಾದ ತೆರಿಗೆಗಳನ್ನು ರದ್ದುಗೊಳಿಸಲಾಯಿತು.
- ಅಧಿಕವಾಗಿ ಹೊರಿಸಿದ ತೆರಿಗೆಗಳನ್ನು ರದ್ದುಗೊಳಿಸಲಾಯಿತು.

## ಮಹಿಳೆಯರು ಮತ್ತು ಫ್ರಾನ್ಸಿನ ಕ್ರಾಂತಿ

ಆಹಾರದ ಕ್ಷಾಮ ಮತ್ತು ರಾಷ್ಟ್ರೀಯ ಅಸೆಂಬ್ಲಿಯೊಂದಿಗೆ ಸಹಕರಿಸದ ಹದಿನಾರನೆಯ ಲೂಯಿಯ ಆಡಳಿತ ಧೋರಣೆಗಳು ಮಹಿಳೆಯರನ್ನು ಕ್ರಾಂತಿಯ ಕಡೆಗೆ ಪ್ರಚೋದಿಸಿತು. ಸಾವಿರಾರು ಮಹಿಳೆಯರು ಪೊರಕೆ ಸಹಿತ ನಿತ್ಯೋಪಯೋಗಿ ವಸ್ತುಗಳಾದ ಕತ್ತಿ, ಈಟಿ, ಭರ್ಜಿ, ಬಂದೂಕು ಇತ್ಯಾದಿಗಳೊಂದಿಗೆ ಬೂರ್ಬನ್ ರಾಜರ ವಸತಿಯಾದ ಪ್ಯಾರಿಸ್ ನ ವಾರ್ಸಾಯಿ ಅರಮನೆಗೆ ಮೆರವಣಿಗೆ ನಡೆಸಿದರು. ಜನಸಾಮಾನ್ಯರ ಬೃಹತ್ ಗುಂಪು ಇವರೊಂದಿಗೆ ಸೇರಿಕೊಂಡಿತು. ಅವರು ರಾಜ ಮತ್ತವನ ಕುಟುಂಬದ ಸದಸ್ಯರನ್ನು ಬಲವಂತದಿಂದ ಪ್ಯಾರಿಸ್ ನಗರಕ್ಕೆ ಕರೆತಂದರು. ಅನ್ಯ ಮಾರ್ಗವಿಲ್ಲದೆ ಹದಿನಾರನೆಯ ಲೂಯಿಯು ರಾಷ್ಟ್ರೀಯ ಅಸೆಂಬ್ಲಿಯ ತೀರ್ಮಾನಗಳನ್ನು ಅಂಗೀಕರಿಸುತ್ತೇನೆಂದು ಭರವಸೆಯನ್ನು ಕೊಟ್ಟನು. ಫ್ರಾನ್ಸಿನ ಪ್ರಸಿದ್ಧ ನಾಟಕ ರಚನೆಕಾರ್ತಿ ಮತ್ತು ಸಾಮಾಜಿಕ ಕಾರ್ಯಕರ್ತೆಯಾಗಿದ್ದ ಒಲಿಬ್ ಡೆ ಗುಷ್ ಕ್ರಾಂತಿಯ ಸಮಯದಲ್ಲಿ ಮಹಿಳೆಯರ ಹಕ್ಕಿಗಾಗಿ ವಾದಿಸಿದ ಮಹಿಳೆಯರ ದೃಢ ಧ್ವನಿಯಾಗಿದ್ದಳು. "ಮಹಿಳೆಯರು ಮತ್ತು ಮಹಿಳಾ ಪೌರರ ಹಕ್ಕುಗಳ ಘೋಷಣೆ" [Declaration of the rights of woman and of the (female) citizen] ಎಂಬ ಪ್ರಸಿದ್ಧ ಗ್ರಂಥದಲ್ಲಿ ಪುರುಷರಿಗೆ ಲಭಿಸುವ ಎಲ್ಲ ಹಕ್ಕುಗಳೂ ಮಹಿಳೆಯರಿಗೂ ಲಭಿಸಬೇಕೆಂದು ಅವಳು ವಾದಿಸಿದಳು.



ಗುಡ್ ಬೈ ವಾರ್ಸಾಯಿ (Adieu, Versailles) ಮಹಿಳೆಯರು ರಾಜಕುಟುಂಬದ ಸದಸ್ಯರನ್ನು ಕರೆದುಕೊಂಡು ಪ್ಯಾರಿಸಿನತ್ತ ಮೆರವಣಿಗೆ ನಡೆಸುವ ಸಾಂದರ್ಭಿಕ ಚಿತ್ರ

ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಅಧಿಕಾರ ಮತ್ತು ಹಕ್ಕುಗಳು ಇರುವ ಸಾಮಾಜಿಕ ವ್ಯವಸ್ಥೆಗಾಗಿ ಅವಳು ಹೋರಾಡಿದಳು. ಮೇಡಂ ಜೀನ್ ರೋಲಾಂಡ್ ಮಹಿಳೆಯರ ಹಕ್ಕುಗಳಿಗಾಗಿ ಹೋರಾಡಿದ ಇನ್ನೋರ್ವ ಮಹಿಳೆಯಾಗಿದ್ದಳು. ಸ್ತ್ರೀಯರ ಈ ಹೋರಾಟದಿಂದ ಕೆಲವು ಪ್ರಯೋಜನಗಳುಂಟಾದವು. ಆಸ್ತಿಯ ಮೇಲಿನ ಹಕ್ಕು, ವಿವಾಹ ವಿಚ್ಛೇದನೆ ಪಡೆಯುವುದಕ್ಕಿರುವ ಹಕ್ಕು ಇತ್ಯಾದಿಗಳು ಇವುಗಳಲ್ಲಿ ಕೆಲವು.

## ವಸ್ತ್ರವು ಪ್ರತಿಭಟನೆಯ ಸಂಕೇತ

ಫ್ರಾನ್ಸಿನ ಉನ್ನತ ವರ್ಗದವರು ಪರಂಪರಾಗತವಾಗಿ ಬ್ರೀಚುಗಳು ಎಂಬ ಕಾಲುಗಂಟಿನ ವರೆಗೆ ಇಳಿಬಿದ್ದ ಪ್ಯಾಂಟನ್ನು ಧರಿಸುತ್ತಿದ್ದರು. ಉನ್ನತ ವರ್ಗದವರ ಮೇಲಿನ ಪ್ರತಿಭಟನೆಯ ಭಾಗವಾಗಿ ಕಾರ್ಮಿಕರು, ಕೃಷಿಕರು ಪಾದದ ವರೆಗೆ ತಲಪುವ ಪಾಂಟಲೋನ್ (Pantalon) ಎಂಬ ಉದ್ದವಾದ ಚಡ್ಡಿಗಳನ್ನು ಧರಿಸಲು ಆರಂಭಿಸಿದರು. ಇವರನ್ನು ಸಾನ್‌ಸ್ಕೂಲೋಟ್ಸ್ (Sansculottes) ಎಂದು ಕರೆದರು. ಪಾಂಟಲೋನ್ ನಂತರದಲ್ಲಿ ಕ್ರಾಂತಿಕಾರಿ ಬೆಂಬಲಿಗರ ಸಂಕೇತವಾಗಿ ಬದಲಾಯಿತು. ಹೆಚ್ಚು ಹೆಚ್ಚು ಜನರು ಪಾಂಟಲೋನ್ ಧರಿಸಲಾರಂಭಿಸಿದ್ದು, ಕ್ರಾಂತಿಯು ಜನಪರ ವಾದ ಬದಲಾಯಿತೆನ್ನುವುದರ ಸಾಕ್ಷಿಯಾಗಿದೆ.

ಫ್ರೀಜಿಯನ್ ಟೊಪ್ಪಿಯೂ ಕ್ರಾಂತಿಯ ಸಂಕೇತವಾಗಿತ್ತು. ಗುಲಾಮಗಿರಿಯಿಂದ ವಿಮೋಚನೆ ಹೊಂದಿದೆವು ಎಂಬುದನ್ನು ಸೂಚಿಸಲು ಕಾರ್ಮಿಕರು ಕೆಂಪು ಬಣ್ಣದ ಫ್ರೀಜಿಯನ್ ಟೊಪ್ಪಿಯನ್ನು ಧರಿಸಲಾರಂಭಿಸಿದರು.



ಸಾನ್‌ಸ್ಕೂಲೋಟ್ ದಂಪತಿಗಳು



ಫ್ರೀಜಿಯನ್ ಟೊಪ್ಪಿ

## ಹೊಸ ಸಂವಿಧಾನ

> “ ಮಾನವರು ಸ್ವತಂತ್ರರಾಗಿ ಮತ್ತು ಹಕ್ಕುಗಳಲ್ಲಿ ಸಮಾನತೆಯುಳ್ಳವರಾಗಿ ಜನಿಸುತ್ತಾರೆ ಮತ್ತು ಜೀವಿಸುತ್ತಾರೆ ”

ರಾಷ್ಟ್ರೀಯ ಸಭೆಯು ಫ್ರಾನ್ಸಿಗಾಗಿ ತಯಾರಿಸಿದ ಸಂವಿಧಾನದ ಮುನ್ನುಡಿಯಲ್ಲಿ, ನೀಡಿರುವ ಮಾನವ ಹಕ್ಕುಗಳ ಘೋಷಣೆಯ ಒಂದು ಭಾಗವನ್ನು ಮೇಲೆ ನೀಡಲಾಗಿದೆ. ಈ ಸಂವಿಧಾನದ ಮುನ್ನುಡಿಯಲ್ಲಿರುವ ಫ್ರಾನ್ಸಿನ ಮಾನವ ಹಕ್ಕುಗಳ ಘೋಷಣೆಯು (Declaration of the Rights of Man and of the Citizen) ಫ್ರೆಂಚ್ ಕ್ರಾಂತಿಯ ಒಂದು

ಪ್ರಧಾನ ಫಲಿತಾಂಶವಾಗಿದೆ. 1789 ರಲ್ಲಿ ನಡೆದ ಮಾನವ ಹಕ್ಕುಗಳ ಘೋಷಣೆಯ ಪ್ರಧಾನ ಆಶಯಗಳು ಯಾವುವೆಂದು ನೋಡುವ.




- ಸ್ವತಂತ್ರನಾಗಿ ಜನಿಸುವ ಮಾನವನು ಸಮಾನವಾದ ಹಕ್ಕುಗಳೊಂದಿಗೆ ಸ್ವತಂತ್ರನಾಗಿ ಜೀವಿಸುತ್ತಾನೆ.
- ಮನುಷ್ಯನ ಸಹಜವಾದ ಮತ್ತು ಅವಿಭಾಜ್ಯ ಹಕ್ಕುಗಳನ್ನು ಸಂರಕ್ಷಿಸುವುದು ಎಲ್ಲಾ ರಾಜಕೀಯ ಸಂಸ್ಥೆಗಳ ಉದ್ದೇಶವಾಗಿದೆ. ಅವುಗಳು ಸ್ವಾತಂತ್ರ್ಯ, ಸೊತ್ತಿನ ಸಂರಕ್ಷಣೆ, ಸುರಕ್ಷೆ, ದಮನಕಾರಿ ಶಕ್ತಿಗಳ ವಿರುದ್ಧ ಸೆಟೆದು ನಿಲ್ಲುವುದು ಇತ್ಯಾದಿಗಳಿಗಿರುವ ಹಕ್ಕುಗಳಾಗಿವೆ.
- ಎಲ್ಲಾ ಪರಮಾಧಿಕಾರವು ರಾಷ್ಟ್ರದಲ್ಲಿ ನಿಕ್ಷಿಪ್ತವಾಗಿದೆ. ಇತರರಿಗೆ ಹಾನಿಕರವಲ್ಲದ ಚಟುವಟಿಕೆಗಳನ್ನು ನಡೆಸುವುದಕ್ಕಿರುವ ಅಧಿಕಾರವು ಸ್ವಾತಂತ್ರ್ಯದಲ್ಲಿ ಒಳಗೊಂಡಿವೆ.
- ಸಮಾಜಕ್ಕೆ ತೊಂದರೆಯಾಗುವ ರೀತಿಯ ಚಟುವಟಿಕೆಗಳನ್ನು ನಿಯಂತ್ರಿಸುವ ಹಕ್ಕು ಕಾನೂನುಗಳಿಗೆ ಇದೆ.

ಫ್ರಾನ್ಸಿನ ರಾಷ್ಟ್ರೀಯ ಅಸೆಂಬ್ಲಿಯು ಫ್ರಾನ್ಸಿನ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೊಳಿಸಿತು. ಇವುಗಳಲ್ಲಿ ಪ್ರಧಾನವಾದವುಗಳನ್ನು ಕೆಳಗೆ ನೀಡಲಾಗಿದೆ:

- ದೇಶಾದ್ಯಂತ ಏಕೀಕೃತ ಸಂವಿಧಾನವು ಜಾರಿಗೆ ಬಂತು.
- 'ಅಸ್ಸೈನಾಟ್' (Assignat) ಎಂಬ ಹೆಸರಿನ ಹೊಸ ಕಾಗದದ ಕರೆನ್ಸಿಯನ್ನು ಹೊರತರಲಾಯಿತು.
- ಧಾರ್ಮಿಕ ನೇತಾರರ ನಿಯಂತ್ರಣದಲ್ಲಿದ್ದ ಸೊತ್ತುಗಳನ್ನು ವಶಪಡಿಸಲಾಯಿತು.
- ಮತಸಹಿಷ್ಣುತೆಯನ್ನು ಪೂರ್ಣಪ್ರಮಾಣದಲ್ಲಿ ಘೋಷಿಸಲಾಯಿತು.
- ಪುರೋಹಿತರು ಸರಕಾರದಿಂದ ಸಂಬಳವನ್ನು ಪಡೆಯುವವರಾದರು.

### 'ಅಸ್ಸೈನಾಟ್ಸ್' (Assignat)




ಅಸ್ಸೈನಾಟ್ಸ್ 1789 ರಲ್ಲಿ ಫ್ರಾನ್ಸಿನಲ್ಲಿ ಹೊರತರಲಾದ ಕಾಗದದ ಕರೆನ್ಸಿಯಾಗಿದೆ. ಫ್ರೆಂಚ್ ಆರ್ಥಿಕ ವ್ಯವಸ್ಥೆಯನ್ನು ಸುಸ್ಥಿರಗೊಳಿಸುವುದು ಮತ್ತು ರಾಷ್ಟ್ರೀಯ ಸಾಲವನ್ನು ತೀರಿಸಲಿರುವ ಬಾಂಡಾಗಿಯೂ ಹಣವಾಗಿಯೂ ಅಸ್ಸೈನಾಟನ್ನು ಉಪಯೋಗಿಸಲು ತೀರ್ಮಾನಿಸಲಾಯಿತು. ಕಾಲಕ್ರಮೇಣ ಅದರ ಖರ್ಚನ್ನು ವಹಿಸುವುದಕ್ಕಾಗಿ ಅಸ್ಸೈನಾಟನ್ನು ಅಮಿತವಾಗಿ ಮುದ್ರಿಸಲಾರಂಭಿಸಿದರು. ಇದು ಅನಿಯಂತ್ರಿತ ಹಣದುಬ್ಬರಕ್ಕೂ, ಹಣದ ಮೌಲ್ಯವು ದಿಢೀರನೆ ಕುಸಿಯಲೂ ಕಾರಣವಾಯಿತು. 1796 ಕ್ಕೆ ತಲುಪುವಾಗ ಅಸ್ಸೈನಾಟಿನ ಮೌಲ್ಯವು ನಷ್ಟವಾಯಿತು.

ಮಾನವ ಹಕ್ಕುಗಳ ಘೋಷಣೆಯು ರಾಷ್ಟ್ರೀಯ ಸಭೆಯ ಸುಧಾರಣೆಗಳ ಮೇಲೆ ಹೇಗೆ ಪ್ರಭಾವವನ್ನು ಬೀರಿತು? ಚರ್ಚಿಸಿ ಟಿಪ್ಪಣಿಯನ್ನು ತಯಾರಿಸಿರಿ.

- **ಭೀಕರ ಆಡಳಿತ ಮತ್ತು ಸೆಪ್ಟೆಂಬರ್ ಹತ್ಯಾಕಾಂಡ**

1792ರಲ್ಲಿ ರಾಷ್ಟ್ರೀಯ ಅಸೆಂಬ್ಲಿಯ ಬದಲಿಗೆ ನ್ಯಾಷನಲ್ ಕನ್ವೆನ್ಶನ್ ಎಂಬ ಹೊಸ ಆಡಳಿತ ಸಮಿತಿಯು ಅಸ್ತಿತ್ವಕ್ಕೆ ಬಂತು. ನ್ಯಾಷನಲ್ ಕನ್ವೆನ್ಶನ್ ಫ್ರಾನ್ಸನ್ನು ಒಂದು ಗಣರಾಜ್ಯವಾಗಿ ಘೋಷಿಸಿ, ಹದಿನಾರನೆಯ ಲೂಯಿಗೆ ಗಲ್ಲುಶಿಕ್ಷೆಯನ್ನೂ ಜಾರಿಗೊಳಿಸಿತು. ಗಣರಾಜ್ಯ ದೇಶವಾಗಿ ಬದಲಾದ ಫ್ರಾನ್ಸಿನ ಆಡಳಿತವು ಜಾಕೋಬೀನುಗಳ ವಶವಾಯಿತು. ಯುರೋಪಿನ ಪ್ರಬಲ ಶಕ್ತಿಗಳಾದ ಬ್ರಿಟನ್, ಆಸ್ಟ್ರಿಯಾ, ರಷ್ಯಾಗಳು ಫ್ರಾನ್ಸನ್ನು ಆಕ್ರಮಿಸಿದಾಗ, ಈ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ ಸಾರ್ವಜನಿಕ ಸುರಕ್ಷಾ ಸಮಿತಿ' (Committee of public safety) ಯನ್ನು ರೂಪಿಸಿದರು. ಈ ಸಮಿತಿಯ ನೇತೃತ್ವದಲ್ಲಿ ಪ್ಯಾರಿಸಿನಲ್ಲಿ ಅತಿ ಭೀಕರ ಆಡಳಿತವು ಆರಂಭಗೊಂಡಿತು. ಪ್ಯಾರಿಸ್ ನಗರದ ಆಡಳಿತವು ಡಾಂಟನ್, ಹೆಬರ್ಟ್, ಮರಾಟ್, ರೋಬೆಸ್ಪಿಯರ್ ಮೊದಲಾದವರ ನಿಯಂತ್ರಣದಲ್ಲಿತ್ತು.

ಪ್ರಭುಗಳು, ಪುರೋಹಿತರು, ರಾಜನನ್ನು ಬೆಂಬಲಿಸುವವರು ಎಂಬಂತೆ ಸಾವಿರಗಟ್ಟಲೆ ಜನರನ್ನು ಪ್ರತಿನಿತ್ಯ ದೇಶದ್ರೋಹಿಗಳೆಂದು ಘೋಷಿಸಿ ಕಾರಾಗೃಹದಲ್ಲಿ ಬಂಧಿಸಲಾಯಿತು. ಜೈಲುಗಳು ತುಂಬಿದಾಗ, ಜನಸಂದಣಿಯನ್ನು ಕಡಿಮೆ ಮಾಡಲು 1500 ರಷ್ಟು ಜನರನ್ನು ಪ್ಯಾರಿಸ್‌ನ ಬೀದಿಗಳಲ್ಲಿ ವಧಿಸಿದರು. ಈ ಸರಣಿ ಕೊಲೆಪಾತಕವನ್ನು 'ಸೆಪ್ಟೆಂಬರ್ ಹತ್ಯಾಕಾಂಡ' (September Massacre) ಎಂದು ಕರೆಯುತ್ತಾರೆ. ಗಿಲೋಟಿನ್ ಎಂಬ ವಿಶೇಷ ಯಂತ್ರವನ್ನು ಉಪಯೋಗಿಸಿ ಜನರನ್ನು ವಧಿಸಿದರು. ಭೀಕರ ಆಡಳಿತ ಕಾಲದಲ್ಲಿ ಸಾವಿರಾರು ಜನರ ಮರಣಕ್ಕೆ ಕಾರಣವಾದ ರಿಪಬ್ಲಿಕನ್ ನೇತಾರರೂ ನಂತರದಲ್ಲಿ ಇದೇ ಗಿಲೋಟಿನ್‌ಗೆ ಬಲಿಯಾದರು.

ಕ್ರಾಂತಿಕಾರಿಗಳು ಬಳಕೆಯಲ್ಲಿದ್ದ ಕ್ಯಾಲೆಂಡರನ್ನು ಉಪೇಕ್ಷಿಸಿ ಹೊಸ ಕ್ರಾಂತಿ ಕ್ಯಾಲೆಂಡರನ್ನು ಬಳಕೆಗೆ ತಂದರು.

**ಜಾಕೋಬೀನುಗಳು ಮತ್ತು ಜಿರೋಂಡಿಸ್ಟ್‌ಗಳು (Jacobins and Girondists)**

ಫ್ರಾನ್ಸಿನ ಕ್ರಾಂತಿಯ ಕಾಲದಲ್ಲಿ ಬೆಳೆದು ಬಂದ ರಾಜಕೀಯ, ಸಾಮಾಜಿಕ ವಿಚಾರವನ್ನು ಜಾಕೋಬೀನುಗಳು ಎಂದು ಕರೆಯುತ್ತಾರೆ. ಆರಂಭ ಕಾಲದಲ್ಲಿ ಇವರು ಜಾಕೋಬೀನ್ ಕಾನ್ವೆಂಟಿನಲ್ಲಿ ಸಭೆ ಸೇರುತ್ತಿದ್ದರು. ಆದುದರಿಂದ ಇವರಿಗೆ ಜಾಕೋಬೀನುಗಳೆಂದು ಹೆಸರು ಬಂತು. ರೋಬೆಸ್ಪಿಯರ್ ಈ ಸಂಘದ ಪ್ರಧಾನ ನೇತಾರನಾಗಿದ್ದನು. ಆ ಕಾಲದಲ್ಲಿ ಜಾಕೋಬೀನುಗಳು ಫ್ರಾನ್ಸಿನ ರಾಜಕೀಯದಲ್ಲಿ ನಿರ್ಣಾಯಕ ಪ್ರಭಾವವನ್ನು ಬೀರಿದರು.

ಜಿರೋಂಡಿಸ್ಟ್ ಫ್ರಾನ್ಸಿನ ಕ್ರಾಂತಿಯಲ್ಲಿ ಪಾಲ್ಗೊಂಡ ಇನ್ನೊಂದು ಪ್ರಧಾನ ವಿಭಾಗವಾಗಿತ್ತು. ಇವರಲ್ಲಿ ಕೆಲವರು ಫ್ರಾನ್ಸಿನ ನೈಋತ್ಯ ಭಾಗದ ಜಿರೋಂಡ್ ಪ್ರದೇಶದಿಂದ ಬಂದ ರಾಷ್ಟ್ರೀಯ ಅಸೆಂಬ್ಲಿಯ ಸದಸ್ಯರಾಗಿದ್ದರು. ಜಾಕೋಬೀನುಗಳಿಂದ ವಿಭಿನ್ನವಾಗಿ ಮಿತವಾದ ಧೋರಣೆಗಳನ್ನು ಇವರು ಸ್ವೀಕರಿಸಿದರು. ಇವರು ಭೂಮಾಲಿಕರೂ ವ್ಯಾಪಾರಿಗಳೂ ಆದ ಉನ್ನತ ವರ್ಗದವರ ಪ್ರತಿನಿಧಿಗಳಾಗಿದ್ದರು.



ರೋಬೆಸ್ಪಿಯರ್

### ಕ್ರಾಂತಿ ಕ್ಯಾಲೆಂಡರ್

ಫ್ರಾನ್ಸಿನಲ್ಲಿ ಅಸ್ತಿತ್ವದಲ್ಲಿದ್ದ ಗ್ರಿಗೋರಿಯನ್ ಕ್ಯಾಲೆಂಡರಿಗೆ ಬದಲಾಗಿ ಈ ಕ್ಯಾಲೆಂಡರ್ 1793ರಲ್ಲಿ ಜಾರಿಗೆ ಬಂತು. ಕ್ರಾಂತಿ ಕ್ಯಾಲೆಂಡರ್ ಎಂದೇ ಪ್ರಸಿದ್ಧವಾದ ಫ್ರಾನ್ಸ್ ಗಣರಾಜ್ಯವಾಗಿ ಬದಲಾದ 1792 ಸೆಪ್ಟೆಂಬರ್ 22 ಈ ಕ್ಯಾಲೆಂಡರಿನ ಆರಂಭದ ದಿನವಾಗಿದೆ. ಏಳು ದಿನಗಳಿರುವ ವಾರಗಳಿಗೆ ಬದಲು ಈ ಕ್ಯಾಲೆಂಡರಿನಲ್ಲಿ ಹತ್ತು ದಿನಗಳಿರುವ ಮೂರು ದಶಕಗಳಿತ್ತು (Decades). ಈ ಕ್ಯಾಲೆಂಡರ್ ಪೂರ್ಣವಾಗಿಯೂ ಒಂದು ಜಾತ್ಯತೀತ ಕ್ಯಾಲೆಂಡರಾಗಿತ್ತು. ಕ್ರಾಂತಿ ನಡೆದು ಮುಂದಿನ 12 ವರ್ಷಗಳ ವರೆಗೆ (1801) ಫ್ರಾನ್ಸಿನಲ್ಲಿ ಈ ಕ್ಯಾಲೆಂಡರ್ ಬಳಕೆಯಲ್ಲಿತ್ತು.

### ಗಿಲೋಟಿನ್ (Guillotine)



ಫ್ರಾನ್ಸಿನ ಕ್ರಾಂತಿಯ ಕಾಲದಲ್ಲಿ (1789 – 1799) ಹೆಚ್ಚು ಜನರನ್ನು ಸುಲಭದಲ್ಲಿ ಮತ್ತು ವೇಗವಾಗಿ ಶಿರಚ್ಛೇದನ ಮಾಡಲು ಉಪಯೋಗಿಸಿದ ಭಯಾನಕ ಉಪಕರಣವು ಗಿಲೋಟಿನ್ ಆಗಿತ್ತು. ಈ ಆಶಯವನ್ನು ಸೂಚಿಸಿದ ಡಾ. ಜೋಸೆಫ್ ಇಗ್ನೇಸ್ ಗಿಲ್ಲೋಟಿನ್‌ನ ಹೆಸರಿನಲ್ಲಿ ಇದು ತಿಳಿಯಲ್ಪಡುತ್ತದೆ. ಹದಿನಾರನೆಯ ಲೂಯಿ ಮತ್ತು ಮೇರಿ ಆಂಟೋಯಿನೇಟ್‌ಳನ್ನು ಗಿಲೋಟಿನ್ ಯಂತ್ರದ ಮೂಲಕ ವಧಿಸಲಾಯಿತು. ಭೀಕರ ಆಡಳಿತ ಕಾಲದ ಕ್ರಾಂತಿಯ ನೇತಾರ ರೋಬೆಸ್ಪಿಯರ್ ಕೂಡಾ ಈ ಯಂತ್ರಕ್ಕೆ ಬಲಿಯಾದರು.

## ಹೊಸ ಸಂವಿಧಾನವು ಬರುತ್ತಿದೆ

ಭೀಕರ ಆಡಳಿತ ಕೊನೆಗೊಂಡ ನಂತರ 1795 ರಲ್ಲಿ ಫ್ರಾನ್ಸಿನಲ್ಲಿ ಒಂದು ಹೊಸ ಸಂವಿಧಾನವು ಜಾರಿಗೆ ಬಂತು. ಇದರಂತೆ ಐದು ಸದಸ್ಯರನ್ನೊಳಗೊಂಡ ಸಮಿತಿಯು ಆಡಳಿತವನ್ನು ನಿರ್ವಹಿಸತೊಡಗಿತು. ಈ ಸಮಿತಿಯನ್ನು ಡಯರಕ್ಟರಿ ಎಂದು ಕರೆದರು. ಭ್ರಷ್ಟಾಚಾರ ಮತ್ತು ದುರಾಡಳಿತವು ಡಯರಕ್ಟರಿಯ ಅವನತಿಗೆ ಕಾರಣವಾಯಿತು. ಜನರ ಬಡತನವು ಹೆಚ್ಚಾಗುವುದರೊಂದಿಗೆ ಅವರಿಗೆ ಹೊಸ ಸರಕಾರದ ಮೇಲಿನ ವಿಶ್ವಾಸವು ನಷ್ಟವಾಯಿತು.

## ಫ್ರಾನ್ಸಿನ ಕ್ರಾಂತಿಯ ಪರಿಣಾಮಗಳು

ಫ್ರಾನ್ಸಿನಲ್ಲಿ ಫ್ಯೂಡಲಿಸಂನ ಪತನವು ಫ್ರಾನ್ಸಿನ ಕ್ರಾಂತಿಯ ಅತಿ ದೊಡ್ಡ ಪರಿಣಾಮವಾಗಿದೆ. ಹಳೆಯ ಆಡಳಿತ ಕಾಲದಲ್ಲಿದ್ದ ಕಾನೂನುಗಳು ಕ್ರಾಂತಿಯ ನಂತರ ಇಲ್ಲದಾಯಿತು. ಸಭೆಯ ನಿಯಂತ್ರಣದಲ್ಲಿದ್ದ ಭೂಮಿಯು ಮಧ್ಯವರ್ತಿಗಳ ಕೈವಶವಾಯಿತು. ಪ್ರಭುಗಳ ಭೂಮಿಯನ್ನು ವಶಪಡಿಸಿಕೊಳ್ಳುವುದರೊಂದಿಗೆ ಅವರಿಗಿದ್ದ ಎಲ್ಲ ಸೌಲಭ್ಯಗಳನ್ನು ಹಿಂತೆಗೆಯಲಾಯಿತು. ಏಕೀಕೃತ ಅಳತೆ ಮಾಪನ ಪದ್ಧತಿ (ಮೆಟ್ರಿಕ್ ಪದ್ಧತಿ) ಯು ಜಾರಿಗೊಳ್ಳುವುದರೊಂದಿಗೆ ಅಳತೆಯಲ್ಲಿದ್ದ ಅಸಮಾನತೆ, ಅಸ್ಪಷ್ಟತೆ ಇಲ್ಲದಾಯಿತು.

ಆಧುನಿಕ ರಾಷ್ಟ್ರೀಯತೆ ಎನ್ನುವುದು ಫ್ರಾನ್ಸಿನ ಕ್ರಾಂತಿಯ ಕೊಡುಗೆಯಾಗಿದೆ.ದೇಶವೊಂದರ ಅಸ್ತಿತ್ವವು ರಾಜವಂಶದ ಬದಲಿಗೆ ರಾಷ್ಟ್ರೀಯತೆ ಎಂಬ ಆಶಯಗಳ ಮೂಲಕ ಪ್ರಕಟವಾಗಲು ಆರಂಭವಾದದ್ದು ಫ್ರಾನ್ಸಿನ ಕ್ರಾಂತಿಯ ನಂತರವಾಗಿತ್ತು. ಫ್ರಾನ್ಸಿನ ಕ್ರಾಂತಿಯ ನಂತರ ರಾಷ್ಟ್ರ ಎಂಬ ಕಲ್ಪನೆಯು ಅರ್ಥಪೂರ್ಣವಾಗಿ ಬಳಕೆಗೆ ಬಂತು. ಫ್ರಾನ್ಸ್ ಕೇವಲ ಒಂದು ಭೌಗೋಳಿಕ ಭಾಗವಲ್ಲ. ಅದು ಫ್ರಾನ್ಸ್ ಜನತೆಯನ್ನು ಒಳಗೊಂಡ ಭಾಗವಾಗಿದೆ ಎಂಬ ಆಶಯವು ಈ ಕ್ರಾಂತಿಯೊಂದಿಗೆ ಪ್ರಕಟವಾಯಿತು. ಪ್ರಜಾಪ್ರಭುತ್ವ ಆಡಳಿತ ಕ್ರಮವು ಫ್ರಾನ್ಸಿನಲ್ಲಿ ರಾಷ್ಟ್ರೀಯತೆಯೊಂದಿಗೆ ಬೆಳೆದು ಬಂದ ಇನ್ನೊಂದು ಆಶಯವಾಗಿದೆ. ಜನರ ಪರಮಾಧಿಕಾರ ಎಂಬ ರೂಸ್ಸೋನ ಆಶಯದಂತೆ ಪ್ರಜಾಪ್ರಭುತ್ವಕ್ಕೆ ಬುನಾದಿಯನ್ನು ಹಾಕಿದ್ದು ಫ್ರಾನ್ಸಿನ ಕ್ರಾಂತಿಯಾಗಿತ್ತು. ಹತ್ತೊಂಬತ್ತು ಇಪ್ಪತ್ತನೇ ಶತಮಾನದಲ್ಲಿ ಏಷ್ಯಾ ಆಫ್ರಿಕನ್ ದೇಶಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಮೇಲೆ ಫ್ರಾನ್ಸಿನ ಕ್ರಾಂತಿಯು ಪ್ರಭಾವವನ್ನು ಬೀರಿತು.

ಫ್ರಾನ್ಸಿನ ಕ್ರಾಂತಿಯ ಪರಿಣಾಮಗಳನ್ನು ಚರ್ಚೆ ಮಾಡಿ ಪಟ್ಟಿ ಮಾಡಿರಿ.

## ನೆಪೋಲಿಯನ್

> “ಫ್ರಾನ್ಸಿನ ಕಿರೀಟವು ಕೊಳಚೆಯಲ್ಲಿ ಬಿದ್ದಿರುವುದನ್ನು ನಾನು ಕಂಡೆನು. ನಾನದನ್ನು ನನ್ನ ಕತ್ತಿಯಿಂದ ತೆಗೆದುಕೊಂಡು ಸ್ವಚ್ಛಗೊಳಿಸಿ ನನ್ನ ತಲೆಯಲ್ಲಿಟ್ಟೆನು.”

ಇದು ಫ್ರಾನ್ಸಿನಲ್ಲಿ ಆಡಳಿತವನ್ನು ನಡೆಸುತ್ತಿದ್ದ ಡಯರಕ್ಟರಿಯನ್ನು ಹೊರದಬ್ಬಿ ಅಧಿಕಾರವನ್ನು ವಶಪಡಿಸಿಕೊಂಡ ನೆಪೋಲಿಯನ್ ಬೊನಪಾರ್ಟೆಯ ಮಾತುಗಳಾಗಿವೆ. ನೆಪೋಲಿಯನ್‌ನ ಈ ಮಾತುಗಳಿಂದ ನಮಗೆ ಯಾವೆಲ್ಲಾ ವಿಷಯಗಳನ್ನು ಅರ್ಥೈಸಿಕೊಳ್ಳಬಹುದು? ಅರಾಜಕತೆಯ ಕಡೆಗೆ ವಾಲಿದ ಫ್ರಾನ್ಸಿನ ಸಮಾಜವನ್ನು ಹಾಗೂ ಫ್ರಾನ್ಸಿನ ಅಧಿಕಾರವನ್ನು ತನ್ನ ಶಕ್ತಿಯಿಂದ ಹೇಗೆ ವಶಪಡಿಸಿದೆನು ಎಂಬುದನ್ನು ನೆಪೋಲಿಯನ್‌ನ ಈ ಮಾತುಗಳು ತಿಳಿಸುತ್ತದೆ. ನೆಪೋಲಿಯನ್ ಫ್ರಾನ್ಸಿನ ಸೈನ್ಯದ ಬ್ರಿಗೇಡಿಯರ್ ಜನರಲ್ ಆಗಿದ್ದನು. ಡಯರಕ್ಟರ್‌ನ ಬದಲಿಗೆ, ಮೂವರು ಕೋನ್ಸೆಲ್ ಸದಸ್ಯರನ್ನೊಳಗೊಂಡ ಒಂದು ಹೊಸ ಆಡಳಿತ ವ್ಯವಸ್ಥೆಯನ್ನು ನೆಪೋಲಿಯನ್ ಪ್ರಾರಂಭಿಸಿದನು. ಇದರ ಮೊದಲ ಕೋನ್ಸೆಲ್ ನೆಪೋಲಿಯನ್ ಆಗಿದ್ದ. ತಡವಿಲ್ಲದೆ ನೆಪೋಲಿಯನ್ ಫ್ರಾನ್ಸಿನ ಚಕ್ರವರ್ತಿಯಾಗಿ ಸ್ವಯಂ ಘೋಷಿಸಿಕೊಂಡು ಅಧಿಕಾರಕ್ಕೆ ಬಂದನು. ನಂತರದಲ್ಲಿ ಅವನು ಫ್ರಾನ್ಸಿನಲ್ಲಿ ಜಾರಿಗೊಳಿಸಿದ ಆಡಳಿತ ಸುಧಾರಣೆಗಳನ್ನು ನೋಡುವ.


ನೆಪೋಲಿಯನ್ ಬೋನಪಾರ್ಟ್

| ಸುಧಾರಣೆಗಳು | ಬದಲಾವಣೆಗಳು |
|---|---|
| ಕಾನೂನು ಸುಧಾರಣೆಗಳು | ನೆಪೋಲಿಯನ್‌ನ ನಿಯಮ ಸಂಹಿತೆಯು (Napoleonic Code) ಫ್ಯೂಡಲ್ ನಿಯಮಗಳನ್ನು ಕೊನೆಗೊಳಿಸುವುದರೊಂದಿಗೆ ಸಮಾನತೆ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಅಂಗೀಕರಿಸಿತು. |
| ಕನ್‌ಕೋರ್‌ಡೇಟ್ (ನೆಪೋಲಿಯನ್ ಮತ್ತು ಪೋಪ್ ನಡುವೆ ಮಾಡಿಕೊಂಡ ಒಪ್ಪಂದ) | ಪೋಪ್ ನೊಂದಿಗೆ ಮಾಡಿಕೊಂಡ ಕರಾರಿನಂತೆ ಕೆಥೋಲಿಕ್ ಸಭೆಯ ಕಾರ್ಯನಿರ್ವಹಣಾ ಸ್ವಾತಂತ್ರ್ಯವನ್ನು ಪುನಃಸ್ಥಾಪಿಸಲಾಯಿತು. ಇತರ ಮತ ವಿಭಾಗಗಳಿಗೆ ಸೇರಿದವರಿಗೆ ಕಾರ್ಯನಿರ್ವಹಣಾ ಸ್ವಾತಂತ್ರ್ಯವನ್ನು ನೀಡಲಾಯಿತು. |
| ಶೈಕ್ಷಣಿಕ ಸುಧಾರಣೆಗಳು | ವಿದ್ಯಾಭ್ಯಾಸದ ಸಾರ್ವತ್ರೀಕರಣಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಯಿತು. ಲಿಸೇಯ್ ಎಂಬ ಹೆಸರಿನಲ್ಲಿ ಸರಕಾರಿ ನಿಯಂತ್ರಣದಲ್ಲಿರುವ ವಿದ್ಯಾಲಯವನ್ನು ಸ್ಥಾಪಿಸಲಾಯಿತು. ಸರಕಾರಿ ಸೇವೆಗೆ ಮತ್ತು ಸೈನ್ಯಕ್ಕೆ ಅಗತ್ಯವಿರುವ ವಿದ್ಯಾ ಸಂಪನ್ನರನ್ನು ಸೃಷ್ಟಿಗೊಳಿಸುವುದು ಇದರ ಉದ್ದೇಶವಾಗಿತ್ತು. ಯುನಿವರ್ಸಿಟಿ ಆಫ್ ಫ್ರಾನ್ಸ್ ಎಂಬ ಹೆಸರಿನಲ್ಲಿ ರಾಷ್ಟ್ರೀಯ ವಿಶ್ವವಿದ್ಯಾಲಯ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. ಈ ಮೂಲಕ ದೇಶದ ಶೈಕ್ಷಣಿಕ ವಲಯದ ನಿಯಂತ್ರಣವನ್ನು ಮಾಡಲು ನೆಪೋಲಿಯನ್ ಗೆ ಸಾಧ್ಯವಾಯಿತು. |
| ಆರ್ಥಿಕ ಸುಧಾರಣೆಗಳು | ಬ್ಯಾಂಕ್ ಆಫ್ ಫ್ರಾನ್ಸ್ ಸ್ಥಾಪಿಸುವುದರೊಂದಿಗೆ ಏಕೀಕೃತ ಕರೆನ್ಸಿ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. |
| ಸೈನಿಕ ಸುಧಾರಣೆಗಳು | ಸೈನ್ಯವನ್ನು ಹಲವು ಬೆಟಾಲಿಯನ್‌ಗಳಾಗಿ ವಿಂಗಡಿಸಲಾಯಿತು. |

ನೆಪೋಲಿಯನ್‌ನ ಆಡಳಿತ ಸುಧಾರಣೆಗಳು ಆಧುನಿಕ ಫ್ರಾನ್ಸಿನ ರೂಪೀಕರಣಕ್ಕೆ ಬುನಾದಿಯಾಯಿತು. ಈ ಹೇಳಿಕೆಯನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

ಫ್ರಾನ್ಸಿನ ಶತ್ರುಗಳನ್ನು ನಾಶಪಡಿಸಬೇಕೆಂಬ ಉದ್ದೇಶದೊಂದಿಗೆ ನೆಪೋಲಿಯನ್ ಹಲವು ಯುದ್ಧಗಳನ್ನು ಮಾಡಿದನು. ಆಸ್ಟ್ರಿಯ, ಪ್ರಶ್ಯ ಮೊದಲಾದ ದೇಶಗಳನ್ನು ಅವನು ಯುದ್ಧದಲ್ಲಿ ಸೋಲಿಸಿದನು.

ನೆಪೋಲಿಯನ್‌ನ ಪ್ರಧಾನ ಶತ್ರುದೇಶ ಬ್ರಿಟನ್ ಆಗಿತ್ತು. ಪ್ರಬಲ ನಾವಿಕ ಸೇನೆಯನ್ನು ಹೊಂದಿರುವ ಬ್ರಿಟನನ್ನು ನೇರ ಯುದ್ಧದ ಮೂಲಕ ಮಣಿಸುವುದು ಅಸಾಧ್ಯ ಎಂದರಿತ ನೆಪೋಲಿಯನ್, ಬ್ರಿಟನನ್ನು ಆರ್ಥಿಕವಾಗಿ ದುರ್ಬಲಗೊಳಿಸುವಂತಹ ಯೋಜನೆಗಳನ್ನು ಜಾರಿಗೊಳಿಸಿದನು. ಈ ಉದ್ದೇಶದಿಂದ ಆವಿಷ್ಕರಿಸಿದ ಯೋಜನೆಯೇ ಕೋಂಟಿನೆಂಟಲ್ ವ್ಯವಸ್ಥೆ. ಈ ಯೋಜನೆಯಂತೆ ಫ್ರಾನ್ಸಿನ ವಶವಾಗಿರುವ ಅಥವಾ ಫ್ರಾನ್ಸಿನೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದ ದೇಶಗಳು ಬ್ರಿಟನಿನೊಂದಿಗೆ ವ್ಯಾಪಾರದಲ್ಲಿ ಏರ್ಪಡದಂತೆ ನಿರ್ಬಂಧಿಸಲಾಯಿತು. ಆದರೆ ಈ ಯೋಜನೆಯಲ್ಲಿ ಪೂರ್ಣ ವಿಜಯ ಸಾಧಿಸಲು ನೆಪೋಲಿಯನ್‌ಗೆ ಸಾಧ್ಯವಾಗಲಿಲ್ಲ. ಅಲ್ಲದೆ ಈ ಯೋಜನೆಯು ಬ್ರಿಟನಿನೊಂದಿಗಿನ ನಿರಂತರ ಯುದ್ಧಕ್ಕೆ ದಾರಿಮಾಡಿಕೊಟ್ಟಿತು. 1815ರಲ್ಲಿ ನಡೆದ ವಾಟರ್ಲೂ ಯುದ್ಧದಲ್ಲಿ ಬ್ರಿಟನ್ ನೆಪೋಲಿಯನನ್ನು ಅಂತಿಮವಾಗಿ ಸೋಲಿಸಿತು.




ಭೂಪಟ 2.2

ಭೂಪಟ 2.2 ನ್ನು ನಿರೀಕ್ಷಣೆ ಮಾಡಿ ನೆಪೋಲಿಯನ್ ಅಧಿಪತ್ಯ ಸ್ಥಾಪಿಸಿದ ಪ್ರದೇಶಗಳನ್ನು ಕಂಡುಕೊಂಡು ಪಟ್ಟಿ ಮಾಡಿರಿ.

## ಯುರೋಪಿನ ಭೂಪಟವು ಬದಲಾಗುತ್ತಿದೆ

ನೆಪೋಲಿಯನ್‌ನ ಸೋಲಿನ ನಂತರ ಯುರೋಪಿನ ದೇಶಗಳು 1815 ರಲ್ಲಿ ಆಸ್ಟ್ರಿಯಾದ ವಿಯೆನ್ನಾದಲ್ಲಿ ಸಭೆಯೊಂದನ್ನು ಸೇರಿ, ಕೆಲವೊಂದು ಪ್ರಧಾನ ತೀರ್ಮಾನಗಳನ್ನು ಕೈಗೊಂಡರು. ಇದನ್ನು ವಿಯೆನ್ನಾ ಸಮ್ಮೇಳನ ಎನ್ನುತ್ತಾರೆ. ಆಸ್ಟ್ರಿಯಾದ ಚಾನ್ಸಲರ್ ಆದ ಮೆಟರ್ನಿಕ್ ಈ ಸಮ್ಮೇಳನಕ್ಕೆ ನೇತೃತ್ವ ನೀಡಿದನು. ವಿಯೆನ್ನಾ ಸಮ್ಮೇಳನದೊಂದಿಗೆ ಯುರೋಪಿನಲ್ಲಿ ಫ್ರಾನ್ಸಿನ ಸಾರ್ವಭೌಮತ್ವವು ಕೊನೆಗೊಂಡಿತು.



ಮೆಟರ್ನಿಕ್

## ವಿಯೆನ್ನಾ ಸಮ್ಮೇಳನದ ಪ್ರಮುಖ ತೀರ್ಮಾನಗಳು

- ಯುರೋಪಿನ ದೇಶಗಳಲ್ಲಿ ಫ್ರಾನ್ಸಿನ ಕ್ರಾಂತಿಯ ಪೂರ್ವದಲ್ಲಿದ್ದ ರಾಜಾಡಳಿತ ವ್ಯವಸ್ಥೆಯನ್ನು ಪುನಃ ಸ್ಥಾಪಿಸುವುದು.
- ಫ್ರಾನ್ಸಿನಲ್ಲಿ ಬೂರ್ಬನ್ ರಾಜಾಡಳಿತವನ್ನು ಪುನಃಸ್ಥಾಪಿಸುವುದು.
- ಬ್ರಿಟನಿನ ನಾವಿಕ ಅಧಿಪತ್ಯವನ್ನು, ಪೂರ್ವ ಯುರೋಪಿನ ಪ್ರದೇಶಗಳ ಮೇಲಿನ ರಷ್ಯಾದ ಅಧಿಪತ್ಯವನ್ನು ಅಂಗೀಕರಿಸುವುದು.
- ಮಧ್ಯ ಯುರೋಪಿನಲ್ಲಿ ಆಸ್ಟ್ರಿಯಾದ ಅಧಿಪತ್ಯವನ್ನು ಅಂಗೀಕರಿಸುವುದು.

## ಸ್ವಾತಂತ್ರ್ಯ ವೃಕ್ಷ (Tree of Liberty)



'ಸ್ವಾತಂತ್ರ್ಯ ವೃಕ್ಷ' ಎನ್ನುವುದು ಅಮೇರಿಕಾದ ಕ್ರಾಂತಿಯ ಕಾಲದಲ್ಲಿದ್ದ ಒಂದು ಅಲಂಕಾರಿಕ ಪದವಾಗಿತ್ತು. ಆದರೆ ಫ್ರಾನ್ಸಿನ ಕ್ರಾಂತಿಯ ಕಾಲದಲ್ಲಿ ಅದು ಅಕ್ಷರಾರ್ಥ ಪ್ರಾಯೋಗಿಕವಾಗಿ ಬದಲಾಯಿತು. ಫ್ರಾನ್ಸಿನ ಕ್ರಾಂತಿಯ ಕಾಲದಲ್ಲಿ ಸ್ವಾತಂತ್ರ್ಯದ ಸಂಕೇತವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಮರಗಳನ್ನು ನೆಟ್ಟು ಬೆಳೆಸುವುದರೊಂದಿಗೆ, ಕ್ರಾಂತಿಯ ಸಂಕೇತವಾಗಿದ್ದ ಕೆಂಪು ಬಣ್ಣದ ಫ್ರೀಜಿಯನ್ ಟೊಪ್ಪಿ (Red Phrygian Cap) ಯನ್ನು ಈ ಮರಕ್ಕೆ ನೇತುಹಾಕುತ್ತಿದ್ದರು.

ಮೈಸೂರಿನ ಆಡಳಿತಾಧಿಕಾರಿಯಾದ ಟಿಪ್ಪು ಸುಲ್ತಾನನು ಬ್ರಿಟಿಷರ ವಿರುದ್ಧ ನಿರಂತರ ಯುದ್ಧಗಳಲ್ಲಿ ಏರ್ಪಡುತ್ತಿದ್ದನು. ಅವನು ತನ್ನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ ಸ್ವಾತಂತ್ರ್ಯ ವೃಕ್ಷವನ್ನು ನೆಟ್ಟನು. ಈ ಮೂಲಕ ಟಿಪ್ಪು ಸುಲ್ತಾನನು ಫ್ರಾನ್ಸಿನ ಕ್ರಾಂತಿಯ ಆಶಯಗಳ ಮೇಲಿನ ತನ್ನ ಅಭಿಮಾನವನ್ನೂ, ಬ್ರಿಟಿಷರ ವಿರುದ್ಧದ ಸೇಡನ್ನೂ ಪ್ರಕಟಪಡಿಸಿದನು.

ಫ್ರಾನ್ಸಿನ ಕ್ರಾಂತಿಯು ಆಧುನಿಕ ಇತಿಹಾಸದ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ಕ್ರಾಂತಿಯಾಗಿದೆ. ಇದು ಫ್ರಾನ್ಸಿನ ಜನಸಾಮಾನ್ಯರು ಮತ್ತು ಮಧ್ಯಮ ವರ್ಗದ ಜನರು ಸೇರಿ ತಮಗೆ ನಿಷೇಧಿಸಿದ ಹಕ್ಕುಗಳಿಗಾಗಿ ನಡೆಸಿದ ಹೋರಾಟವಾಗಿತ್ತು. ಫ್ರಾನ್ಸಿನ ಕ್ರಾಂತಿಯು ಮುಂದಿಟ್ಟ ಆಶಯಗಳು ಅನಂತರದ ಜಗತ್ತಿನ ಮೇಲೆ ಅತಿ ಹೆಚ್ಚು ಪ್ರಭಾವವನ್ನು ಬೀರಿದವು.

## ಮುಂದುವರಿದ ಚಟುವಟಿಕೆಗಳು

- ಫ್ರಾನ್ಸಿನ ಕ್ರಾಂತಿಯ ಪ್ರಧಾನ ಘಟನೆಗಳನ್ನು ವಿವರಣೆ ಸಹಿತವಾಗಿ ಸೇರಿಸಿಕೊಂಡು ಡಿಜಿಟಲ್ ಪ್ರೆಸೆಂಟೇಶನ್ ತಯಾರಿಸಿರಿ.
- ಫ್ರಾನ್ಸಿನಲ್ಲಿ ಮಾನವ ಹಕ್ಕುಗಳ ಘೋಷಣೆಯು ನಂತರದ ಸ್ವಾತಂತ್ರ್ಯ ಹೋರಾಟಗಳ ಮೇಲೆ ಹೇಗೆ ಪ್ರಭಾವ ಬೀರಿತು ಎಂದು ಅವಲೋಕಿಸಿರಿ.
- ಫ್ರಾನ್ಸಿನ ಕ್ರಾಂತಿಯ (ಟೈಂಲೈನ್) ಕಾಲರೇಖೆ, ಕ್ರಾಂತಿಯ ಪ್ರತಿ ಹಂತದಲ್ಲಿದ್ದ ನೇತಾರರು, ಅವರು ಮುಂದಿಟ್ಟ ಆಶಯಗಳು ಇತ್ಯಾದಿಗಳನ್ನು ಸೇರಿಸಿಕೊಂಡು ಡಿಜಿಟಲ್ ಪ್ರೆಸೆಂಟೇಶನ್ ಒಂದನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.



# 3
# ಸಮಾಜಶಾಸ್ತ್ರದ ಪರಿಕಲ್ಪನೆಯ ಮೂಲಕ ಸಾಮಾಜಿಕ ವಿಶ್ಲೇಷಣೆ




ಮಳೆಗಾಲದ ಕುರಿತಾದ ಅನುಭವವನ್ನು ಹಂಚಿಕೊಳ್ಳಲು ಅಧ್ಯಾಪಕರ ಸೂಚನೆಯ ಪ್ರಕಾರ ಅನು ತಯಾರಿಸಿದ ಟಿಪ್ಪಣಿಯ ಒಂದು ಭಾಗವನ್ನು ಇಲ್ಲಿ ನೀಡಲಾಗಿದೆ. ಅನು ಮತ್ತು ಅವಳ ಕುಟುಂಬವು ಎದುರಿಸುತ್ತಿರುವ ಯಾವ ಯಾವ ಸಮಸ್ಯೆಗಳು ಈ ಟಿಪ್ಪಣಿಯಲ್ಲಿ ಅಡಕವಾಗಿವೆ?

- ಮಳೆಗಾಲದಲ್ಲಿ ಉಂಟಾಗುವ ಉದ್ಯೋಗದ ಕೊರತೆ.
- 
- 




ಅನುವಿನ ಯೋಚನೆಯಂತೆ ಅವಳ ಸಮಸ್ಯೆಗಳಿಗೆ ಕಾರಣಗಳಾವುವು? ಹಣದ ಲಭ್ಯತೆಯ ಕೊರತೆಯೇ ತನ್ನ ಮತ್ತು ಕುಟುಂಬದ ಎಲ್ಲ ಸಮಸ್ಯೆಗಳಿಗೆ ಕಾರಣವಾಗಿದೆಯೆಂದು ಅನು ಕಂಡುಕೊಳ್ಳುತ್ತಾಳೆ. ತಾನು ಅನುಭವಿಸುವ ಸಮಸ್ಯೆಗಳಿಗೆ ಹಿನ್ನೆಲೆಯು ವೈಯಕ್ತಿಕ ಕಾರಣಗಳಾಗಿವೆಯೆಂದು ಅನು ಭಾವಿಸುತ್ತಾಳೆ. ಅನು ಈ ರೀತಿಯಲ್ಲಿ ಚಿಂತಿಸಲು ಕಾರಣವೇನು?

ವೈಯಕ್ತಿಕ ಸಮಸ್ಯೆಗಳ ಹಿಂದಿನ ಕಾರಣಗಳನ್ನು ಕಂಡುಹಿಡಿಯಲು ಹೆಚ್ಚಿನ ಜನರು ಸಾಮಾನ್ಯವಾಗಿ ಕಂಡುಬರುವ ವಿಚಾರಗಳನ್ನು ಅವಲಂಬಿಸುತ್ತಾರೆ. ವ್ಯಕ್ತಿಗಳು ತಮ್ಮ ಹಿಂದಿನ ಅನುಭವಗಳ ಹಿನ್ನೆಲೆಯಲ್ಲೂ ಸಮಸ್ಯೆಗಳ ಕಾರಣಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ. ಇತರರೊಂದಿಗಿನ ಸಂವಹನದ ಮೂಲಕ ಲಭಿಸುವ ಮಾಹಿತಿಗಳು ಮತ್ತು ಅನುಭವಗಳ ಮೂಲಕ ಕೆಲವರು ತಮ್ಮ ವೈಯಕ್ತಿಕ ಸಮಸ್ಯೆಗಳಿಗೆ ಕಾರಣಗಳನ್ನು ಕಂಡುಕೊಳ್ಳುತ್ತಾರೆ. ಸಮಾಜೀಕರಣ (Socialisation) ಪ್ರಕ್ರಿಯೆಯ ಮೂಲಕ ಲಭಿಸುವ ಜ್ಞಾನ ಮತ್ತು ಅನುಭವಗಳನ್ನುಪಯೋಗಿಸಿಕೊಂಡು ಸಾಮಾನ್ಯವಾಗಿ ಕೆಲವರು ವೈಯಕ್ತಿಕ ಸಮಸ್ಯೆಗಳನ್ನು ಸಮೀಪಿಸುತ್ತಾರೆ. ಇಂತಹ ಸಾಮಾನ್ಯ ಜ್ಞಾನದ ಆಧಾರದಲ್ಲಿ (Commonsense Knowledge) ವ್ಯಕ್ತಿಗಳು ತಮ್ಮ ಸಮಸ್ಯೆಗಳ ಕಾರಣಗಳನ್ನು ಹೆಚ್ಚಾಗಿ ಕಂಡುಕೊಳ್ಳುತ್ತಾರೆ.

## ಸಾಮಾನ್ಯ ಜ್ಞಾನ (Commonsense Knowledge)

ವೈಯಕ್ತಿಕವಾದ ಅನುಭವಗಳು, ಸಾಮಾಜಿಕ ಹಸ್ತಕ್ಷೇಪಗಳು, ಸಾಂಸ್ಕೃತಿಕ ತಿಳುವಳಿಕೆಗಳು ಎಂಬಿವುಗಳ ಮೂಲಕ ವ್ಯಕ್ತಿಗಳು ಜಗತ್ತಿನ ಕುರಿತು ಗಳಿಸುವ ಮೂಲಭೂತ ಮತ್ತು ದೈನಂದಿನ ತಿಳುವಳಿಕೆಗಳೇ ಸಾಮಾನ್ಯಜ್ಞಾನವಾಗಿದೆ. ಈ ತಿಳುವಳಿಕೆಗಳು ಔಪಚಾರಿಕ

ತಿಳುವಳಿಕೆಗಳಲ್ಲ. ಬದಲಾಗಿ ಊಹೆಗಳು ಅಥವಾ ದೈನಂದಿನ ಪ್ರಾಯೋಗಿಕ ಜ್ಞಾನಗಳೋ ಆಗಿರಬಹುದು. 'ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಅಸ್ತಮಿಸುತ್ತಾನೆ' ಎಂಬ ಜ್ಞಾನವು ಪ್ರಕೃತಿಯ ದೈನಂದಿನ ವಿದ್ಯಮಾನದ ಕುರಿತಾದ ವ್ಯಕ್ತಿಯೋರ್ವರ ತಿಳುವಳಿಕೆಯಾಗಿದೆ. ಇದರಂತೆ 'ಬೆಂಕಿಯನ್ನು ಮುಟ್ಟಿದರೆ ಸುಡಬಹುದು' ಎಂಬ ಜ್ಞಾನವು ಬೆಂಕಿಯಿಂದ ಉಂಟಾಗುವ ಅಪಘಾತ ಸಾಧ್ಯತೆಯ ಕುರಿತಾದ ಪ್ರಾಥಮಿಕ ತಿಳುವಳಿಕೆಯಾಗಿದೆ. ಈ ಜ್ಞಾನವನ್ನು ಅನುಭವದ ಮೂಲಕವೂ ನಿರೀಕ್ಷಣೆಯ ಮೂಲಕವೂ ಸಮಾಜೀಕರಣದ ಮೂಲಕವೂ ಪಡೆದುಕೊಳ್ಳುವುದಾಗಿದೆ.

## ಸಾಮಾನ್ಯ ಜ್ಞಾನ ಮತ್ತು ಸಾಮಾಜಿಕ ವಿಶ್ಲೇಷಣೆ (Commonsense Knowledge and Social Analysis)

ವ್ಯಕ್ತಿಗಳು ತಮ್ಮ ಸುತ್ತಲಿನ ಪ್ರಪಂಚದ ಕುರಿತಾದ ದೈನಂದಿನ ಅನುಭವಗಳ ಮೂಲಕ, ಅಭ್ಯಾಸಗಳ ಮೂಲಕ ಮತ್ತು ತಿಳುವಳಿಕೆಗಳ ಮೂಲಕ ಸಾಮಾನ್ಯಜ್ಞಾನವನ್ನು ನಿರ್ಮಿಸುತ್ತಾರೆಂದು ನೋಡಿದಿರಲ್ಲವೇ. ರೂಢಿಗಳು (Norms), ಅಭ್ಯಾಸಗಳು, ನಂಬಿಕೆಗಳು ಹಾಗೂ ವೈಯಕ್ತಿಕ ಅನುಭವಗಳ ಆಧಾರದಲ್ಲಿ ಇದು ರೂಪುಗೊಳ್ಳುತ್ತದೆ. ಸಾಮಾನ್ಯವಾಗಿ ಹೆಚ್ಚಿನ ಸಂದರ್ಭಗಳಲ್ಲಿ ಇದರ ಹಿಂದಿರುವ ಇತರ ವಾಸ್ತವಿಕತೆಗಳನ್ನು ಪರಿಶೀಲಿಸುವುದಿಲ್ಲ. ಅನು ಮತ್ತು ಅವಳ ಕುಟುಂಬವು ಸಾಲಬಾಧೆ (Indebtedness) ಎಂಬ ಸಾಮಾಜಿಕ ಸಮಸ್ಯೆಯನ್ನು ಎದುರಿಸುತ್ತಿದೆ. ಈ ಸಾಮಾಜಿಕ ಸಮಸ್ಯೆಯನ್ನು ಸಾಮಾನ್ಯ ಜ್ಞಾನದ ಮೂಲಕ ಮಾತ್ರ ವಿಶ್ಲೇಷಿಸಿದರೆ, ಅದರ ಹಿಂದಿನ ನಿಜವಾದ ಕಾರಣಗಳನ್ನು ಸಂಪೂರ್ಣವಾಗಿ ಕಂಡುಹಿಡಿಯಲು ಸಾಧ್ಯವಾಗಬಹುದೆ?

ಒಬ್ಬ ವ್ಯಕ್ತಿಯು ಬಡತನವನ್ನು ಅನುಭವಿಸಲಿರುವ ಕಾರಣಗಳು ಯಾವುವೆಂದು ಆಲೋಚಿಸಿ ನೋಡಿರಿ. ಆ ವ್ಯಕ್ತಿಯ ಸೋಮಾರಿತನ ಮತ್ತು ಕೆಲಸ ಮಾಡಲಿರುವ ಆಸಕ್ತಿಯ ಕೊರತೆಯೇ ಬಡತನಕ್ಕೆ ಕಾರಣವೆಂದು ಇತರರು ಭಾವಿಸಬಹುದು. ಬಡತನಕ್ಕೆ ಪ್ರಧಾನ ಕಾರಣ ವೈಯಕ್ತಿಕವಾದ ಪರಾಜಯ ಮಾತ್ರವಾಗಿದೆಯೆಂದು ಹಲವರು ಭಾವಿಸುತ್ತಾರೆ. ಇಂತಹ ತಿಳುವಳಿಕೆಯು ಸಾಮಾನ್ಯಜ್ಞಾನದ ಮೂಲಕ ರೂಪುಗೊಳ್ಳುತ್ತದೆ.

### ಸಾಮಾಜಿಕ ಸಮಸ್ಯೆ (Social Problem)

ಸಾಮಾಜಿಕ ಸಮಸ್ಯೆಯೆಂಬುದು ಸಮಾಜದಲ್ಲಿನ ಬಹುತೇಕ ಜನರನ್ನು ಬಾಧಿಸುವ ಸಮಸ್ಯೆ ಅಥವಾ ಸ್ಥಿತಿಯಾಗಿದೆ. ಒಬ್ಬ ವ್ಯಕ್ತಿಯನ್ನೋ ಅಥವಾ ಕೇವಲ ಕೆಲವೇ ವ್ಯಕ್ತಿಗಳನ್ನೋ ಮಾತ್ರ ಬಾಧಿಸುವ ಸಮಸ್ಯೆಗಳನ್ನು ಸಾಮಾಜಿಕ ಸಮಸ್ಯೆಗಳೆಂದು ಪರಿಗಣಿಸಲಾಗುವುದಿಲ್ಲ. ಸಾಮಾಜಿಕ ಸಮಸ್ಯೆಗಳನ್ನು ಸಮಾಜಕ್ಕೆ ಅನಪೇಕ್ಷಿತವಾದ ಅಥವಾ ಹಾನಿಕಾರಕವಾದ ವಿಚಾರವಾಗಿ ಪರಿಗಣಿಸಲಾಗುತ್ತದೆ. ಬಡತನ, ಅಸಮಾನತೆ, ತಾರತಮ್ಯ, ಪರಿಸರ ಮಲಿನೀಕರಣ ಎಂಬಿವುಗಳೆಲ್ಲಾ ಇದಕ್ಕೆ ಉದಾಹರಣೆಗಳಾಗಿವೆ.

ಸಾಮಾನ್ಯಜ್ಞಾನ ನಿರ್ಮಾಣವು ಹೇಗೆ ಉಂಟಾಗುತ್ತದೆ?

- ವೈಯಕ್ತಿಕ ಅನುಭವಗಳ ಮೂಲಕ
- ಸಾಮಾನ್ಯ ನಿರೀಕ್ಷಣೆಗಳ ಮೂಲಕ
- 
- 

ಸಾಮಾನ್ಯಜ್ಞಾನದ ಮೂಲಕ ಲಭಿಸುವ ತಿಳುವಳಿಕೆಗಳನ್ನು ನಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಎಲ್ಲ ಸಂದರ್ಭಗಳಲ್ಲಿ ಆಶ್ರಯಿಸಲು ಸಾಧ್ಯವೆ? ಯಾಕೆ?

ಸಮಾಜದಲ್ಲಿ ಕೆಲವು ಪ್ರದೇಶಗಳಲ್ಲಾದರೂ ಸಾಮಾನ್ಯಜ್ಞಾನದ ಆಧಾರದಲ್ಲಿ ಅಸ್ತಿತ್ವದಲ್ಲಿರುವ ಕೆಲವು ಹೇಳಿಕೆಗಳನ್ನು ಕೆಳಗೆ ಕೊಡಲಾಗಿದೆ.

1. *ಹವಾಗುಣ ಬದಲಾವಣೆಯು ಸ್ವಾಭಾವಿಕವಾಗಿ ಸಂಭವಿಸುತ್ತದೆ. ಮಾನವನ ಚಟುವಟಿಕೆಗಳಿಗೆ ಇದರಲ್ಲಿ ಯಾವುದೇ ಪಾತ್ರವಿಲ್ಲ.*

2. *ತುಂಬಾ ಹೆಚ್ಚಿನ ಸಮಯವನ್ನು ಕಲಿಕೆಗಾಗಿ ವಿನಿಯೋಗಿಸಿದರೆ ಮಾತ್ರವೇ ಉನ್ನತ ಅಂಕಗಳನ್ನು ಪಡೆಯಲು ಸಾಧ್ಯ.*

3. *ಹದಿಹರೆಯದವರು ಯಾವಾಗಲೂ ಬಂಡಾಯ ಪ್ರವೃತ್ತಿಯವರೂ ಬೇಜವಾಬ್ದಾರಿ ಸ್ವಭಾವದವರೂ ಆಗಿದ್ದಾರೆ.*

4. *ಹೊಟ್ಟೆ ತುಂಬಾ ಆಹಾರ ಸೇವಿಸುವುದು ಆರೋಗ್ಯಕ್ಕೆ ಉತ್ತಮವಾಗಿದೆ.*

5. *ತಾತ್ಕಾಲಿಕ ಮನೆಗಳನ್ನು ಒದಗಿಸುವುದರ ಮೂಲಕ ನಿರ್ವಸತಿ ಸಮಸ್ಯೆಯನ್ನು ನೀಗಿಸಬಹುದು.*

ಈ ಹೇಳಿಕೆಗಳು ಸಂಪೂರ್ಣವಾಗಿ ಸರಿಯಾಗಿವೆಯೇ ಎಂದು ನಾವು ವಿಶ್ಲೇಷಿಸೋಣ.

1. ಹವಾಗುಣ ಬದಲಾವಣೆಗೆ ಮಾನವರು ಜವಾಬ್ದಾರರಲ್ಲ ಎಂಬ ಹೇಳಿಕೆಯನ್ನು ಗಮನಿಸಿರಿ. ಹವಾಗುಣ ಬದಲಾವಣೆಯಿಂದ ಭೂಮಿಯಲ್ಲಿ ಯಾವ ಯಾವ ಸಮಸ್ಯೆಗಳುಂಟಾಗುತ್ತವೆ?

- ಜಾಗತಿಕ ತಾಪ
- 
- 
- 

ಮಾನವನ ಯಾವ ಯಾವ ಚಟುವಟಿಕೆಗಳು ಜಾಗತಿಕ ತಾಪಕ್ಕೆ ಕಾರಣವಾಗುತ್ತವೆ?

- ಪ್ಲಾಸ್ಟಿಕನ್ನು ಉರಿಸುವುದು
- 
- 
- 

ಇಂತಹ ವಿಚಾರಗಳನ್ನು ಗಮನಿಸಿದಾಗ ಹವಾಗುಣ ಬದಲಾವಣೆ ಮತ್ತು ಜಾಗತಿಕ ತಾಪಗಳಂತಹ ಸಮಸ್ಯೆಗಳ ಹಿಂದೆ ಮಾನವರ ಚಟುವಟಿಕೆಗಳಿಗೆ ಪ್ರಮುಖ ಪಾತ್ರವಿದೆಯೆಂದು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಆಗ ಹವಾಗುಣ ಬದಲಾವಣೆಗೆ ಸಂಬಂಧಿಸಿದ ಹೇಳಿಕೆಯು ಕೇವಲ ಸಾಮಾನ್ಯ ಜ್ಞಾನದ ಆಧಾರದಲ್ಲಿರುವ ಹೇಳಿಕೆಯಾಗಿದೆಯೆಂದು ತಿಳಿದುಕೊಳ್ಳಬಹುದು. ಹೀಗೆ ಇಂತಹ ಸಾಮಾನ್ಯಜ್ಞಾನದ ಮೂಲಕ ಲಭಿಸುವ ತಿಳುವಳಿಕೆಯು ಹೆಚ್ಚಿನ ಸಂದರ್ಭಗಳಲ್ಲಿ ಭಾಗಿಕವಾಗಿರುತ್ತದೆ.

2 'ತುಂಬಾ ಹೆಚ್ಚಿನ ಸಮಯವನ್ನು ಕಲಿಕೆಗಾಗಿ ವಿನಿಯೋಗಿಸಿದರೆ ಮಾತ್ರವೇ ಉನ್ನತ ಅಂಕಗಳನ್ನು ಗಳಿಸಲು ಸಾಧ್ಯ' ಎಂಬ ಹೇಳಿಕೆಯನ್ನು ಗಮನಿಸಿರಿ. ಇದು ಎಲ್ಲರ ವಿಚಾರದಲ್ಲೂ ಹೀಗೆಯೇ ಆಗಿದೆಯೆ? ವೈಯಕ್ತಿಕವಾದ ಕಲಿಕಾ ರೀತಿಗಳೂ ಕಲಿಕಾ ಶೈಲಿಗಳೂ ಕಲಿಕೆಯ ಮೇಲೆ ಪ್ರಭಾವ ಬೀರುವುದಿಲ್ಲವೆ? ಕಲಿಕೆಗಾಗಿ ಹೆಚ್ಚಿನ ಸಮಯವನ್ನು ವಿನಿಯೋಗಿಸುವುದರಿಂದ ಅದು ಕಾರ್ಯದಕ್ಷತೆಯಿಂದಿರಬೇಕೆಂದಿಲ್ಲ. ಕಲಿಕೆಯಲ್ಲಿ ಹಿರಿಮೆಯನ್ನು ಸಾಧಿಸಲು ಇದರೊಂದಿಗೆ ಇನ್ನಿತರ ಯಾವ ಯಾವ ಕಾರ್ಯಗಳನ್ನು ಮಾಡಬಹುದು?

- ಗುಂಪು ಸೇರಿ ಒಟ್ಟಿಗೆ ಕಲಿಯುವುದು
- ನಿಯಮಿತವಾದ ವಿರಾಮ ಮತ್ತು ವಿಶ್ರಾಂತಿಯನ್ನು ತೆಗೆದುಕೊಂಡು ಕಲಿಯುವುದು.
- 

ಆದುದರಿಂದ ತುಂಬಾ ಹೆಚ್ಚಿನ ಸಮಯವನ್ನು ಕಲಿಕೆಗಾಗಿ ವಿನಿಯೋಗಿಸಿದರೆ ಮಾತ್ರವೇ ಉನ್ನತ ಅಂಕಗಳನ್ನು ಗಳಿಸಲು ಸಾಧ್ಯವೆಂಬ ಹೇಳಿಕೆಯು ಕೇವಲ ಊಹಾಪೋಹ ಗಳಿಂದಲೋ ಅಭ್ಯಾಸಗಳಿಂದಲೋ ಮೂಡಿಬಂದ ಸಾಮಾನ್ಯಜ್ಞಾನವಾಗಿದೆ. ಸಾಮಾನ್ಯ ಜ್ಞಾನವು ಹೀಗೆ ಊಹಾಪೋಹಗಳನ್ನೋ ಅಭ್ಯಾಸಗಳನ್ನೋ ಆಶ್ರಯಿಸಿಕೊಂಡಿರುತ್ತದೆ.

3 ಹದಿಹರೆಯದವರು ಯಾವಾಗಲೂ ಬಂಡಾಯಪ್ರವೃತ್ತಿಯವರೂ ಬೇಜವಾಬ್ದಾರಿ ಹೊಂದಿದವರೂ ಆಗಿದ್ದಾರೆ ಎಂಬುದು ಸಾಮಾನ್ಯವಾದ ನಂಬಿಕೆಯಾಗಿದೆ. ಹೀಗೆ ಸಾಮಾನ್ಯವಾದ ನಂಬಿಕೆಗಳನ್ನು ಮತ್ತು ಆಶಯಗಳನ್ನು ಸಿದ್ಧಮಾದರಿಗಳೆಂದು (Stereotype) ಅರ್ಥೈಸಲಾಗುತ್ತದೆ. ಹೀಗೆ ನಿರೀಕ್ಷಣೆ ಮಾಡಿದರೆ ಇದು ಸಿದ್ಧಮಾದರಿಗಳನ್ನು ಆಧಾರವಾಗಿಟ್ಟುಕೊಂಡಿರುವ ಹೇಳಿಕೆಯಾಗಿದೆಯೆಂದು ತಿಳಿದುಕೊಳ್ಳಬಹುದು. ಈ ಸಿದ್ಧಮಾದರಿಯು ಎಲ್ಲಾ ಹದಿಹರೆಯದವರು ಕಾನೂನುಗಳನ್ನು ಅವಗಣಿಸುವವರು ಹಾಗೂ ಬೇಜವಾಬ್ದಾರಿಯುಳ್ಳವರಾಗಿದ್ದಾರೆ ಎಂಬ ತಪ್ಪು ಕಲ್ಪನೆಯನ್ನು ಸೃಷ್ಟಿಸುತ್ತದೆ. ಆದರೆ ವಾಸ್ತವದಲ್ಲಿ ಹದಿಹರೆಯದವರು ನಿಜಕ್ಕೂ ಒಂದು ವೈವಿಧ್ಯಮಯ ಗುಂಪಾಗಿದ್ದಾರೆ. ಹೆಚ್ಚಿನವರು ಜವಾಬ್ದಾರಿ ಪ್ರಜ್ಞೆಯುಳ್ಳವರೂ ಪರಸ್ಪರ ಗೌರವವನ್ನು ವ್ಯಕ್ತಪಡಿಸುವವರೂ ಆಗಿದ್ದಾರೆ ಎಂಬುದನ್ನು ಕಂಡುಕೊಳ್ಳಬಹುದು. ಆದರೆ ಸಿದ್ಧಮಾದರಿಗಳನ್ನು ಆಧಾರವಾಗಿಟ್ಟುಕೊಂಡಿರುವ ಇಂತಹ ಹೇಳಿಕೆಗಳು ಹದಿಹರೆಯದವರಲ್ಲಿ ನಮಗಿರುವ ವಿಶ್ವಾಸಗಳ ಕೊರತೆಯೆಡೆಗೆ ಕೊಂಡೊಯ್ಯುತ್ತದೆ. ಅದೂ ಅಲ್ಲದೆ ಇದು ಅವರ ನಡವಳಿಕೆಗಳ ಕುರಿತಾದ ತಪ್ಪು ಕಲ್ಪನೆಗಳಿಗೆ ಕಾರಣವಾಗುತ್ತದೆ. ಹೀಗೆ ಸಾಮಾನ್ಯ ಜ್ಞಾನವು ಹೆಚ್ಚಿನ ಸಂದರ್ಭಗಳಲ್ಲಿ ಸಿದ್ಧಮಾದರಿಗಳನ್ನು ಆಶ್ರಯಿಸುತ್ತದೆ.

4 ಹೊಟ್ಟೆ ತುಂಬಾ ಆಹಾರ ಸೇವಿಸುವುದು ಆರೋಗ್ಯಕ್ಕೆ ಒಳಿತಾಗಿದೆ ಎಂಬ ಹೇಳಿಕೆಯೂ ಸಾಮಾನ್ಯಜ್ಞಾನದ ಭಾಗವೇ ಆಗಿದೆ. ಪೋಷಕಾಹಾರಗಳ ಕುರಿತು ಮತ್ತು ಆರೋಗ್ಯದ ಕುರಿತು ಸವಿವರವಾಗಿ ಅರ್ಥೈಸಿಕೊಳ್ಳದೆ ದೈನಂದಿನ ನಿರೀಕ್ಷಣೆಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಇಂತಹ ಹೇಳಿಕೆಗಳು ಉಂಟಾಗುತ್ತವೆ. ಸಾಮಾನ್ಯವಾಗಿ ಈ ರೀತಿಯ ಒಂದು ಆಶಯದ ಕುರಿತಾದ ಪರಿಪೂರ್ಣವಲ್ಲದ ತಿಳುವಳಿಕೆಯನ್ನು ಮಾತ್ರವೇ ಸಾಮಾನ್ಯ ಜ್ಞಾನವು ಒದಗಿಸುತ್ತದೆ. ಸಾಮಾನ್ಯ ಜ್ಞಾನವು ಹೆಚ್ಚಿನ ಸಂದರ್ಭಗಳಲ್ಲಿ ವೈಜ್ಞಾನಿಕವಾದ ನಿರೀಕ್ಷಣೆಗಳ ಮೂಲಕ ಮತ್ತು ಅಧ್ಯಯನಗಳ ಆಧಾರದಲ್ಲಿ ರೂಪುಗೊಂಡವುಗಳಲ್ಲ.

5 ನಿರ್ವಸತಿ ಎಂಬ ಸಮಸ್ಯೆಯನ್ನು ಸಾಮಾನ್ಯ ಜ್ಞಾನದ ಆಧಾರದಲ್ಲಿ ಅವಲೋಕಿಸಿ ನೋಡಿರಿ. ಅದೊಂದು ವೈಯಕ್ತಿಕ ಆಯ್ಕೆ (Personal Choice) ಮಾತ್ರವಾಗಿಯೋ ಅಥವಾ ಶಾಶ್ವತವಾದ ವಸತಿಗಳನ್ನು ಖಾತರಿಪಡಿಸಲು ಪ್ರಯತ್ನಿಸದ ಫಲವಾಗಿಯೋ ಉಂಟಾದ ಸಮಸ್ಯೆಯಾಗಿ ಕೆಲವರು ಆಲೋಚಿಸಬಹುದು. ಹೀಗೆ ಆಲೋಚಿಸುವವರು ತಾತ್ಕಾಲಿಕವಾದ ಸುರಕ್ಷೆಯನ್ನೋ ವಸತಿಗಳನ್ನೋ ಉದ್ಯೋಗ ತರಬೇತಿಯನ್ನೋ ನೀಡಿ ಈ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಬಹುದೆಂದು ಭಾವಿಸಬಹುದು. ಆದರೆ ನಿರ್ವಸತಿ ಸಮಸ್ಯೆಯ ಹಿಂದೆ ಇನ್ನಿತರ ಅನೇಕ ಕಾರಣಗಳಿಲ್ಲವೇ. ಅವು ಯಾವುವು?

- ಆರ್ಥಿಕ ಅಸ್ಥಿರತೆ
- ನಿರುದ್ಯೋಗ
- 
- 

ಸಾಮಾನ್ಯಜ್ಞಾನವು ಹೆಚ್ಚಿನ ಸನ್ನಿವೇಶಗಳಲ್ಲಿ ಸಮಸ್ಯೆಗಳ ವಾಸ್ತವಿಕವಾದ ಕಾರಣ ಗಳನ್ನು ಸಂಪೂರ್ಣವಾಗಿ ಕಂಡುಹಿಡಿಯುವುದರಲ್ಲಿ ಪರಾಜಯಗೊಳ್ಳುತ್ತದೆ. ಈ ಹಿಂದೆ ಸೂಚಿಸಲಾದ ಐದು ಹೇಳಿಕೆಗಳಲ್ಲಿ ಪ್ರತಿಪಾದಿಸಲಾದ ವಿಷಯಗಳೆಲ್ಲವೂ ಸಂಕೀರ್ಣವಾದ ಸಾಮಾಜಿಕ ಸಮಸ್ಯೆಗಳೊಂದಿಗೆ ಸಂಬಂಧಿಸಿಕೊಂಡಿವೆಯೆಂಬುದನ್ನು ಕಂಡುಕೊಳ್ಳಬಹುದು. ಸಾಮಾನ್ಯಜ್ಞಾನವನ್ನುಪಯೋಗಿಸಿಕೊಂಡು ವೈಯಕ್ತಿಕ ಸಮಸ್ಯೆ ಗಳನ್ನು ಮತ್ತು ಸಂಕೀರ್ಣವಾದ ಸಾಮಾಜಿಕ ಸಮಸ್ಯೆಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ.




ಸಾಮಾನ್ಯಜ್ಞಾನಕ್ಕೆ ಸಂಬಂಧಿಸಿ ಇನ್ನೂ ಅನೇಕ ಉದಾಹರಣೆಗಳನ್ನು ಕಂಡುಹಿಡಿದು ಆ ಮೂಲಕ ಗಳಿಸುವ ಜ್ಞಾನದ ಪರಿಮಿತಿಗಳ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

ವೈಯಕ್ತಿಕ ಸಮಸ್ಯೆಗಳನ್ನು ಮತ್ತು ಸಾಮಾಜಿಕ ಸಮಸ್ಯೆಗಳನ್ನು ಸಾಮಾನ್ಯಜ್ಞಾನದ ಮೂಲಕ ಮಾತ್ರ ಅವಲೋಕಿಸಿದರೆ ಅವುಗಳಿಗಿರುವ ಸರಿಯಾದ ಪರಿಹಾರಗಳ ಕುರಿತು ಸಂಪೂರ್ಣ ಜ್ಞಾನ ಲಭಿಸಲಾರದು. ಅನು ತನ್ನ ಅನುಭವ ಟಿಪ್ಪಣಿಯಲ್ಲಿ ಸಮಸ್ಯೆಗಳ ಕಾರಣಗಳ ಕುರಿತು ಅವಲೋಕಿಸಿರುವುದು ಕೇವಲ ಸಾಮಾನ್ಯಜ್ಞಾನದ ಆಧಾರದಲ್ಲಿ ಮಾತ್ರವಾಗಿದೆಯೆಂದು ತಿಳಿದುಕೊಳ್ಳಬಹುದು.

ತಾನು ಮತ್ತು ತನ್ನ ಕುಟುಂಬವು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚಿಂತಿಸಿದ ಅನುವಿಗೆ ಹಣದ ಕೊರತೆಯೇ ಈ ಎಲ್ಲಾ ಸಮಸ್ಯೆಗಳಿಗೆ ಪ್ರಧಾನ ಕಾರಣವಾಗಿ ತೋರಿತು. ಆದರೆ ಅನುವಿನ ಸಮಸ್ಯೆಗಳಿಗೆ ಕಾರಣವಾಗಬಹುದಾದ ಇನ್ನೂ ಅನೇಕ ಘಟಕಗಳಿಲ್ಲವೇ. ಅವು ಯಾವುವು?



| ಸಮಸ್ಯೆಗಳು | ಘಟಕಗಳು |
|---|---|
| ಅನುವಿನ ಕುಟುಂಬಕ್ಕೆ ಸ್ಥಿರವಾದ ಆದಾಯದ ಮೂಲವಿಲ್ಲ. | ಆರ್ಥಿಕ |
| ಹವಾಗುಣದ ಬದಲಾವಣೆಗೆ ಹೊಂದಿಕೊಂಡು ಆದಾಯದಲ್ಲೂ ವ್ಯತ್ಯಾಸವುಂಟಾಗುತ್ತದೆ. | ಪರಿಸರ |
| ಮಳೆಗಾಲದಲ್ಲಿ ಉಂಟಾಗುವ ನಿರುದ್ಯೋಗ (ಪರ್ಯಾಯ ವ್ಯವಸ್ಥೆಯನ್ನು ಒದಗಿಸುವ ಮೂಲಕ ಆರ್ಥಿಕ ಸಮಸ್ಯೆಯನ್ನು ಪರಿಹರಿಸಲು ಮಧ್ಯಪ್ರವೇಶಿಸುವಲ್ಲಿ ಸರಕಾರದ ಇತಿಮಿತಿಗಳು) | ಆಡಳಿತಾತ್ಮಕ |
| ವಿಭಿನ್ನ ಭೌಗೋಳಿಕ ವಲಯಗಳಲ್ಲಿ ಜೀವಿಸುವವರು ಅನುಭವಿಸುವ ಸಮಸ್ಯೆಗಳು | ಭೌಗೋಳಿಕವಾದ ಅಸಮಾನತೆಗಳು |

ಇಲ್ಲಿ ಪರಿಸರ, ಆಡಳಿತಾತ್ಮಕ, ಭೌಗೋಳಿಕ ಅಸಮಾನತೆ ಇತ್ಯಾದಿ ಘಟಕಗಳು ಅನುವಿನ ಕೌಟುಂಬಿಕ ಸಮಸ್ಯೆಗಳಿಗೆ ಕಾರಣವಾಗಿವೆ ಎಂಬುದನ್ನು ತಿಳಿದುಕೊಳ್ಳಬಹುದು. ಅನುವಿನ ಈ ಸಮಸ್ಯೆಗಳಿಗೆ ಹಿನ್ನೆಲೆ ಕೇವಲ ಹಣದ ಕೊರತೆ ಮಾತ್ರವಲ್ಲವೆಂದೂ ಇನ್ನಿತರ ಅನೇಕ ಸಾಮಾಜಿಕ ಘಟಕಗಳು ಕೂಡಾ ಕಾರಣವಾಗಿವೆಯೆಂದೂ ನೀವು ಗಮನಿಸಿದಿರಲ್ಲವೇ.

### ಸಾಮಾಜಿಕ ಘಟಕಗಳು (Social Factors)

ಸಾಮಾಜಿಕ ಘಟಕಗಳು ವ್ಯಕ್ತಿಗಳ ನಡವಳಿಕೆ, ಮನೋಭಾವ, ಸಂದರ್ಭಗಳು, ಆಯ್ಕೆ ಎಂಬಿವುಗಳ ಮೇಲೆ ಪ್ರಭಾವ ಬೀರುವ ವಿವಿಧ ಘಟಕಗಳನ್ನು ಒಳಗೊಂಡಿವೆ. ಕುಟುಂಬ, ವಿದ್ಯಾಭ್ಯಾಸ, ಸಮವಯಸ್ಕರ ಗುಂಪುಗಳು, ಮತ, ಜಾತಿ ವ್ಯವಸ್ಥೆ, ಆರ್ಥಿಕ ಸ್ಥಿತಿ, ಪರಿಸರ, ಸಾಂಸ್ಕೃತಿಕ ನಮ್ಯತೆಗಳು, ಮೌಲ್ಯಗಳು, ಆಡಳಿತ ವ್ಯವಸ್ಥೆಗಳು, ರಾಜಕೀಯ, ತಂತ್ರಜ್ಞಾನ, ವಾರ್ತಾ ಮಾಧ್ಯಮಗಳು ಇತ್ಯಾದಿ ಇದರಲ್ಲಿ ಒಳಗೊಂಡಿವೆ.

ಇಲ್ಲಿ ಅನುವಿನ ವೈಯಕ್ತಿಕ ಸಮಸ್ಯೆಯು ಒಂದು ಸಾಮಾಜಿಕ ಸಮಸ್ಯೆಯೂ ಕೂಡಾ ಆಗಿದೆಯೆಂದು ನಮಗೆ ಕಂಡುಕೊಳ್ಳಬಹುದು. ಯಾವುದೇ ಒಂದು ವೈಯಕ್ತಿಕವಾದ ಸಮಸ್ಯೆಯ ಹಿಂದೆಯೂ ಇಂತಹ ಸಾಮಾಜಿಕ ಘಟಕಗಳ ಪ್ರಭಾವವಿರಬಹುದು. ಅವುಗಳನ್ನು ಅರ್ಥೈಸಿಕೊಂಡು ಸಮಸ್ಯೆಗಳ ವಾಸ್ತವಿಕ ಕಾರಣಗಳನ್ನು ಕಂಡುಹಿಡಿದರೆ ಮಾತ್ರವೇ ನಮಗೆ ವೈಯಕ್ತಿಕ ಸಮಸ್ಯೆಗಳನ್ನು ಮತ್ತು ಅವುಗಳ ಕಾರಣಗಳನ್ನು ಇನ್ನಷ್ಟೂ ಆಳವಾಗಿ ಹಾಗೂ ಕೂಲಂಕಷವಾಗಿ ತಿಳಿದುಕೊಳ್ಳಲು ಸಾಧ್ಯ.

ನಿಮಗೆ ಇತ್ತೀಚೆಗೆ ಉಂಟಾದ ವೈಯಕ್ತಿಕ ಸಮಸ್ಯೆಯೊಂದನ್ನು ಬರೆಯಿರಿ. ಬಳಿಕ ಈ ಸಮಸ್ಯೆಯ ಮೇಲೆ ಪ್ರಭಾವ ಬೀರಿದ ಸಾಮಾಜಿಕ ಘಟಕಗಳಾವುವೆಂಬುದನ್ನು ದಾಖಲಿಸಿರಿ.

ಚಿತ್ರಗಳನ್ನು ಗಮನಿಸಿರಿ.








ಇಲ್ಲಿರುವ ಪ್ರತಿಯೊಂದು ಚಿತ್ರವನ್ನು ನಿರೀಕ್ಷಿಸುವಾಗ ಕಂಡುಕೊಳ್ಳಲು ಸಾಧ್ಯವಾಗುವ ವೈಯಕ್ತಿಕ ಸಮಸ್ಯೆಗಳು ಮತ್ತು ಅವುಗಳ ಮೇಲೆ ಪ್ರಭಾವ ಬೀರುವ ಸಾಮಾಜಿಕ ಘಟಕಗಳನ್ನು ಪಟ್ಟಿಯಲ್ಲಿ ದಾಖಲಿಸಿರಿ.

| ಕ್ರಮಸಂಖ್ಯೆ | ವೈಯಕ್ತಿಕ ಸಮಸ್ಯೆಗಳು | ಸಾಮಾಜಿಕ ಘಟಕಗಳು |
|---|---|---|
| 1 | | |
| 2 | | |
| 3 | | |

ವೈಯಕ್ತಿಕ ಸಮಸ್ಯೆಗಳ ಹಿಂದೆ ಇನ್ನಿತರ ಅನೇಕ ಸಾಮಾಜಿಕ ಘಟಕಗಳು ಕೂಡಾ ಇವೆಯೆಂದು ತಿಳಿಯಿತಲ್ಲವೇ. ಈ ಘಟಕಗಳನ್ನು ಕೂಲಂಕಷವಾಗಿ ವಿಶ್ಲೇಷಿಸುವ ಮೂಲಕ ಸಾಮಾಜಿಕ ಸಮಸ್ಯೆಗಳ ಕಾರ್ಯಕಾರಣ ಸಂಬಂಧಗಳನ್ನು (cause-effect relationships) ಮತ್ತು ಪರಿಣಾಮಗಳನ್ನು (Consequences) ತಿಳಿದುಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ಈ ರೀತಿಯಲ್ಲಿ ಗಮನಿಸಿದಾಗ ವೈಯಕ್ತಿಕ ಸಮಸ್ಯೆಗಳು ವಿಶಾಲವಾದ ಸಾಮಾಜಿಕ ರಚನೆಗಳೊಂದಿಗೆ (Social Structure) ಸಂಬಂಧವನ್ನು ಹೊಂದಿವೆಯೆಂಬುದನ್ನು ತಿಳಿದುಕೊಳ್ಳಬಹುದು.

ಸಾಮಾಜಿಕ ಸಂಬಂಧಗಳು, ಸಾಮಾಜಿಕ ಸಂಸ್ಥೆಗಳು, ಸಾಮಾಜಿಕ ರಚನೆಗಳು ಮತ್ತು ಸಾಮಾಜಿಕ ಸಮಸ್ಯೆಗಳು ವ್ಯಕ್ತಿಗಳನ್ನು ಮತ್ತು ಸಮಾಜವನ್ನು ಯಾವ ಯಾವ ವಿಧದಲ್ಲಿ ಬಾಧಿಸುತ್ತವೆಯೆಂಬುದನ್ನು ಪರಿಶೀಲಿಸುವ ಪ್ರಕ್ರಿಯೆಯನ್ನು ಸಾಮಾಜಿಕ ವಿಶ್ಲೇಷಣೆ (Social Analysis) ಎನ್ನುತ್ತಾರೆ. ಸಾಮಾಜಿಕ ವಿಶ್ಲೇಷಣೆಯ ಮೂಲಕ ವಿವಿಧ ಸಾಮಾಜಿಕ ಸನ್ನಿವೇಶಗಳ ಮೇಲೆ ಪ್ರಭಾವ ಬೀರುವ ಘಟಕಗಳ ಕುರಿತು ಆಳವಾದ ತಿಳುವಳಿಕೆಯನ್ನುಂಟುಮಾಡಲು ಹಾಗೂ ಅವುಗಳನ್ನು ಉತ್ತಮಪಡಿಸುವುದಕ್ಕೆ ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡಲು ಸಾಧ್ಯವಾಗುತ್ತದೆ.

## ಸಮಾಜಶಾಸ್ತ್ರ (Sociology)

ಸಮಾಜಶಾಸ್ತ್ರವು ಸಮಾಜದ ಕುರಿತಾದ ವೈಜ್ಞಾನಿಕ ಅಧ್ಯಯನವಾಗಿದೆ. ಸಮಾಜಶಾಸ್ತ್ರಕ್ಕೆ ಸಮಾಜದಲ್ಲಿರುವ ಸಾಮಾಜಿಕ ಸಂಬಂಧಗಳನ್ನು, ಸಾಮಾಜಿಕ ಸಂಸ್ಥೆಗಳನ್ನು ಮತ್ತು ರಚನೆಗಳನ್ನು ನಿರೀಕ್ಷಣೆ ಮಾಡಲು, ವಿಶ್ಲೇಷಿಸಲು ಹಾಗೂ ವ್ಯಾಖ್ಯಾನಿಸಲು ಸಾಧ್ಯವಾಗುತ್ತದೆ. ಕಾರ್ಲ್ ಮಾರ್ಕ್ಸ್, ಎಮಿಲ್ ದುರ್ಖಿಂ, ಮಾಕ್ಸ್ ವೆಬ್ಬರ್ ಮುಂತಾದವರು ಸಮಾಜಶಾಸ್ತ್ರದ ಆರಂಭಕಾಲದ ಚಿಂತಕರಲ್ಲಿ ಪ್ರಮುಖರಾಗಿದ್ದರು. ಸಾಮಾಜಿಕ ಸಂಬಂಧಗಳು **(Social Relationships)**, ಸಾಮಾಜಿಕ ಸಂಸ್ಥೆಗಳು **(Social Institutions)** ಸಾಮಾಜಿಕ ರಚನೆಗಳು **(Social Structure)** ಎಂಬಿವು ಸಾಮಾಜಿಕ ವಿಶ್ಲೇಷಣೆಗಾಗಿ ಸಮಾಜಶಾಸ್ತ್ರದಲ್ಲಿ ಉಪಯೋಗಿಸುವ ಕೆಲವು ಪ್ರಧಾನ ಪರಿಕಲ್ಪನೆಗಳಾಗಿವೆ.

ಸಾಮಾಜಿಕ ಸಂಬಂಧಗಳೆಂದರೆ ಸಮಾಜದಲ್ಲಿ ವ್ಯಕ್ತಿಗಳು ಪರಸ್ಪರ ರೂಪಿಸಿಕೊಳ್ಳುವ ಸಂಬಂಧಗಳು ಮತ್ತು ಹಸ್ತಕ್ಷೇಪಗಳಾಗಿವೆ. ಸಾಮಾಜಿಕ ರಚನೆ ಮತ್ತು ಸಾಮಾಜಿಕ ಸಂಸ್ಥೆಗಳು ಸಾಮಾಜಿಕ ಸಂಬಂಧಗಳಿಗೆ ಆಧಾರವಾಗಿವೆ. ಒಂದು ಸಾಮಾಜಿಕ ಸಂಸ್ಥೆ ಎಂಬ ನೆಲೆಯಲ್ಲಿ ಕುಟುಂಬದ ಸದಸ್ಯರ ಮಧ್ಯೆ ಇರುವ ಪರಸ್ಪರ ಸಹಕಾರ, ಕಾಳಜಿ, ಎಚ್ಚರಿಕೆ, ವಾತ್ಸಲ್ಯ ಎಂಬಿವುಗಳು ಹಾಗೂ ಸ್ನೇಹಿತರೊಂದಿಗಿನ ಗೆಳೆತನದ ಮೂಲಕ ಲಭಿಸುವ ಸುದೃಢವಾದ ಸಂಬಂಧಗಳು, ಸಂಪರ್ಕಗಳು, ಒಕ್ಕೂಟಗಳು ಇತ್ಯಾದಿಗಳೆಲ್ಲವೂ ಸಾಮಾಜಿಕ ಸಂಬಂಧಗಳಿಗೆ ಉದಾಹರಣೆಗಳಾಗಿವೆ.

ಸಾಮಾಜಿಕ ಸಂಸ್ಥೆಗಳು ಸಾಮಾಜಿಕ ಸಂಬಂಧಗಳನ್ನು ಸುಸ್ಥಿರಗೊಳಿಸಲು ಹಾಗೂ ನಿಯಂತ್ರಿಸಲು ಸಮಾಜವು ಸ್ಥಾಪಿಸಿದ ನಿಯಮಗಳ ಚೌಕಟ್ಟಾಗಿದೆ. ಇವು ಸಮಾಜದ ದೃಷ್ಟಿಕೋನಗಳನ್ನು ವ್ಯಾಖ್ಯಾನಿಸುವುದರೊಂದಿಗೆ ನಮ್ಮ ಕಾರ್ಯಚಟುವಟಿಕೆಗಳನ್ನು ಮತ್ತು ಕಾರ್ಯವಿಧಾನಗಳನ್ನು ಕ್ರಮೀಕರಿಸುತ್ತವೆ ಮತ್ತು ರೂಪಿಸುತ್ತವೆ. ಇದರೊಂದಿಗೆ ಸಾಮಾನ್ಯವಾಗಿ ಅಂಗೀಕರಿಸಲಾದ ಮೌಲ್ಯಗಳನ್ನು ಸ್ವಾಯತ್ತಗೊಳಿಸಿ ಅದನ್ನು ವ್ಯಕ್ತಿಗಳ ಕಾರ್ಯಚಟುವಟಿಕೆಗಳಲ್ಲಿ ಪ್ರತಿಬಿಂಬಿಸುವಂತೆ ಮಾಡುತ್ತವೆ ಮತ್ತು ಸಮಾಜವನ್ನು ಪ್ರಗತಿಯತ್ತ ಸಾಗಿಸುತ್ತವೆ. ಕುಟುಂಬ, ವಿವಾಹ, ಮತ, ರಾಜಕೀಯ ಸಂಸ್ಥೆಗಳು, ಆರ್ಥಿಕ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ನ್ಯಾಯ ವ್ಯವಸ್ಥೆಗಳು ಇತ್ಯಾದಿ ಇದಕ್ಕೆ ಉದಾಹರಣೆಗಳಾಗಿವೆ.

ಸಾಮಾಜಿಕ ರಚನೆಯು ವ್ಯಕ್ತಿಗಳಿಗೆ ಸಮಾಜದಲ್ಲಿರುವ ಅಂತಸ್ತು (Status), ಪಾತ್ರ (Role), ಅಸ್ತಿತ್ವ, ಜವಾಬ್ದಾರಿ ಮುಂತಾದವುಗಳನ್ನು ವಿಶದೀಕರಿಸುತ್ತದೆ ಮತ್ತು ಕಾರ್ಯಗತಗೊಳಿಸುತ್ತದೆ. ಸಮಾಜದ ನಮ್ಯತೆಗಳು (ಕಟ್ಟಳೆಗಳು, Norms), ನಿಯಮಗಳು ಇತ್ಯಾದಿ ಇದಕ್ಕೆ ಉದಾಹರಣೆಗಳಾಗಿವೆ. ಇವು ಸಮಾಜಕ್ಕೆ ಸುವ್ಯವಸ್ಥೆ ಮತ್ತು ಸ್ಥಿರತೆಯನ್ನು ನೀಡಲು ಸಹಾಯಕವಾಗುತ್ತವೆ.

ಅನುವು ಅನುಭವಿಸುತ್ತಿರುವ ಸಮಸ್ಯೆಯ ವಿವಿಧ ಅಂಶಗಳು ವಿಶಾಲವಾದ ಸಾಮಾಜಿಕ ರಚನೆಗಳೊಂದಿಗೆ ಸಂಬಂಧಿಸಿವೆಯೆಂದು ತಿಳಿಯಿತಲ್ಲವೇ. ಸಾಮಾಜಿಕ ಪರಿಕಲ್ಪನೆ (Sociological Imagination) ಯೆಂಬುದು ಹೀಗೆ ವೈಯಕ್ತಿಕ ಸಮಸ್ಯೆಗಳು ವಿಶಾಲವಾದ ಸಾಮಾಜಿಕ ರಚನೆಗಳಿಗೆ ಸಂಬಂಧಿಸಿಕೊಂಡಿವೆಯೆಂದು ಗುರುತಿಸುವ ಮತ್ತು ವಿಶ್ಲೇಷಿಸುವ ಕೌಶಲ್ಯವಾಗಿದೆ. ಅಮೇರಿಕಾದ ಸಮಾಜಶಾಸ್ತ್ರಜ್ಞನಾದ ಚಾರ್ಲ್ಸ್ ರೈಟ್ ಮಿಲ್ಸ್ 1959ರಲ್ಲಿ ರಚಿಸಿದ 'ದಿ ಸೋಶ್ಯೋಲಜಿಕಲ್ ಇಮಾಜಿನೇಶನ್' (The Sociological Imagination) ಎಂಬ ಪುಸ್ತಕದಲ್ಲಿ ಸಮಾಜಶಾಸ್ತ್ರ ಪರಿಕಲ್ಪನೆಯನ್ನು ಮೊದಲ ಬಾರಿಗೆ ಮಂಡಿಸಲಾಯಿತು. ವೈಯಕ್ತಿಕ ಸಮಸ್ಯೆಗಳನ್ನು ವಿಶಾಲವಾದ ಸಾಮಾಜಿಕ ರಚನೆಯ ಭಾಗವಾಗಿ ಕಾಣಲು ಸಹಾಯಕವಾಗುವ ಒಂದು ಕೌಶಲ್ಯವಾಗಿ ಈ ಪರಿಕಲ್ಪನೆಯನ್ನು ಅವರು ಮುಂದಿರಿಸಿದರು. ಸಮಾಜಶಾಸ್ತ್ರ ಪರಿಕಲ್ಪನೆಯು ವೈಯಕ್ತಿಕ ಸಮಸ್ಯೆಗಳನ್ನು ಮತ್ತು ಅವುಗಳ ಕಾರಣಗಳನ್ನು ಗುರುತಿಸಿಕೊಂಡು ಅವುಗಳನ್ನು ವಿಶಾಲವಾದ ನಿರೀಕ್ಷಣೆ ಮತ್ತು ವಿಶ್ಲೇಷಣೆಗೆ ಒಳಪಡಿಸಿಕೊಂಡು ವಿವರಿಸುವುದಕ್ಕಿರುವ ವಿಧಾನವನ್ನು ನಮ್ಮ ಮುಂದಿಡುತ್ತದೆ.



ಚಾರ್ಲ್ಸ್ ರೈಟ್ ಮಿಲ್ಸ್

## ಸಮಾಜಶಾಸ್ತ್ರ ಪರಿಕಲ್ಪನೆ ಮತ್ತು ಸಾಮಾಜಿಕ ವಿಶ್ಲೇಷಣೆ (Sociological Imagination and Social Analysis)

ಎಲ್ಲಾ ವೈಯಕ್ತಿಕ ಸಮಸ್ಯೆಗಳ ಹಿಂದಿರುವ ಸಾಮಾಜಿಕ ಕಾರಣಗಳನ್ನು ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕ ಕಂಡುಹಿಡಿಯಲು ಸಾಧ್ಯವಿದೆ. ಸಾಮಾಜಿಕ ರಚನೆಗಳು ಹೇಗೆ ನಮ್ಮ ಹಾಗೂ ಇತರರ ಜೀವನದ ಮೇಲೆ ಪ್ರಭಾವ ಬೀರುತ್ತವೆಯೆಂದು ತಿಳಿದುಕೊಳ್ಳಲು ಸಮಾಜಶಾಸ್ತ್ರ ಪರಿಕಲ್ಪನೆಯು ಸಹಾಯಕವಾಗಿದೆ. ವೈಯಕ್ತಿಕವಾದ ಸನ್ನಿವೇಶಗಳಿಂದ ಹೊರಗೆ ಬರಲು ಮತ್ತು ವಿಶಾಲವಾದ ಸಾಮಾಜಿಕ ರಚನೆಗಳ ಹಿನ್ನೆಲೆಯಲ್ಲಿ ಸ್ವಂತ ಅನುಭವಗಳನ್ನು ಮತ್ತು ಜೀವನದ ಸ್ಥಿತಿಗತಿಗಳನ್ನು ಅರ್ಥೈಸಿಕೊಳ್ಳಲು ಸಮಾಜಶಾಸ್ತ್ರ ಪರಿಕಲ್ಪನೆಯು ವ್ಯಕ್ತಿಗಳನ್ನು ಪ್ರಾಪ್ತರನ್ನಾಗಿಸುತ್ತದೆ. ಸಮಾಜಶಾಸ್ತ್ರ ಪರಿಕಲ್ಪನೆಯ ವಿಶೇಷತೆಗಳನ್ನು ಪರಿಶೀಲಿಸೋಣ.

### 1. ವೈಯಕ್ತಿಕ ದೃಷ್ಟಿಕೋನವನ್ನು ವಿಶಾಲಗೊಳಿಸುತ್ತದೆ.

ಚಿತ್ರವನ್ನು ನಿರೀಕ್ಷಿಸಿರಿ.



ಒಬ್ಬ ವ್ಯಕ್ತಿಯು ವಾಹನಾಪಘಾತಕ್ಕೆ ಒಳಗಾಗುವುದು ಕೇವಲ ತನ್ನ ಅಜಾಗರೂಕತೆಯಿಂದ ಮಾತ್ರವಾಗಿದೆಯೆ? ಅದರ ಹಿಂದೆ ಇತರ ಕಾರಣಗಳು ಇರಬಹುದಲ್ಲವೇ. ಅವು ಯಾವುವು?

- 
- 

ಟ್ರಾಫಿಕ್ ನಿಯಮಗಳ ಉಲ್ಲಂಘನೆ, ವಾಹನಗಳ ದಟ್ಟಣೆ, ಜನಸಂಖ್ಯೆಗೆ ಅನುಗುಣವಾಗಿ ಸೂಕ್ತ ಸಾರಿಗೆ ಸೌಲಭ್ಯಗಳ ಕೊರತೆ, ಟ್ರಾಫಿಕ್ ನಿಯಮಗಳಿಗೆ ಸಂಬಂಧಿಸಿದ ಕಾನೂನು ವ್ಯವಸ್ಥೆಯ ವೈಫಲ್ಯ, ರಸ್ತೆಗಳ ಅವೈಜ್ಞಾನಿಕ ನಿರ್ಮಾಣ ವಿಧಾನದಂತಹ ಅನೇಕ ಘಟಕಗಳು ಇದರ ಹಿಂದೆ ಅಡಕವಾಗಿವೆಯೆಂದು ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕ ಕಂಡುಹಿಡಿಯಬಹುದು.

ವೈಯಕ್ತಿಕ ಸಮಸ್ಯೆಗಳನ್ನು ಇತರ ಸಾಮಾಜಿಕ ಘಟಕಗಳು ಹೇಗೆ ಬಾಧಿಸುತ್ತವೆಯೆಂದು ಗುರುತಿಸಲು ಮತ್ತು ಆ ಮೂಲಕ ವೈಯಕ್ತಿಕ ವೀಕ್ಷಣೆಯನ್ನು ವಿಶಾಲಗೊಳಿಸಲು ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕ ಸಾಧ್ಯವಾಗುತ್ತದೆ.

## ಆತ್ಮಹತ್ಯೆ ದರ ಮತ್ತು ಸಮಾಜ (Suicide Rate and Society)

ಸಮಾಜಶಾಸ್ತ್ರಕ್ಕೆ ಅಡಿಪಾಯ ಹಾಕಿದ ಸಂಸ್ಥಾಪಕರಲ್ಲಿ ಒಬ್ಬರಾದ ಎಮಿಲ್ ದುರ್ಖಿಂ ಆತ್ಮಹತ್ಯೆಯನ್ನು ವೈಯಕ್ತಿಕ ವಿಚಾರವಾಗಿ ಮಾತ್ರ ಕಾಣುತ್ತಿದ್ದ ಕಾಲದಲ್ಲಿ ಆತ್ಮಹತ್ಯೆಯ ಹಿಂದಿನ ಸಾಮಾಜಿಕ ಕಾರಣಗಳನ್ನು ಅಧ್ಯಯನ ಮಾಡಲು ನಿರ್ಧರಿಸಿದರು. ಅವರು ತಮ್ಮ ಅಧ್ಯಯನದ ಮೂಲಕ ಆತ್ಮಹತ್ಯೆಯ ಹಿಂದೆ ವೈಯಕ್ತಿಕ ಕಾರಣಗಳಿಗಿಂತ ಮಿಗಿಲಾಗಿ ಅನೇಕ ಸಾಮಾಜಿಕ ಕಾರಣಗಳಿವೆ ಎಂದು ಕಂಡುಕೊಂಡರು. 1897ರಲ್ಲಿ ಪ್ರಕಟಿಸಿದ 'ಸುಸೈಡ್' (Suicide) ಎಂಬ ಪುಸ್ತಕದಲ್ಲಿ ಅವರು ತಮ್ಮ ಸಂಶೋಧನೆಗಳನ್ನು ಪ್ರಸ್ತುತಪಡಿಸಿದರು.



ಎಮಿಲ್ ದುರ್ಖಿಂ (1858-1917)

### 2. ಸಾಮಾಜಿಕ ಸಮಸ್ಯೆಗಳನ್ನು ಆಳವಾಗಿ ತಿಳಿಯುತ್ತಾರೆ

ಪಟ್ಟಿಯನ್ನು ಪರಿಶೀಲಿಸಿರಿ.

**ಲಿಂಗಕ್ಕನುಗುಣವಾಗಿ ಭಾರತದ ಉದ್ಯೋಗ ರಂಗಗಳಲ್ಲಿನ ಪಾಲ್ಗೊಳ್ಳುವಿಕೆಯ ಪ್ರಮಾಣ 2017-2023**

| ವರ್ಷ | ಉದ್ಯೋಗದಲ್ಲಿನ ಪಾಲ್ಗೊಳ್ಳುವಿಕೆಯ ಪ್ರಮಾಣ | |
|---|---|---|
| | ಪುರುಷರು | ಮಹಿಳೆಯರು |
| 2017-2018 | 75.1 | 21.1 |
| 2018-2019 | 74.9 | 21.6 |
| 2019-2020 | 75.8 | 26.3 |
| 2020-2021 | 75.8 | 27.5 |
| 2021-2022 | 75.9 | 27.2 |
| 2022-2023 | 77.4 | 31.6 |

ಅವಲಂಬನೆ : ಪಿರಿಯೋಡಿಕ್ ಲೇಬರ್ ಫೋರ್ಸ್ ಸರ್ವೇ ರಿಪೋರ್ಟ್, ಮಿನಿಸ್ಟ್ರಿ ಓಫ್ ಸ್ಟಾಟಿಸ್ಟಿಕ್ಸ್ ಆಂಡ್ ಪ್ರೋಗ್ರಾಂ ಇಂಪ್ಲಿಮೆಂಟೇಶನ್

2017 ರಿಂದ 2023 ರ ವರೆಗಿನ ಕಾಲಾವಧಿಯಲ್ಲಿ ಲಿಂಗಕ್ಕೆ (Gender) ಅನುಗುಣವಾಗಿ ಭಾರತದ ಉದ್ಯೋಗದಲ್ಲಿನ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ಈ ಪಟ್ಟಿಯಲ್ಲಿ ಸೂಚಿಸಲಾಗಿದೆ. ಉದ್ಯೋಗದಲ್ಲಿನ ಪಾಲ್ಗೊಳ್ಳುವಿಕೆಯು ಒಂದು ಪ್ರದೇಶದ ಆರ್ಥಿಕ ಪ್ರಗತಿಯ ಮೇಲೆ ಪ್ರಭಾವ ಬೀರುವ ಪ್ರಧಾನ ಘಟಕವಾಗಿದೆ. ವಿವಿಧ ವರ್ಷಗಳಲ್ಲಿ ಪುರುಷರ ಮತ್ತು ಮಹಿಳೆಯರ ಉದ್ಯೋಗದಲ್ಲಿನ ಪಾಲ್ಗೊಳ್ಳುವಿಕೆಯ ದರಗಳೊಳಗಿನ ಅಂತರವನ್ನು (Gap) ಗಮನಿಸಿದಿರಲ್ಲವೇ.

ಉದ್ಯೋಗರಂಗದಲ್ಲಿ ಮಹಿಳೆಯರ ಸಂಖ್ಯೆಯು ತುಂಬಾ ಕಡಿಮೆಯಾಗಲು ಕಾರಣ ಅವರು ಕೆಲಸ ಮಾಡಲು ಸನ್ನದ್ಧರಾಗದೇ ಇರುವುದೆಂಬ ಸಾಮಾನ್ಯ ಜ್ಞಾನಕ್ಕಿಂತ ಮಿಗಿಲಾಗಿ ಇನ್ನಿತರ ಅಂಶಗಳು ಕೂಡಾ ಕಾರಣವಾಗಿವೆಯೆಂದು ಚಿಂತಿಸಲು ಸಮಾಜಶಾಸ್ತ್ರ ಪರಿಕಲ್ಪನೆಯು ಸಹಾಯ ಮಾಡುತ್ತದೆ. ಉದ್ಯೋಗದ ಸ್ಥಳಗಳಲ್ಲಿ ಮಹಿಳೆಯರ ಸಂಖ್ಯೆಯು ಕಡಿಮೆಯಾಗಿರುವುದು ಯಾಕೆಂದು ಪರಿಶೀಲಿಸಿದರೆ ಲಿಂಗಕ್ಕೆ ಸಂಬಂಧಿಸಿಕೊಂಡಿರುವ ಇನ್ನಿತರ ಅನೇಕ ಸಾಮಾಜಿಕ ಘಟಕಗಳು ಅದಕ್ಕೆ ಕಾರಣವಾಗಿವೆಯೆಂದು ಕಂಡುಕೊಳ್ಳಲು ಸಾಧ್ಯವಿದೆ.

'ಪುರುಷರು' ಇಡೀ ಕುಟುಂಬವನ್ನು ಸಾಕಿ-ಸಲಹಬೇಕಾದ ಜವಾಬ್ದಾರಿಯನ್ನು ಹೊಂದಿರಬೇಕೆಂದು ಕೆಲವು ಸಮಾಜಗಳು ನಿರೀಕ್ಷಿಸುತ್ತವೆ. ಇದರೊಂದಿಗೆ 'ಮಹಿಳೆಯರು' ಕುಟುಂಬವನ್ನು ಪರಿಪಾಲಿಸಬೇಕಾದವರೆಂದು ಪರಿಗಣಿಸಲಾಗುತ್ತದೆ. ಇದು ಮಹಿಳೆಯರ ಉದ್ಯೋಗಾವಕಾಶಗಳನ್ನು ಪರಿಮಿತಗೊಳಿಸುವ ಲಿಂಗಾಧಾರಿತವಾದ ಒಂದು ನಂಬಿಕೆಯಾಗಿದೆ (Gender norms). ಇದರಿಂದಾಗಿ ಮಹಿಳೆಯರಿಗೆ ಆದಾಯವಿರುವ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ಮಹಿಳೆಯರ ಆರ್ಥಿಕ ಹಿಂದುಳಿಯುವಿಕೆಗೆ ಕಾರಣವಾಗುತ್ತದೆ. ಕೆಲವು ಸಮಾಜಗಳಲ್ಲಿ ಗಂಡು ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಸಂದರ್ಭಗಳು ಲಭಿಸುವಾಗ ಹೆಣ್ಣುಮಕ್ಕಳಿಗೆ ಲಭಿಸುವ ಶಿಕ್ಷಣ ಸಂದರ್ಭಗಳು ಕಡಿಮೆಯಾಗುತ್ತಿವೆ. ಇದು ಮಹಿಳೆಯರ ಶೈಕ್ಷಣಿಕ ಹಿಂದುಳಿಯುವಿಕೆಗೂ ಆ ಮೂಲಕ ಉದ್ಯೋಗದ ಪಾಲ್ಗೊಳ್ಳುವಿಕೆಯಲ್ಲಿ ಕಡಿತವುಂಟಾಗಲೂ ಕಾರಣವಾಗುತ್ತದೆ. ಉದ್ಯೋಗದ ಪಾಲ್ಗೊಳ್ಳುವಿಕೆಯಲ್ಲಿ ಕಂಡುಬರುವ ಲಿಂಗಾಂತರದ ಕಾರಣವನ್ನು ಪರಿಶೀಲಿಸಿದರೆ ಇಂತಹ ಅನೇಕ ಸಾಂಸ್ಕೃತಿಕ-ಆರ್ಥಿಕ-ಶೈಕ್ಷಣಿಕ ಘಟಕಗಳನ್ನು ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕ ಕಂಡುಹಿಡಿಯಲು ಸಾಧ್ಯವಿದೆ.

ವೈಯಕ್ತಿಕಸಮಸ್ಯೆಗಳ ಸಾಮಾಜಿಕ ಸಂಬಂಧದ ಕುರಿತು ಚಿಂತಿಸಲು ಮಾತ್ರವಲ್ಲ, ಸಾಮಾಜಿಕ ಸಮಸ್ಯೆಗಳ ಕುರಿತು ಆಳವಾಗಿ ತಿಳಿದುಕೊಳ್ಳಲು ಸಮಾಜಶಾಸ್ತ್ರ ಪರಿಕಲ್ಪನೆಯು ಪ್ರಯೋಜನಕಾರಿಯಾಗಿದೆ.

### 3. ಸ್ವಯಂ ಪ್ರತಿಫಲನ ಸಾಧ್ಯವಾಗುತ್ತದೆ

ಈಶಾನ್ ಎಂಬ ವ್ಯಕ್ತಿಯು ತಾನು ಕಲಿತ ಶಾಲೆಯ ಹಳೆವಿದ್ಯಾರ್ಥಿ ಸಂಗಮದಲ್ಲಿ ಭಾಗವಹಿಸಲು ಬಂದಾಗ ಆಡಿದ ಮಾತುಗಳನ್ನು ಗಮನಿಸಿರಿ.



"ನಾನು ಓರ್ವ ಇಂಜಿನಿಯರಾಗಿದ್ದೆನು. ಒಬ್ಬ ಚಿತ್ರಗಾರನಾಗಬೇಕೆಂಬುದು ನನ್ನ ಬಾಲ್ಯಕಾಲದ ಆಸೆಯಾಗಿತ್ತು. ಆದರೆ ನನ್ನ ಹೆತ್ತವರಿಗೆ ಮತ್ತು ಅಧ್ಯಾಪಕರಿಗೆ ನಾನು ಚಿತ್ರರಚನೆಯನ್ನು ಒಂದು ವೃತ್ತಿಯನ್ನಾಗಿ ಸ್ವೀಕರಿಸುವುದರಲ್ಲಿ ಆಸಕ್ತಿಯಿರಲಿಲ್ಲ. ಕ್ರಮೇಣ ನಾನೂ ಕೂಡಾ ಅವರಂತೆಯೇ ಚಿಂತಿಸಿ ಓರ್ವ ಇಂಜಿನಿಯರಾಗಲು ತೀರ್ಮಾನಿಸಿದೆನು. ನನ್ನ ಇಷ್ಟಪ್ರಕಾರ ನಾನು ಇಂಜಿನಿಯರಾದೆನೆಂಬ ತಿಳುವಳಿಕೆ ನನಗಿತ್ತು. ಆದರೂ ನಾನಿದರಲ್ಲಿ ತೃಪ್ತನಾಗಿರಲಿಲ್ಲ. ಆಳವಾಗಿ ಚಿಂತಿಸಿದಾಗ ನಾನು ಇಂಜಿನಿಯರಾದುದು ನನ್ನ ಮಾತ್ರ ತೀರ್ಮಾನದ ಪ್ರಕಾರವಲ್ಲವೆಂದು ನನಗೆ ತಿಳಿಯಿತು. ಹೆತ್ತವರು, ಅಧ್ಯಾಪಕರು, ಗೆಳೆಯರು ಹೀಗೆ ಹಲವರ ಅಭಿಪ್ರಾಯಗಳು ನನ್ನ ಮೇಲೆ ಪ್ರಭಾವ ಬೀರಿದುವು. ಈಗ ಇಂಜಿನಿಯರ್ ಹುದ್ದೆಯಿಂದ ನಿವೃತ್ತಿ ಹೊಂದಿ ನಾನು ಚಿತ್ರರಚನೆಯೆಡೆಗೆ ಸಾಗಿದ್ದೇನೆ. ನಾನು ತುಂಬಾ ಸಂತೋಷದಿಂದಿದ್ದೇನೆ."

ಇಂಜಿನಿಯರು ವೃತ್ತಿಯನ್ನು ಆಯ್ಕೆ ಮಾಡಿದುದರ ಹಿಂದೆ ಯಾರ ಯಾರ ಪ್ರಭಾವವಿತ್ತೆಂದು ಈಶಾನ್ ಕಂಡುಹಿಡಿಯುತ್ತಾನೆ?

- ಹೆತ್ತವರ
- 
- 

ತನ್ನ ತೀರ್ಮಾನದ ಕುರಿತು ವಿಮರ್ಶಾತ್ಮಕವಾಗಿ ಮೌಲ್ಯನಿರ್ಣಯ ಮಾಡಿದಾಗ ಈಶಾನ್‌ಗೆ ಈ ರೀತಿಯಲ್ಲಿ ಕಂಡುಕೊಳ್ಳಲು ಸಾಧ್ಯವಾಯಿತು. ಸ್ವಯಂ ಪ್ರತಿಫಲನ (Self-reflexivity) ಎಂದರೆ ಸ್ವಂತ ಚಿಂತನೆಗಳನ್ನು ಮತ್ತು ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯನಿರ್ಣಯ ಮಾಡಲಿರುವ ಕೌಶಲ್ಯವಾಗಿದೆ. ಸ್ವಯಂ ಪ್ರತಿಫಲನದ ಮೂಲಕ ಈಶಾನ್‌ಗೆ ಈ ತಿಳುವಳಿಕೆ ಲಭಿಸಿತು.

ವೈಯಕ್ತಿಕ ಸಮಸ್ಯೆಗಳ ಹಿಂದೆ ಹುದುಗಿಕೊಂಡಿರುವ ಸಾಮಾಜಿಕ ಘಟಕಗಳನ್ನು ತಿಳಿದುಕೊಳ್ಳುವುದರೊಂದಿಗೆ ಪ್ರತಿಯೊಬ್ಬ ವ್ಯಕ್ತಿಗೂ ಅವರವರ ಕುರಿತು ಆಳವಾಗಿ ತಿಳಿದುಕೊಳ್ಳಲು ಮತ್ತು ಸ್ವಯಂ ಪ್ರತಿಫಲಿಸಲು ಸಮಾಜಶಾಸ್ತ್ರ ಪರಿಕಲ್ಪನೆಯು ಸಹಾಯ ಮಾಡುತ್ತದೆ.

ಸ್ವಯಂ ಪ್ರತಿಫಲನದ ಮೂಲಕ ವೈಯಕ್ತಿಕ ಸಮಸ್ಯೆಗಳ ಹಿಂದಿರುವ ಸಾಮಾಜಿಕ ಕಾರಣಗಳನ್ನು ನಾವು ತಿಳಿದುಕೊಳ್ಳುತ್ತೇವೆ. ಇದು ಸಾಮಾನ್ಯ ಜ್ಞಾನದ ಪರಿಮಿತಿಯನ್ನು ಮೀರಿದ ವಿಶಾಲವಾದ ಮೌಲ್ಯನಿರ್ಣಯಗಳಿಗೆ ಸಹಾಯಕವಾಗಿದೆ. ಹೀಗೆ ವೈಯಕ್ತಿಕ ಹಂತದಲ್ಲೂ ಸಾಮಾಜಿಕ ಹಂತದಲ್ಲೂ ಸಮಾಜಶಾಸ್ತ್ರ ಪರಿಕಲ್ಪನೆಯು ಏಕಪ್ರಕಾರವಾಗಿ ಸಾಧನೆಯನ್ನುಂಟುಮಾಡಲು ಸಹಾಯಕವಾಗಿದೆ.

### 4. ಅನುಭೂತಿ ಮತ್ತು ಸಹಿಷ್ಣುತೆಯನ್ನು ಬೆಳೆಸುತ್ತದೆ



ನಿಮ್ಮ ತರಗತಿಯಲ್ಲಿ ಕಲಿಯುತ್ತಿರುವ ಒಂದು ಮಗುವಿಗೆ ಪರೀಕ್ಷೆಗಳಲ್ಲಿ ಯಾವಾಗಲೂ ಕಡಿಮೆ ಅಂಕಗಳು ಲಭಿಸುತ್ತದೆಯೆಂದೂ ಆ ಮಗು ಕಲಿಯುವ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ಮಾಡುವುದಿಲ್ಲವೆಂದೂ ಭಾವಿಸಿರಿ. ಮಗುವಿನ ಕಲಿಕಾ ಹಿಂದುಳಿಯುವಿಕೆಯ ಕಾರಣಗಳ ಕುರಿತು ಸಾಮಾನ್ಯ ಜ್ಞಾನದ ಆಧಾರದಲ್ಲಿ ಚಿಂತಿಸಿದರೆ, ನೀವು ಕಂಡುಕೊಳ್ಳಲು ಸಾಧ್ಯತೆಯಿರುವ ನಿಗಮನಗಳು ಯಾವುವು?

- ಸೋಮಾರಿತನವಾಗಿರಬಹುದು
- 
- 

ಆದರೆ ಸಮಾಜಶಾಸ್ತ್ರದ ಪರಿಕಲ್ಪನೆಯ ಮೂಲಕ ಈ ವಿಷಯವನ್ನು ಸಮೀಪಿಸುವಾಗ ವಿಶಾಲವಾದ ಸಾಮಾಜಿಕ ಅಂಶಗಳು ಆ ಮಗುವಿನ ಕಲಿಕೆ ಮತ್ತು ಸ್ವಭಾವ ರೂಪೀಕರಣದ ಮೇಲೆ ಪ್ರಭಾವ ಬೀರಿವೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅವು ಯಾವುವು?

- ಕೌಟುಂಬಿಕ ಹಿನ್ನೆಲೆ
- ಸಂಪನ್ಮೂಲಗಳ ಅಪರ್ಯಾಪ್ತತೆ
- 
- 

ಈ ರೀತಿಯಲ್ಲಿ ಅಧ್ಯಯನ ಮಾಡಿದಾಗ ಆ ಮಗುವಿನಲ್ಲಿ ನಿಮಗೆ ಇನ್ನಷ್ಟೂ ಅನುಭೂತಿ (Empathy) ಮೂಡುತ್ತದೆ ಹಾಗೂ ಆ ಮಗುವಿಗೆ ಬೆಂಬಲ ಮತ್ತು ಪ್ರಚೋದನೆಯನ್ನು ನೀಡಲು ನಿಮಗೆ ಸಾಧ್ಯವಾಗುತ್ತದೆ. ಇತರರ ಅನುಭವಗಳ ಹಿಂದೆ ಹುದುಗಿಕೊಂಡಿರುವ ಸಾಮಾಜಿಕ ಸನ್ನಿವೇಶಗಳನ್ನು ಅರ್ಥೈಸುವ ಮೂಲಕ ವ್ಯಕ್ತಿಗಳಿಗೆ ವೈವಿಧ್ಯಮಯ ನಿರೀಕ್ಷಣೆಗಳ ಮೂಲಕ ಅವುಗಳನ್ನು ಸಮೀಪಿಸಲು ಸಾಧ್ಯವಾಗುತ್ತದೆ. ಇದರ ಮೂಲಕ ಅನುಭೂತಿ ಹಾಗೂ ಸಹಿಷ್ಣುತೆಯನ್ನು ಬೆಳೆಸಲು ಸಾಧ್ಯವಾಗುತ್ತದೆ.

## 5. ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುತ್ತದೆ



ಪ್ರಿಯಾ ಒಂದು ಗ್ರಾಮದಲ್ಲಿ ಹುಟ್ಟಿ ಬೆಳೆದವಳು. ತನ್ನ ಶಿಕ್ಷಣವನ್ನು ಪೂರ್ತಿಗೊಳಿಸಿದ ಬಳಿಕ ಉತ್ತಮ ಉದ್ಯೋಗ ಮತ್ತು ಜೀವನ ಸನ್ನಿವೇಶಗಳನ್ನು ಹುಡುಕಿಕೊಂಡು ಅವಳು ನಗರಕ್ಕೆ ವಲಸೆ ಹೋದಳು. ಆದರೆ ಅವಳಿಗೆ ಅಲ್ಲಿ ಉದ್ಯೋಗವನ್ನು ಗಳಿಸಲು ಮತ್ತು ಸುರಕ್ಷಿತವಾದ ವಸತಿ ಸೌಕರ್ಯವನ್ನು ಕಂಡುಹಿಡಿಯಲು ತೊಂದರೆಯಾಯಿತು. ಕೆಲವು ದಿನಗಳ ಸತತ ಅನ್ವೇಷಣೆಯ ಫಲವಾಗಿ ಅವಳಿಗೊಂದು ಕೆಲಸ ದೊರಕಿದರೂ ವಿಳಂಬವಿಲ್ಲದೆ ಆ ಕೆಲಸವೂ ನಷ್ಟವಾಯಿತು. ಈ ಸಂದರ್ಭದಲ್ಲಿ ಪ್ರಿಯಳು ಲೇಬರ್ ಆಫೀಸನ್ನು ಸಂಪರ್ಕಿಸಿದಳು. ತನಗೆ ಕೆಲಸ ನಷ್ಟವಾದುದು ಕೇವಲ ತನಗೆ ಮಾತ್ರ ಸಂಭವಿಸಿದ ಒಂದು ಸಮಸ್ಯೆಯಾಗಿದೆಯೆಂದು ಪ್ರಿಯಾ ಭಾವಿಸಿದ್ದಳು. ಆದರೆ ತನ್ನಂತೆಯೇ ಉದ್ಯೋಗ ನಷ್ಟವಾದ ಅನೇಕ ಮಂದಿ ವಲಸೆಗಾರರು ಆ ನಗರದಲ್ಲಿದ್ದಾರೆಂದು ಲೇಬರ್ ಆಫೀಸಿನಿಂದ ತಿಳಿದುಕೊಳ್ಳಲು ಅವಳಿಗೆ ಸಾಧ್ಯವಾಯಿತು. ಅವರೊಂದಿಗೆ ಸಂವಹನ ನಡೆಸುವ ಮೂಲಕ ಮತ್ತು ಲೇಬರ್ ಆಫೀಸಿನ ಮುಖಾಂತರ ವಲಸಿಗರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮತ್ತು ಅವರ ಹಕ್ಕುಗಳ ಕುರಿತು ಪ್ರಿಯಾಳಿಗೆ ಸ್ವಲ್ಪ ತಿಳುವಳಿಕೆ ಲಭಿಸಿತು. ಇದರ ಆಧಾರದಲ್ಲಿ ಪ್ರಿಯಾ ಈ ಪರಿಸ್ಥಿತಿಯ ಬಗ್ಗೆ ವಿಮರ್ಶಾತ್ಮಕವಾಗಿ ಯೋಚಿಸಲು ಪ್ರಯತ್ನಿಸಿದಳು ಹಾಗೂ ವಲಸಿಗರ ಪರಿಸ್ಥಿತಿಯನ್ನು ಸುಧಾರಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಸಕ್ರಿಯವಾಗಿ ಹಸ್ತಕ್ಷೇಪ ಮಾಡಲಾರಂಭಿಸಿದಳು. ಕ್ರಮೇಣ ಅವಳಿಗೆ ತನ್ನ ಮತ್ತು ಇತರರ ಪರಿಸ್ಥಿತಿಗಳನ್ನು ಉತ್ತಮಗೊಳಿಸಲು ಸಾಧ್ಯವಾಯಿತು.

ಗ್ರಾಮದಿಂದ ನಗರಕ್ಕೆ ಉದ್ಯೋಗವನ್ನರಸಿಕೊಂಡು ವಲಸೆ ಹೋದ ಪ್ರಿಯಾಳ ಅನುಭವದ ಟಿಪ್ಪಣಿಯನ್ನು ಓದಿದಿರಲ್ಲವೇ. ಪ್ರಿಯಾಳು ಎದುರಿಸುತ್ತಿರುವ ಯಾವ ಯಾವ ವೈಯಕ್ತಿಕ ಸಮಸ್ಯೆಗಳು ಇತರ ವಲಸೆಗಾರರ ಸಾಮಾನ್ಯ ಸಮಸ್ಯೆಗಳೂ ಆಗಿವೆಯೆಂದು ಕಂಡುಹಿಡಿಯಲು ನಿಮಗೆ ಸಾಧ್ಯವಾಯಿತು?

ಹೊಸ ಸನ್ನಿವೇಶಗಳಿಗೆ ಹೊಂದಿಕೊಳ್ಳುವುದಕ್ಕಾಗಿ ಸಕ್ರಿಯವಾಗಿ ಹಾಗೂ ಸೃಜನಾತ್ಮಕವಾಗಿ ತನ್ನನ್ನು ತಾನು ತೊಡಗಿಸಿಕೊಂಡಾಗ ವಲಸೆಗಾರರು ಎದುರಿಸುತ್ತಿರುವ ಹೆಚ್ಚಿನ ಎಲ್ಲಾ ಸಮಸ್ಯೆಗಳು ಸಮಾನವಾದವುಗಳಾಗಿವೆಯೆಂದು ವಿಮರ್ಶಾತ್ಮಕ ಚಿಂತನೆಯ ಮೂಲಕ ಪ್ರಿಯಾಳಿಗೆ ಗುರುತಿಸಲು ಸಾಧ್ಯವಾಯಿತು. ವೈಯಕ್ತಿಕ ಸಮಸ್ಯೆಗಳ ಮೇಲೆ ಇತರ ಸಾಮಾಜಿಕ ಅಂಶಗಳು ಕೂಡಾ ಪ್ರಭಾವ ಬೀರುತ್ತವೆಯೆಂದು ಕಂಡುಕೊಳ್ಳಲು ಅವಳಿಗೆ ಸಾಧ್ಯವಾಯಿತು. ಈ ತಿಳುವಳಿಕೆಯ ಮೂಲಕ ತನ್ನ ಪರಿಸ್ಥಿತಿಯನ್ನು ಉತ್ತಮಪಡಿಸಲು ಮತ್ತು ಇತರರನ್ನು ಬೆಂಬಲಿಸಲು ಪ್ರಿಯಾಳಿಗೆ ಸಾಧ್ಯವಾಯಿತು. ಹೀಗೆ ವಿವಿಧ ಸಾಮಾಜಿಕ ಘಟಕಗಳು ವೈಯಕ್ತಿಕ ಜೀವನದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿದುಕೊಳ್ಳಲು ವಿಮರ್ಶಾತ್ಮಕ ಚಿಂತನೆಗೆ ಒತ್ತು ನೀಡುವ ಸಮಾಜಶಾಸ್ತ್ರ ಪರಿಕಲ್ಪನೆಯು ವ್ಯಕ್ತಿಗಳಿಗೆ ಸಹಾಯ ಮಾಡುತ್ತದೆ.

## 6. ಧನಾತ್ಮಕವಲ್ಲದ ನಂಬಿಕೆಗಳನ್ನು (Norms) ಪ್ರಶ್ನಿಸುತ್ತದೆ




ಒಂದು ಸಣ್ಣ ಪಟ್ಟಣದಲ್ಲಿ ರಿನು ವಾಸಿಸುತ್ತಿದ್ದನು. ಸಂತೃಪ್ತಿಯಿಂದ ಕೂಡಿದ ಉದ್ಯೋಗ ಮತ್ತು ಕುಟುಂಬವನ್ನು ಹೊಂದಿದ್ದ ಅವನು ತನ್ನ ಜೀವನದಲ್ಲಿ ಯಾವುದೇ ವಿಧದ ಕೊರತೆಗಳಿಲ್ಲವೆಂದೇ ನಂಬಿದ್ದನು. ಆದರೆ ಅವನು ಆಗಾಗ ಹಲವು ಸಂದರ್ಭಗಳಲ್ಲಿ ಕಾರಣವಿಲ್ಲದೇ ಆತಂಕ ಮತ್ತು ಖಿನ್ನತೆಯನ್ನು ಅನುಭವಿಸುತ್ತಿದ್ದನು. ಇದನ್ನು ಯಾರೊಂದಿಗಾದರೂ ಹಂಚಿಕೊಂಡರೆ, ಅವರು ತನಗೆ ಮಾನಸಿಕ ರೋಗವೆಂದು ಭಾವಿಸುವರೆಂದೂ ತನ್ನನ್ನು ಇತರರಿಂದ ಬೇರ್ಪಡಿಸುವರೆಂದೂ ಅವನು ಭಯಗೊಂಡಿದ್ದನು. ಆದಕಾರಣ ಈ ವಿಷಯವನ್ನು ಅವನು ಯಾರಿಗೂ ತಿಳಿಸಲಿಲ್ಲ. ಹೀಗಿರುವಾಗ ಒಮ್ಮೆ ಅವನು ಮಾನಸಿಕ ಆರೋಗ್ಯದ ಕುರಿತಾದ ಒಂದು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದನು. ಅಲ್ಲಿ ನಡೆದ ಮುಕ್ತ ಚರ್ಚೆಗಳಿಂದ ಹಾಗೂ ಮಾನಸಿಕ ಆರೋಗ್ಯ ತಜ್ಞರ ಭಾಷಣಗಳಿಂದ ಶಾರೀರಿಕ ಆರೋಗ್ಯದಂತೆಯೇ ಮಾನಸಿಕ ಆರೋಗ್ಯವೂ ಅತಿ ಪ್ರಧಾನವಾಗಿದೆಯೆಂದು ಅವನು ತಿಳಿದುಕೊಂಡನು. ಮಾನಸಿಕ ಆರೋಗ್ಯದ ಕುರಿತು ಋಣಾತ್ಮಕವಲ್ಲದ ಕೆಲವು ನಂಬಿಕೆಗಳು, ಆಲೋಚನೆಗಳು, ಊಹಾಪೋಹಗಳು ಸಮಾಜದಲ್ಲಿ ಅಸ್ತಿತ್ವದಲ್ಲಿರುವುದರಿಂದ ತನ್ನ ಸ್ಥಿತಿಯನ್ನು ಇತರರೊಂದಿಗೆ ಹಂಚಿಕೊಳ್ಳಲು ತೊಂದರೆಯಾಯಿತೆಂಬುದನ್ನು ಅವನು ಅರ್ಥೈಸಿಕೊಂಡನು. ತನ್ನ ಮಾನಸಿಕ ಸಮಸ್ಯೆಗಳನ್ನು ಅವನು ಗೆಳೆಯರೊಂದಿಗೆ ಹಂಚಿಕೊಂಡನು. ಮಾನಸಿಕ ಆರೋಗ್ಯದ ಪ್ರಾಧಾನ್ಯದ ಕುರಿತು ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಲು ಅವನು ಮತ್ತು ಗೆಳೆಯರು ಸಂಯುಕ್ತವಾಗಿ ಕಾರ್ಯವೆಸಗಲು ಆರಂಭಿಸಿದರು.

ರಿನುವಿನ ಅನುಭವ ಟಿಪ್ಪಣಿಯನ್ನು ಓದಿದಿರಲ್ಲವೇ. ಶಾರೀರಿಕ ಆರೋಗ್ಯದಂತೆಯೇ ಮಾನಸಿಕ ಆರೋಗ್ಯವೂ ಪ್ರಾಧಾನ್ಯವನ್ನು ಹೊಂದಿದೆಯೆಂದು ನಿಮಗೆ ತಿಳಿಯಿತಲ್ಲವೇ. ಈ ಜ್ಞಾನವು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಧನಾತ್ಮಕವಲ್ಲದ ನಂಬಿಕೆಗಳನ್ನು ಪ್ರಶ್ನಿಸಲು ನಮಗೆ ಪ್ರಚೋದನೆಯನ್ನು ನೀಡುತ್ತದೆ.

ಕುಟುಂಬ, ಶೈಕ್ಷಣಿಕ ಸಂಸ್ಥೆಗಳು, ಆರ್ಥಿಕ ಸಂಸ್ಥೆಗಳು ಇವೇ ಮೊದಲಾದ ಸಾಮಾಜಿಕ ಸಂಸ್ಥೆಗಳು ವೈಯಕ್ತಿಕವಾದ ಆಯ್ಕೆಗಳಲ್ಲಿ ಮತ್ತು ಅದರ ಪರಿಣಾಮಗಳ ಮೇಲೆ ಬೀರುವ ಪ್ರಭಾವಗಳ ಕುರಿತು ಅರ್ಥೈಸಲೂ ಸಮಾಜಶಾಸ್ತ್ರ ಪರಿಕಲ್ಪನೆಯು ಸಹಾಯಮಾಡುತ್ತದೆ.

ಎಲ್ಲಾ ವೈಯಕ್ತಿಕ ಸಮಸ್ಯೆಗಳ ಹಿಂದೆ ಇಂತಹ ಅನೇಕ ಸಾಮಾಜಿಕ ಘಟಕಗಳನ್ನು ಕಾಣಲು ಸಾಧ್ಯವಿದೆ. ಸಾಮಾನ್ಯಜ್ಞಾನದ ಮೂಲಕ ಮಾತ್ರ ಅವಲೋಕಿಸಿದರೆ ಈ ಸಾಮಾಜಿಕ ದೃಷ್ಟಿಕೋನವು ಉಂಟಾಗಲಾರದು. ವೈಯಕ್ತಿಕ ಸಮಸ್ಯೆಗಳ ಹಿಂದೆ ಹುದುಗಿಕೊಂಡಿರುವ ಸಾಮಾಜಿಕ ಅಂಶಗಳನ್ನು ಕಂಡುಹಿಡಿಯಬೇಕಾಗಿದೆ. ಸಾಮಾನ್ಯ ಜ್ಞಾನದ ಮೂಲಕ ಮಾತ್ರ ವೈಯಕ್ತಿಕ ಸಮಸ್ಯೆಗಳನ್ನು ಮತ್ತು ಸಾಮಾಜಿಕ ಸಮಸ್ಯೆಗಳನ್ನು ಅವಲೋಕಿಸುವ ರೀತಿಗಿಂತ ಮಿಗಿಲಾಗಿ ಸಮಸ್ಯೆಗಳನ್ನು ವಿಶ್ಲೇಷಿಸಲು ನಮಗೆ ಸಾಧ್ಯವಾಗಬೇಕು. ಸಮಾಜಶಾಸ್ತ್ರ

ಪರಿಕಲ್ಪನೆಯು ವೈಯಕ್ತಿಕ ಸಮಸ್ಯೆಗಳನ್ನು ಕೇವಲ ವೈಯಕ್ತಿಕ ವೈಫಲ್ಯಗಳಾಗಿ, ಚಿತ್ರಿಸದೆ ಸಾಮಾಜಿಕ ಸಮಸ್ಯೆಗಳಾಗಿವೆಯೆಂದು ಗುರುತಿಸಲು ನಮ್ಮನ್ನು ಪ್ರಾಪ್ತರನ್ನಾಗಿಸುತ್ತದೆ.

ವಿವಿಧ ರೀತಿಯ ಸಾಮಾಜಿಕ ಸಮಸ್ಯೆಗಳ ಹಿಂದಿರುವ ಕಾರಣಗಳನ್ನು ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕ ಕಂಡುಹಿಡಿಯಲು ಸಾಧ್ಯವಾಗುತ್ತದೆ. ಆ ಮೂಲಕ ಸಮಸ್ಯಾ ಪರಿಹಾರಕ್ಕಾಗಿ ಅಗತ್ಯವಾದ ಹಸ್ತಕ್ಷೇಪದ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. ಇದು ಹೆಚ್ಚು ಪರಿಣಾಮಕಾರಿಯಾದ ಸಾಮಾಜಿಕ ನೀತಿಗಳನ್ನು ರೂಪಿಸಲು ಸಹಾಯಕವಾಗುತ್ತದೆ. ಹೀಗೆ ಸಮಾಜಶಾಸ್ತ್ರ ಪರಿಕಲ್ಪನೆಯು ಬದಲಾವಣೆಗಳಿಗಾಗಿ ಕಾರ್ಯವೆಸಗಲು ಮತ್ತು ಉತ್ತಮ ಸಾಮಾಜಿಕ ನೀತಿಗಳನ್ನು ರೂಪಿಸಲು ಸಹಾಯ ಮಾಡುತ್ತದೆ.

**ಸಮಾಜಶಾಸ್ತ್ರ ಪರಿಕಲ್ಪನೆಯ ವಿಶೇಷತೆಗಳು**



*ಸಮಾಜಶಾಸ್ತ್ರ ಪರಿಕಲ್ಪನೆಗೆ ಮೇರೆಗಳಿಲ್ಲ*

- ವಿಶಾಲವಾದ ವೈಯಕ್ತಿಕ ದೃಷ್ಟಿಕೋನ
- ಸಾಮಾಜಿಕ ಸಮಸ್ಯೆಗಳನ್ನು ಆಳವಾಗಿ ತಿಳಿದುಕೊಳ್ಳುವುದು
- ಸ್ವಯಂ ಪ್ರತಿಫಲನ
- ಅನುಭೂತಿ ಮತ್ತು ಸಹಿಷ್ಣುತೆ
- ವಿಮರ್ಶಾತ್ಮಕ ಚಿಂತನೆ
- ಧನಾತ್ಮಕವಾದ ನಮ್ಯತೆಗಳನ್ನು ಪ್ರಶ್ನಿಸುವುದು

ನಿಮ್ಮ ವೈಯಕ್ತಿಕ ಅನುಭವಗಳನ್ನು ಮತ್ತು ನಿತ್ಯ ಜೀವನದಲ್ಲಿ ಕಾಣುವ ಸಾಮಾಜಿಕ ಸಮಸ್ಯೆಗಳನ್ನು ನಿರೀಕ್ಷಣೆ ಮಾಡಿ ಅವುಗಳ ಕುರಿತು ಒಂದು ನಿಯತಕಾಲಿಕದಲ್ಲಿ ದಾಖಲಿಸಿರಿ. ಇಂತಹ ವೈಯಕ್ತಿಕ ಅನುಭವಗಳು ಮತ್ತು ಸಾಮಾಜಿಕ ಸಮಸ್ಯೆಗಳು ಹೇಗೆ ವಿಶಾಲವಾದ ಸಾಮಾಜಿಕ ಹಿನ್ನೆಲೆಗಳೊಂದಿಗೆ ಸಂಬಂಧಪಟ್ಟಿವೆಯೆಂದು ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕ ಕಂಡುಹಿಡಿಯಿರಿ. ಈ ಸಂಶೋಧನೆಯನ್ನು ವಿಶ್ಲೇಷಿಸಿ ನಿಯತಕಾಲಿಕದಲ್ಲಿ ದಾಖಲಿಸಿರಿ. ನಿಮ್ಮ ವಿಶ್ಲೇಷಣಾ ಟಿಪ್ಪಣಿಯನ್ನು ಸಮಾಜಶಾಸ್ತ್ರ ಕ್ಲಬ್ಬಿನಲ್ಲಿ ಡಿಜಿಟಲ್ ಪ್ರಸೆಂಟೇಶನ್ ಮಾಡಿ ಚರ್ಚಿಸಿರಿ.

## ಸಾಮಾನ್ಯ ಜ್ಞಾನ ಮತ್ತು ಸಮಾಜಶಾಸ್ತ್ರ ಪರಿಕಲ್ಪನೆ (Commonsense Knowledge and Sociological Imagination)

ಸಮಾಜಶಾಸ್ತ್ರವು ಸಾಮಾನ್ಯಜ್ಞಾನವನ್ನು ಮೀರಿ ಅದಕ್ಕಿಂತಲೂ ಹಿರಿಮೆಯುಳ್ಳ ಮೂಲಗಳಿಂದ ತನ್ನ ಜ್ಞಾನವನ್ನು ಹುಡುಕುತ್ತದೆ. ಸಮಾಜಶಾಸ್ತ್ರ ಪರವಾದ ಅನ್ವೇಷಣೆಗಳಿಂದ ಸಾಮಾನ್ಯ ಜ್ಞಾನವನ್ನು ಅರ್ಥೈಸಲು ಹಾಗೂ ವಿವರಿಸಲು ಸಾಧ್ಯವಾಗುತ್ತದೆ. ಸಾಮಾನ್ಯ ಜ್ಞಾನ ಮತ್ತು ಸಮಾಜಶಾಸ್ತ್ರ ಪರಿಕಲ್ಪನೆಗಳು ನಮ್ಮ ಸುತ್ತಲಿನ ಸಮಾಜವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ವಿಭಿನ್ನ ಮಾರ್ಗಗಳಾಗಿವೆ. ಇವುಗಳು ಪರಸ್ಪರ ಸಂಬಂಧವನ್ನು ಹೊಂದಿದ್ದರೂ ಸಮಾಜಶಾಸ್ತ್ರದ ವಿಭಿನ್ನ ಆಶಯಗಳೂ ಆಗಿವೆ. ಈ ಎರಡು ಆಶಯಗಳನ್ನು ಸಮನ್ವಯಗೊಳಿಸುವ ಮೂಲಕ ವ್ಯಕ್ತಿಗಳಿಗೆ ಸಮಾಜದೊಂದಿಗೆ ವಿಮರ್ಶಾತ್ಮಕವಾಗಿ ತೊಡಗಿಸಿಕೊಳ್ಳಲು ಹಾಗೂ ಸಾಮಾನ್ಯಜ್ಞಾನದಲ್ಲಿ ಮಾತ್ರ ಹುದುಗಿಕೊಂಡಿರುವ ತೀರ್ಮಾನಗಳನ್ನು ಬಿಟ್ಟುಬಿಡಲು ಸಾಧ್ಯವಾಗುತ್ತದೆ. ಈ ಮೂಲಕ ವ್ಯಕ್ತಿಗಳಿಗೆ ಸಾಮಾಜಿಕ ವಾಸ್ತವಿಕತೆಗಳ, ಸಾಮಾಜಿಕ ನಡವಳಿಕೆಗಳ ಮತ್ತು ಸಾಮಾಜಿಕ ಸಮಸ್ಯೆಗಳ ಸಂಕೀರ್ಣ ಸ್ವಭಾವವನ್ನು ಪ್ರತ್ಯೇಕಿಸಿ ತಿಳಿಯಲು ಸಾಧ್ಯವಾಗುತ್ತದೆ. ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸುವುದರಲ್ಲಿ ಸಾಮಾನ್ಯ ಜ್ಞಾನ ಮತ್ತು ಸಾಮಾಜಿಕ ಪರಿಕಲ್ಪನೆಯು ಹೇಗೆ ಭಿನ್ನವಾಗಿವೆಯೆಂದು ನೋಡೋಣ.

| ಸಾಮಾನ್ಯ ಜ್ಞಾನ ಸಮೀಪನ (Commonsense Knowledge Approach) | ಸಮಾಜಶಾಸ್ತ್ರ ಪರಿಕಲ್ಪನೆಯ ಸಮೀಪನ (Sociological Imagination Approach) |
|---|---|
| ವೈಯಕ್ತಿಕ ನಿರೀಕ್ಷಣೆಗಳಲ್ಲಿ ಮತ್ತು ಅನುಭವಗಳಲ್ಲಿ ಮಾತ್ರ ಹುದುಗಿಕೊಂಡಿದೆ. | ವೈಯಕ್ತಿಕ ಅನುಭವಗಳನ್ನು ವಿಶಾಲವಾದ ಸಾಮಾಜಿಕ ರಚನೆಯೊಂದಿಗೆ ಜೋಡಿಸುವುದರಿಂದ ಇದರ ವ್ಯಾಪ್ತಿ ಹೆಚ್ಚಾಗಿದೆ. |
| ಹೆಚ್ಚಿನ ಸಂದರ್ಭಗಳಲ್ಲಿ ಸಿದ್ಧಮಾದರಿಗಳ ಆಧಾರದ ಮೇಲೆ ಸಾಮಾನ್ಯವಾಗಿರುವ ವಿವರಣೆಯನ್ನು ಮಾತ್ರ ಒದಗಿಸುತ್ತದೆ. | ಸಾಮಾಜಿಕ ಘಟಕಗಳು ವ್ಯಕ್ತಿಗಳ ಮೇಲೆ ಬೀರುವ ಪ್ರಭಾವದ ಕುರಿತು ಆಳವಾಗಿ ವಿಶ್ಲೇಷಿಸುತ್ತದೆ. |
| ಸಾಮಾಜಿಕ ವಾಸ್ತವಿಕತೆಗಳನ್ನು ಮತ್ತು ಸಮಸ್ಯೆಗಳನ್ನು ವಿಮರ್ಶಾತ್ಮಕ ಚಿಂತನೆಗಳ ಮೂಲಕ ಸಮೀಪಿಸುವುದಿಲ್ಲ. | ವೈಯಕ್ತಿಕ ಅನುಭವಗಳು ಮತ್ತು ಸಾಮಾಜಿಕ ರಚನೆಗಳೊಳಗಿನ ಪರಸ್ಪರ ಸಂಬಂಧದ ಕುರಿತು ವಿಮರ್ಶಾತ್ಮಕವಾಗಿ ಚಿಂತಿಸುವುದಕ್ಕೆ ಪ್ರೇರೇಪಿಸುತ್ತದೆ. |

ವ್ಯಕ್ತಿ ಮತ್ತು ಸಮಾಜವು ತಮ್ಮೊಳಗಿರುವ ಸೂಕ್ಷ್ಮ - ಸ್ಥೂಲ ಸಂಬಂಧಗಳನ್ನು (Micro-Macro Relationships) ಕಂಡುಹಿಡಿಯುವುದಕ್ಕೆ ಸಮಾಜಶಾಸ್ತ್ರಪರಿಕಲ್ಪನೆಯು ಸಹಾಯ ಮಾಡುತ್ತದೆ. ಸಮಾಜಶಾಸ್ತ್ರಪರಿಕಲ್ಪನೆಯು ನಮ್ಮನ್ನುಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರಚೋದನೆ ನೀಡುತ್ತದೆ. ವೈಯಕ್ತಿಕ ಜೀವನ ಮತ್ತು ಸಾಮಾಜಿಕ ರಚನೆಗಳು ತಮ್ಮೊಳಗಿರುವ ಸಂಕೀರ್ಣವಾದ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳಲು ಮತ್ತು ಪರಿಹರಿಸಲು ಸಮಾಜಶಾಸ್ತ್ರ ಪರಿಕಲ್ಪನೆಯು ನಮ್ಮನ್ನು ಪ್ರಾಪ್ತರನ್ನಾಗಿಸುತ್ತದೆ. ಹೀಗೆ ಸಾಮಾಜಿಕ ಜೀವನವನ್ನು ಸಂಪನ್ನಗೊಳಿಸುವ ಪ್ರಬಲವಾದ ಒಂದು ಉಪಕರಣ, ಕೌಶಲ್ಯ ಮತ್ತು ಸಮೀಪನವಾಗಿ ಸಮಾಜಶಾಸ್ತ್ರ ಪರಿಕಲ್ಪನೆಯು ಬದಲಾಗುತ್ತದೆ.

ಪಟ್ಟಿಯಲ್ಲಿ ನೀಡಿರುವ ಸಾಮಾಜಿಕ ಸಮಸ್ಯೆಗಳ ಕಾರಣಗಳನ್ನು ಸಾಮಾನ್ಯಜ್ಞಾನ ಸಮೀಪನದ ಮೂಲಕವೂ ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕವೂ ಕಂಡುಹಿಡಿಯಲು ಪ್ರಯತ್ನಿಸಿರಿ.

| ಸಾಮಾಜಿಕ ಸಮಸ್ಯೆಗಳು | ಸಾಮಾನ್ಯ ಜ್ಞಾನ ಸಮೀಪನ | ಸಮಾಜಶಾಸ್ತ್ರ ಪರಿಕಲ್ಪನೆಯ ಸಮೀಪನ |
|---|---|---|
| 1. ಬಡತನ (Poverty) | • ಕಠಿಣ ಪರಿಶ್ರಮದಲ್ಲಿ ಆಸಕ್ತಿಯಿಲ್ಲದಿರುವುದು<br>• | • ಸಂಪನ್ಮೂಲಗಳ ವಿತರಣೆಯಲ್ಲಿರುವ ಅಸಮಾನತೆ<br>• |
| 2. ನಿರುದ್ಯೋಗ (Unemployment) | • ಸೋಮಾರಿತನ<br>• | • ಜನಸಂಖ್ಯಾ ಹೆಚ್ಚಳ<br>• |
| 3. ಕಲಿಕಾ ಒತ್ತಡ (Academic Pressure) | • ಪರಾಜಯ ಹೊಂದಬಹುದೆಂಬ ಭಯ<br>• | • ಉನ್ನತ ಅಂಕ ಪಡೆಯಲು ವಿದ್ಯಾಲಯದಿಂದಿರುವ ಒತ್ತಡ<br>• |

ಒಂದು ಸಮಸ್ಯೆಯನ್ನು ಸಾಮಾನ್ಯ ಜ್ಞಾನದ ಮೂಲಕವೂ ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕವೂ ಸಮೀಪಿಸಿದಾಗ ಕಂಡುಹಿಡಿದ ವ್ಯತ್ಯಾಸಗಳು ಯಾವುವು? ವಿಭಿನ್ನ ಗುಂಪುಗಳಾಗಿ ಕುಳಿತು ಪ್ರತಿಯೊಂದು ಗುಂಪು ಎರಡು ವಿಧದ ಸಮೀಪನಗಳಲ್ಲೂ ಇರುವ ವ್ಯತ್ಯಾಸಗಳ ಕುರಿತು ಚರ್ಚಿಸಿ ತರಗತಿಯಲ್ಲಿ ಮಂಡಿಸಿರಿ.

## ಮುಂದುವರಿದ ಚಟುವಟಿಕೆಗಳು

1. 'ಆರೋಗ್ಯಕರವಾದ ಸಾಮಾಜಿಕ ಜೀವನಕ್ಕೆ ಸಮಾಜಶಾಸ್ತ್ರ ಪರಿಕಲ್ಪನೆಯ ಆವಶ್ಯಕತೆ' ಎಂಬ ವಿಷಯದಲ್ಲಿ ಶಾಲಾ ಅಸೆಂಬ್ಲಿಯಲ್ಲಿ ಮಂಡಿಸಲು ಒಂದು ಕಿರು ಭಾಷಣವನ್ನು ತಯಾರಿಸಿರಿ.
2. ಬೇರೆ ಬೇರೆ ವಾರ್ತಾಮಾಧ್ಯಮಗಳಲ್ಲಿ ಪ್ರಕಟವಾದ ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಕುರಿತಾದ ವಾರ್ತೆಗಳನ್ನು ಸಂಗ್ರಹಿಸಿರಿ. ಒಂದೇ ಸಾಮಾಜಿಕ ವಿಷಯವನ್ನು ವಿವಿಧ ಮಾಧ್ಯಮಗಳು ಹೇಗೆ ಮಂಡಿಸಿವೆಯೆಂದು ಹೋಲಿಸಿರಿ. ಸಮಾಜಶಾಸ್ತ್ರ ಪರಿಕಲ್ಪನೆಯ ಸಮೀಪನದ ಮೂಲಕ ಹೇಗೆ ವಿವಿಧ ಮಾಧ್ಯಮಗಳು ಅವುಗಳನ್ನು ಪ್ರಕಟಿಸಿವೆಯೆಂದು ಕಂಡುಹಿಡಿಯಿರಿ.
3. ಸಮಾಜಶಾಸ್ತ್ರ ಪರಿಕಲ್ಪನೆಯ ಕೌಶಲ್ಯಗಳು ಪ್ರತಿಫಲಿಸುವ ವಿಧದಲ್ಲಿ ನೀವು ಈ ಮೊದಲು ನಡೆಸಿದ ಹಸ್ತಕ್ಷೇಪಗಳ ಸಂದರ್ಭಗಳನ್ನು ಸಮಾಜಶಾಸ್ತ್ರ ಕ್ಲಬ್ಬಿನಲ್ಲಿ ಮಂಡಿಸಿರಿ.



# 4

# ಸಂಪತ್ತು ಮತ್ತು ಜಗತ್ತು

ಜಗತ್ತನ್ನು ತೆರೆದು ಅದರ ನಿಧಿನಿಕ್ಷೇಪಗಳನ್ನೂ ಅದ್ಭುತಗಳನ್ನೂ ಪ್ರದರ್ಶಿಸಿದ ಆ ಕಾಲ ಎಷ್ಟೊಂದು ಕುತೂಹಲಕಾರಿ! ಸಾಗರಗಳೂ ಹೊಸ ಭೂಖಂಡಗಳೂ ಅಪಾರವಾದ ಸಂಪತ್ತುಗಳೆಲ್ಲ 'ಬಾಗಿಲುತೆರೆ ಸೀಸೊ' ಎಂಬ ಏಕೈಕ ಮಾಂತ್ರಿಕ ಮಾತಿಗೆ ಕಾದು ಕುಳಿತಂತೆ ಒಂದೊಂದಾಗಿ ಕಂಡುಹಿಡಿಯಲ್ಪಟ್ಟವು. ಬಾಹ್ಯಾಕಾಶವೂ ಕೂಡ ಇಂತಹ ಸಾಹಸಿಕತೆಯ ಮಾಯಾಜಾಲದಿಂದ ತುಂಬಿ ತುಳುಕುತ್ತಿರಬಹುದು.

Jawaharlal Nehru

*(ಸ್ವತಂತ್ರಾನುವಾದ)*

ಮೇಲೆ ಕೊಟ್ಟಿರುವುದು ಹದಿನೈದನೆಯ ಶತಮಾನದ ಸಾಹಸಮಯ ಭೌಗೋಳಿಕ ಅನ್ವೇಷಣೆಗಳ ಕುರಿತು ಜವಾಹರ ಲಾಲ್ ನೆಹರು ತಮ್ಮ ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ ಎಂಬ ಗ್ರಂಥದಲ್ಲಿ ಮಾಡಿದ ಉಲ್ಲೇಖಗಳಾಗಿವೆ. 15ನೇ ಶತಮಾನದಲ್ಲಿ ಆಫ್ರಿಕಾ, ಏಷ್ಯಾ, ಅಮೇರಿಕಾ ಎಂಬೀ ಭೂಪ್ರದೇಶಗಳಿಗೆ ಆಗಮಿಸಿದ ಯುರೋಪಿಯನ್ನರು ಅನೇಕ ವಿಶಿಷ್ಟ ದೃಶ್ಯಗಳನ್ನು ಕಂಡರು. ಹೊಸ ಸಮುದ್ರ ಮಾರ್ಗಗಳು ತೆರೆದಿಟ್ಟ ಈ ಅದ್ಭುತ ದೃಶ್ಯಗಳ ಕುರಿತು ಸಾವಿರದ ಒಂದು ರಾತ್ರಿಗಳು ಎಂಬ ಪುಸ್ತಕದಲ್ಲಿರುವ 'ಆಲಿಬಾಬ ಮತ್ತು ನಲುವತ್ತು ಕಳ್ಳರು' ಎಂಬ ಕಥೆಯನ್ನು ಉಲ್ಲೇಖಿಸಿ ನೆಹರೂರವರು ಈ ರೀತಿಯಲ್ಲಿ ಬರೆದಿದ್ದಾರೆ. 'ಬಾಗಿಲು ತೆರೆ, ಸಿಸೊ' ಎಂಬ ರಹಸ್ಯ ಮಾತನ್ನು ನುಡಿಯುವಾಗ ತೆರೆಯುವ ಕಾಡಿನ ಗುಹೆಗಳಲ್ಲಿ ಕಳ್ಳರು ಬಚ್ಚಿಟ್ಟ ನಿಧಿಯನ್ನು ಕಂಡುಹಿಡಿದ ಆಲಿಬಾಬಾರ ಅದ್ಭುತಕ್ಕೆ ಇತರ ಭೂಖಂಡಗಳನ್ನು ನೋಡಿದ ಯುರೋಪಿಯನ್ನರಿಗೆ ಆದ ಆಶ್ಚರ್ಯವನ್ನು ನೆಹರೂರವರು ಹೋಲಿಸುತ್ತಾರೆ. ಹದಿನೈದು ಮತ್ತು ಹದಿನಾರನೇ ಶತಮಾನಗಳಲ್ಲಿ ಯುರೋಪಿಯನ್ನರು ನಡೆಸಿದ ಭೌಗೋಳಿಕ ಪರ್ಯಟನೆ ಮತ್ತು ಹೊಸ ಭೂಪ್ರದೇಶಗಳ ಅನ್ವೇಷಣೆಗಳು ಜಾಗತಿಕ ಇತಿಹಾಸದ ನಂತರದ ಹಾದಿಯನ್ನು ನಿರ್ಧರಿಸಿದ ಪ್ರಮುಖ ಘಟಕಗಳಲ್ಲಿ ಒಂದಾಗಿದೆ. ಇವುಗಳ ಚರಿತ್ರೆಯನ್ನು ಪರಿಶೀಲಿಸೋಣ.

ಹದಿನೈದನೇ ಶತಮಾನದ ಭೌಗೋಳಿಕ ಅನ್ವೇಷಣೆಗಳಿಗೆ ಕಾರಣವಾದ ಎರಡು ಪ್ರಮುಖ ಘಟನೆಗಳು:

- ತುರುಕರು ಕೋನ್‌ಸ್ಟಾಂಟಿನೋಪಿಲನ್ನು ವಶಪಡಿಸಿಕೊಂಡದ್ದು (ಭೂಪಟ 4.1)
- ಪೋರ್ಚುಗೀಸ್ ನಾವಿಕರು ಆಫ್ರಿಕಾದ ಗಿನಿಯಾ ಕರಾವಳಿಯನ್ನು ತಲುಪಿದ್ದು (ಭೂಪಟ 4.1)

### ಕರಿಮೆಣಸು ಮತ್ತು ಯುರೋಪಿಯನ್ನರು

ಚಳಿಗಾಲದಲ್ಲಿ ಆಹಾರವಸ್ತುಗಳು ಕೆಡದಂತೆ ಸಂರಕ್ಷಿಸಲು ಮತ್ತು ಔಷಧೀಯ ಉದ್ದೇಶಗಳಿಗಾಗಿ ಯುರೋಪಿಯನ್ನರು ಕರಿಮೆಣಸು ಸೇರಿದಂತೆ ಇತರ ಸುಗಂಧದ್ರವ್ಯಗಳನ್ನು ಬಳಸುತ್ತಿದ್ದರು. ಇವುಗಳು ಕೋನ್‌ಸ್ಟಾಂಟಿನೋಪಿಲ್ ಮೂಲಕ ಅವರಿಗೆ ಲಭಿಸುತ್ತಿತ್ತು. ಈ ಮಾರ್ಗವು ಮುಚ್ಚಲ್ಪಡುವುದರೊಂದಿಗೆ ಸಮುದ್ರದ ಮೂಲಕವಾದರೂ ಏಷ್ಯಾಕ್ಕೆ ಹೊಸ ವಾಣಿಜ್ಯ ಮಾರ್ಗವನ್ನು ಕಂಡುಹಿಡಿಯಲು ಯುರೋಪಿಯನ್ನರು ನಿರ್ಬಂಧಿತರಾದರು.

ಈ ಘಟನೆಗಳು ಪ್ರಪಂಚದಾದ್ಯಂತ ದೂರಗಾಮಿ ಪರಿಣಾಮಗಳನ್ನು ಬೀರಿದವು. ತುರುಕರು ಕೋನ್‌ಸ್ಟಾಂಟಿನೋಪಿಲನ್ನು ವಶಪಡಿಸುವುದರೊಂದಿಗೆ ಏಷ್ಯಾದಿಂದ ಕರಿಮೆಣಸನ್ನು ಒಳಗೊಂಡಂತೆ ಹಲವು ಉತ್ಪನ್ನಗಳನ್ನು ಯುರೋಪಿಗೆ ಸಾಗಿಸುತ್ತಿದ್ದ ನೆಲಮಾರ್ಗವು ಮುಚ್ಚಲ್ಪಟ್ಟಿತು. ಇದರ ಪರಿಣಾಮವಾಗಿ ಯುರೋಪಿಯನ್ನರು ಇವು ಲಭ್ಯವಿರುವ ಪ್ರದೇಶಗಳಿಗಿರುವ ಭೌಗೋಳಿಕ ಪರ್ಯಟನೆಗಳ ಮೂಲಕ ಹೊಸ ಪ್ರದೇಶಗಳನ್ನೂ ಕಂಡುಹಿಡಿಯಲಾರಂಭಿಸಿದರು. ಅಲ್ಲದೆ ಆಫ್ರಿಕಾದ ಪಶ್ಚಿಮ ತೀರದಲ್ಲಿರುವ ಗಿನಿಯಾಕ್ಕೆ ಪೋರ್ಚುಗೀಸ್ ನಾವಿಕರು ತಲುಪಿದುದು ಇನ್ನೊಂದು ಮೈಲಿಗಲ್ಲಾಯಿತು. ನಂತರದ ಸಮುದ್ರಯಾನಗಳೂ ಭೌಗೋಳಿಕ ಅನ್ವೇಷಣೆಗಳೂ ಜಾಗತಿಕ ಇತಿಹಾಸವನ್ನು ಬದಲಾಯಿಸಿದವು. ಈ ಸಮುದ್ರಯಾನಗಳು ಜಗತ್ತಿನೆಲ್ಲೆಡೆ ಯುರೋಪಿಯನ್ನರ ಅಧಿಪತ್ಯಕ್ಕೆ ನಾಂದಿ ಹಾಡಿತು. ಕ್ರಮೇಣ ಯುರೋಪಿನ ಸಂಸ್ಕೃತಿಯು ಇತರ ಪ್ರದೇಶಗಳಿಗೂ ಹರಡಿತು.

ಕೊಟ್ಟಿರುವ ಭೂಪಟ (4.1) ನ್ನು ನಿರೀಕ್ಷಿಸಿರಿ. ಭೂಪಟದಲ್ಲಿ ಗುರುತಿಸಲಾದ ದೇಶಗಳು ಯಾವುವು ಎಂದು ಕಂಡುಹಿಡಿಯಿರಿ. ಇವುಗಳು ಯಾವ ಸಾಗರ ತೀರದಲ್ಲಿವೆಯೆಂದು ಕಂಡುಹಿಡಿಯಿರಿ.



ಭೂಪಟ 4.1

ಜಗತ್ತನ್ನೇ ಬದಲಾಯಿಸಿದ ಈ ಭೌಗೋಳಿಕ ವೈಜ್ಞಾನಿಕ ಅನ್ವೇಷಣೆಗಳಿಗೆ ಪೋರ್ಚುಗಲ್ ಮತ್ತು ಸ್ಪೈನ್ ನಾಂದಿಹಾಡಿದವು. ನಂತರ ನೆದರ್ಲೇಂಡ್, ಇಂಗ್ಲೆಂಡ್, ಫ್ರಾನ್ಸ್ ಎಂಬೀ ರಾಷ್ಟ್ರಗಳು ಈ ಕ್ಷೇತ್ರವನ್ನು ಪ್ರವೇಶಿಸಿದವಲ್ಲದೆ ಹೊಸ ಪ್ರದೇಶಗಳ ಸಂಶೋಧನೆಯಲ್ಲೂ ವಸಾಹತೀಕರಣದಲ್ಲಿಯೂ ಭಾಗಿಗಳಾದವು.

ಈ ದೇಶಗಳು ಅಟ್ಲಾಂಟಿಕ್ ಮಹಾಸಾಗರದ ಕರಾವಳಿಯಲ್ಲಿವೆ ಎಂಬುದನ್ನು ಭೂಪಟದಿಂದ ತಿಳಿದುಕೊಂಡಿರಲ್ಲವೆ. ಈ ದೇಶಗಳ ಭೌಗೋಳಿಕ ಸ್ಥಾನವು ಭೌಗೋಳಿಕ ಅನ್ವೇಷಣೆಗಳಿಗೆ ಸಹಾಯಕವಾಯಿತು. ಸಾಗರ ಪರ್ಯಟನೆಗಳನ್ನು ಕೈಗೊಳ್ಳಲು ಈ ದೇಶಗಳಿಗೆ ಸಹಾಯ ಮಾಡಿದ ಇತರ ಘಟಕಗಳು ಯಾವುವು ಎಂದು ನೋಡೋಣ.

- ಮಹಾಸಾಗರಗಳನ್ನು ದಾಟಿಕೊಂಡು ಸಂಚರಿಸಲು ಸಾಮರ್ಥ್ಯವಿರುವ ಹಡಗುಗಳ ನಿರ್ಮಾಣ.
- ಸಾಗರದಲ್ಲಿ ದಿಕ್ಕನ್ನು ತಿಳಿಯಲು ಸಹಾಯಕವಾದ ನಾವಿಕ ಉಪಕರಣಗಳ ಆವಿಷ್ಕಾರ.
- ಆಡಳಿತಾಧಿಕಾರಿಗಳು ನೀಡಿದ ಬೆಂಬಲ
- ಸೈನಿಕ ಸಾಮರ್ಥ್ಯ
- ಸಾಗರಯಾನದ ಅನುಭವಗಳು
- ಭೂಪಟ ನಿರ್ಮಾಣ, ಆಕಾಶ ವೀಕ್ಷಣೆ ಎಂಬೀ ವಲಯಗಳಲ್ಲುಂಟಾದ ಪ್ರಗತಿ.

## ಯುರೋಪಿಯನ್ನರು ಇತರ ಭೂಖಂಡಗಳಿಗೆ

ಯುರೋಪಿಯನ್ನರ ಮೊದಲ ಪರ್ಯಟನೆಯು ಆಫ್ರಿಕಾ ಭೂಖಂಡಕ್ಕಾಗಿತ್ತು. ಆಫ್ರಿಕಾದ ನೈಜರ್ ಸಮತಲದಲ್ಲಿ ಚಿನ್ನದ ನಿಕ್ಷೇಪ ಇದೆ ಎಂಬ ಅರಿವು ಆಫ್ರಿಕಾ ಭೂಖಂಡದ ಪಶ್ಚಿಮ ಕರಾವಳಿ ತೀರದ ಪ್ರದೇಶಗಳಿಗೆ ಸಮುದ್ರಯಾನವನ್ನು ಕೈಗೊಳ್ಳಲು ಪೋರ್ಚುಗಲ್ಲನ್ನು ಪ್ರಮುಖವಾಗಿ ಪ್ರೇರೇಪಿಸಿತು.

1415ರಲ್ಲಿ ಮೊರೊಕ್ಕೋ ಕರಾವಳಿಯಲ್ಲಿರುವ ಸ್ಯೂಟ (Ceuta) (ಭೂಪಟ 4.1) ವನ್ನು ವಶಪಡಿಸುವುದರೊಂದಿಗೆ ಆಫ್ರಿಕಾದಲ್ಲಿ ಪೋರ್ಚುಗೀಸರ ಆಧಿಪತ್ಯವು ಪ್ರಾರಂಭವಾಯಿತು. ಈ ಪ್ರದೇಶವು ಕ್ರಮೇಣ ಪೋರ್ಚುಗಲ್‌ಗೆ ಧಾನ್ಯ ಮತ್ತು ಇತರ ಆಹಾರ ಪದಾರ್ಥಗಳನ್ನು ಸಂಗ್ರಹಿಸುವ ಕೇಂದ್ರವಾಗಿ ಬದಲಾಯಿತು. ಪಶ್ಚಿಮ ಆಫ್ರಿಕಾದಲ್ಲಿರುವ ಬೋಜದಾರ್ (ಭೂಪಟ 4.1) ಭೂಶಿರವನ್ನು ದಾಟುವುದು ಪೋರ್ಚುಗೀಸರಿಗೆ ಅತ್ಯಂತ ಕಷ್ಟಕರವಾಗಿತ್ತು. 1434 ರಲ್ಲಿ ಇದು ಸಾಧ್ಯವಾಗುವುದರೊಂದಿಗೆ ಅವರಿಗೆ ಪಶ್ಚಿಮ ಆಫ್ರಿಕಾದ ಕರಾವಳಿಯಲ್ಲಿರುವ ಇತರ ಪ್ರದೇಶಗಳಿಗೂ ತಲುಪಲು ಸುಲಭಸಾಧ್ಯವಾಯಿತು. ಇದರ ಫಲವಾಗಿ ಗುಲಾಮರ ಹಾಗೂ ಚಿನ್ನದ ವ್ಯಾಪಾರದ ಮೂಲಕ ಆರ್ಥಿಕ ಲಾಭವನ್ನು ಪಡೆಯಲು ಪೋರ್ಚುಗೀಸ್ ರಾಜನಿಗೆ ಸಾಧ್ಯವಾಯಿತು. ಇದು ಪೋರ್ಚುಗೀಸರಿಗೆ ಹೆಚ್ಚಿನ ಸಮುದ್ರಯಾನಗಳನ್ನು ಕೈಗೊಳ್ಳಲು ಪ್ರೇರಣೆಯಾಯಿತು. ಆಫ್ರಿಕಾ ಭೂಖಂಡಕ್ಕೆ ಹೊರತಾಗಿ ಆಫ್ರಿಕಾದ ಪಶ್ಚಿಮ ಕರಾವಳಿಯ ಸಮೀಪದಲ್ಲಿರುವ ಅಟ್ಲಾಂಟಿಕ್ ದ್ವೀಪಗಳಿಗೂ ಪೋರ್ಚುಗೀಸರು ಕ್ರಮೇಣ ಕೃಷಿಯನ್ನು ವಿಸ್ತರಿಸಿದರು ಮತ್ತು ಅಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ ಆಫ್ರಿಕಾ ಕರಾವಳಿಯ ಅನ್ವೇಷಣೆ ಹಾಗೂ ಅಟ್ಲಾಂಟಿಕ್ ದ್ವೀಪಗಳ

### ವಸಾಹತೀಕರಣ

ಒಂದು ರಾಷ್ಟ್ರವು ತಮ್ಮದಲ್ಲದ ಭೂಪ್ರದೇಶದ ಮೇಲೆ ಆಧಿಪತ್ಯವನ್ನು ಸ್ಥಾಪಿಸುವ ಪ್ರಕ್ರಿಯೆಯನ್ನು ವಸಾಹತೀಕರಣ (Colonisation) ಎನ್ನುವರು. ಈ ವಸಾಹತುಗಳಲ್ಲಿ ತಮ್ಮ ಆರ್ಥಿಕ – ರಾಜಕೀಯ – ಸಾಂಸ್ಕೃತಿಕ ಆಧಿಪತ್ಯವನ್ನುಪಯೋಗಿಸಿ ಶೋಷಣೆಯನ್ನು ಮಾಡಲು ಸಾಮ್ರಾಜ್ಯಶಾಹೀ ದೇಶಗಳು ಪ್ರಯತ್ನಿಸಿದವು.

ವಸಾಹತೀಕರಣವು ಏಷ್ಯಾದ ಕಡೆಗಿರುವ ಸಮುದ್ರ ಮಾರ್ಗದ ಸಂಶೋಧನೆಗಾಗಿ ನಡೆಸಿದ ಪೋರ್ಚುಗೀಸರ ಯಾತ್ರೆಗಳಿಗೆ ಹಿನ್ನೆಲೆಯನ್ನು ಒದಗಿಸಿತು.

## ಅಟ್ಲಾಂಟಿಕ್ ದ್ವೀಪಗಳು

ಅಟ್ಲಾಂಟಿಕ್ ದ್ವೀಪಗಳು ಆಫ್ರಿಕಾ ಭೂಖಂಡದ ಪಶ್ಚಿಮ ಕರಾವಳಿಯ ಅಟ್ಲಾಂಟಿಕ್ ಸಾಗರದಲ್ಲಿರುವ ದ್ವೀಪಗಳಾಗಿವೆ. ಮಡೇರಾ (Madeira), ಎಜೋರ್ಸ್ (Azores), ಕ್ಯಾನರಿ (Canary) ಮತ್ತು ಕೇಪ್ ವರ್ದೆ (Cape Verde) ಎಂಬಿವು ಇವುಗಳಲ್ಲಿ ಪ್ರಮುಖ ದ್ವೀಪಗಳಾಗಿವೆ. ಈ ದ್ವೀಪಗಳನ್ನು ಕೃಷಿ ಉತ್ಪಾದನಾ ಕೇಂದ್ರಗಳಾಗಿಯೂ ಬಂದರುಗಳಾಗಿಯೂ ಉಪಯೋಗಿಸಬಹುದಾಗಿತ್ತು. ಇಲ್ಲಿ ಆಧಿಪತ್ಯವನ್ನು ಸ್ಥಾಪಿಸಿದ ಪೋರ್ಚುಗೀಸರು ಈ ದ್ವೀಪಗಳನ್ನು ಆಫ್ರಿಕಾದೊಂದಿಗೆ ವ್ಯವಹರಿಸಲಿರುವ ಪ್ರಮುಖ ಕೇಂದ್ರವಾಗಿಯೂ ಏಷ್ಯಾಕ್ಕೆ ಪ್ರಯಾಣ ಮಾಡುವ ಹಡಗುಗಳಿಗೆ ನೀರು ಮತ್ತು ಆಹಾರಗಳನ್ನು ಪೂರೈಸುವ ಕೇಂದ್ರವಾಗಿಯೂ ಉಪಯೋಗಿಸಿದರು. ನಂತರ ಕ್ಯಾನರಿ ದ್ವೀಪಗಳು ಸ್ಪೈನಿನ ನಿಯಂತ್ರಣಕ್ಕೊಳಪಟ್ಟವು.




ಭೂಪಟ 4.2

ಪೋರ್ಚುಗೀಸ್ ನಾವಿಕನಾದ ಬಾರ್ತಲೋಮಿಯೋ ಡಯಾಸ್ 1488 ರಲ್ಲಿ ಆಫ್ರಿಕಾ ಖಂಡದ ದಕ್ಷಿಣ ತುದಿಯಾದ ಕೇಪ್ ಆಫ್ ಗುಡ್ ಹೋಪ್ ಅನ್ನು (Cape of Good Hope, ಗುಡ್ ಹೋಪ್ ಭೂಶಿರ (ಭೂಪಟ 4.3)) ತಲುಪಿದನು. ಪ್ರಕ್ಷುಬ್ಧವಾದ ಸಮುದ್ರವನ್ನು ದಾಟಿ ಭಾರತವನ್ನು ತಲುಪಲು ಸಾಧ್ಯವಾಗದೆ ಅವರು ಹಿಂತಿರುಗಿದರು. ಅನಂತರ ಪೋರ್ಚುಗೀಸರು ಹಿಂದೂ ಮಹಾಸಾಗರದ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿಕೊಂಡು ಸಂಚರಿಸಲು ಸಾಧ್ಯವಾಗುವ ರೀತಿಯಲ್ಲಿರುವ ಹಡಗುಗಳನ್ನು ನಿರ್ಮಿಸಿದರು. ಅನಂತರ ಅದೇ ಮಾರ್ಗವನ್ನು ಅನುಸರಿಸಿ ಸಮುದ್ರಯಾನವನ್ನು ಆರಂಭಿಸಿದ ವಾಸ್ಕೋ ಡ ಗಾಮ, ಕೇಪ್ ಆಫ್ ಗುಡ್ ಹೋಪ್‌ನ ಮೂಲಕ ಆಫ್ರಿಕಾದ ಪೂರ್ವ ತೀರವನ್ನು ಸುತ್ತಿ 1498 ರಲ್ಲಿ ಭಾರತದ ಕೋಝಿಕ್ಕೋಡ್ ಸಮೀಪದ ಕಾಪ್ಪಾಡ್ (ಭೂಪಟ 4.3) ತೀರವನ್ನು ತಲುಪಿದನು. ಇದು ಏಷ್ಯಾದ ಪ್ರದೇಶಗಳಲ್ಲಿ ಯುರೋಪಿಯನ್ನರ ಆಧಿಪತ್ಯಕ್ಕೆ ಕಾರಣವಾಯಿತು.



ವಾಸ್ಕೋ ಡ ಗಾಮ

ಭೌಗೋಳಿಕ ಅನ್ವೇಷಣೆಗಳಲ್ಲಿ ಪಾಲ್ಗೊಂಡ ಇನ್ನೊಂದು ರಾಷ್ಟ್ರವು ಸ್ಪೈನ್ ಆಗಿದೆ. ಪೋರ್ಚುಗೀಸರಂತೆ ಅವರೂ ಕೂಡ ದೀರ್ಘವಾದ ಕರಾವಳಿ ಮತ್ತು ಸಮುದ್ರಯಾನದ ಇತಿಹಾಸವನ್ನು ಹೊಂದಿದ್ದರು. ಸ್ಪೈನಿನ ಆಡಳಿತಗಾರರಾದ ಫರ್ಡಿನಾಂಡ್ ಮತ್ತು ಇಸಬೆಲ್ಲಾರ ಸಹಾಯವೂ ನಾವಿಕರಿಗೆ ಲಭಿಸಿತ್ತು. ಸ್ಪೈನಿನ ಆರ್ಥಿಕ ಸಹಾಯದೊಂದಿಗೆ




ಭೂಪಟ 4.3

1492ರಲ್ಲಿ ಇಟಲಿಯ ನಾವಿಕನಾದ ಕ್ರಿಸ್ಟೋಫರ್ ಕೊಲಂಬಸ್ ಉತ್ತರ ಅಮೇರಿಕಾದ ಆಗ್ನೇಯ ಭಾಗದಲ್ಲಿರುವ ಬಹಾಮಸ್ ದ್ವೀಪ (ಭೂಪಟ 4.3) ವನ್ನು ತಲುಪಿದನು. ಇದು ಯುರೋಪಿನಲ್ಲಿ ಇದುವರೆಗೆ ಅಪರಿಚಿತವಾಗಿರುವ ಭೂಖಂಡದ ಸಂಶೋಧನೆಗೆ ಕಾರಣವಾಯಿತು. ಇದರೊಂದಿಗೆ ಈ ಭೂಪ್ರದೇಶವೂ ಯುರೋಪಿಯನ್ನರ ಆಕ್ರಮಣ ಮತ್ತು ಶೋಷಣೆಗೆ ಒಳಗಾಯಿತು. 'ಹೊಸ ಜಗತ್ತು' (New World) ಎಂದು ಬಣ್ಣಿಸಲ್ಪಟ್ಟ ಈ ಭೂಪ್ರದೇಶವು ನಂತರ ಅಮೇರಿಕಾ ಎಂದು ಕರೆಯಲ್ಪಟ್ಟಿತು.

## ಪ್ರಿನ್ಸ್ ಹೆನ್ರಿ

ಪೋರ್ಚುಗೀಸ್ ರಾಜಕುಮಾರನೂ ನಾವಿಕನೂ ಆಗಿದ್ದ ಹೆನ್ರಿಯು ಸಾಗರಯಾನವನ್ನು ಪ್ರೋತ್ಸಾಹಿಸಿದನು. 1419 ರಲ್ಲಿ ಅವರು ಪೋರ್ಚುಗಲ್ ನ ಸಾಗ್ರೆಸ್ ನಲ್ಲಿ ಮೊತ್ತಮೊದಲ ನಾವಿಕ ಶಾಲೆಯನ್ನು ಸ್ಥಾಪಿಸಿದನು. ಸಾಗರಯಾನ, ಭೂಪಟ ನಿರ್ಮಾಣ ಎಂಬೀ ವಲಯಗಳಲ್ಲಿ ನಾವಿಕರಿಗೆ ತರಬೇತಿಯನ್ನು ನೀಡುವುದು ಈ ಶಾಲೆಯ ಉದ್ದೇಶವಾಗಿತ್ತು. ಅಟ್ಲಾಂಟಿಕ್ ದ್ವೀಪಗಳ ಸಂಶೋಧನೆ ಮತ್ತು ಆಫ್ರಿಕಾದ ಪಶ್ಚಿಮ ಕರಾವಳಿಯ ಅನ್ವೇಷಣೆಗಳಿಗೆ ಅವನು ನೇತೃತ್ವವನ್ನು ನೀಡಿದನು.

## ಅಮೇರಿಕಾ ಎಂಬ ಹೆಸರು ಬಂದುದು ಹೇಗೆ?

ಬಾರ್ತಲೋಮಿಯೋ ಡಯಾಸ್ ನ ನಂತರ ಏಷ್ಯಾಕ್ಕಿರುವ ಸಮುದ್ರ ಮಾರ್ಗವನ್ನು ಕಂಡುಹಿಡಿಯಲು ಪ್ರಯತ್ನಿಸಿದವನು ಕ್ರಿಸ್ಟೋಫರ್ ಕೊಲಂಬಸ್ ಆಗಿದ್ದನು. 1492ರಲ್ಲಿ ಅವನು ಉತ್ತರ ಅಮೇರಿಕಾದ ಸಮೀಪದಲ್ಲಿರುವ ಬಹಾಮಸ್ ದ್ವೀಪವನ್ನು ತಲುಪಿದನು. ತಾನು ಕಂಡುಹಿಡಿದ ಪ್ರದೇಶವೇ ಭಾರತ ಎಂದು ಅವನು ಭಾವಿಸಿದ್ದನು. ನಂತರ ಇಲ್ಲಿಗೆ ಆಗಮಿಸಿದ ಇನ್ನೊಬ್ಬ ಇಟಾಲಿಯನ್ ಸಂಚಾರಿಯಾದ ಅಮೆರಿಗೋ ವೆಸ್ಪುಸಿಯು ಇದನ್ನು ಹೊಸ ಭೂಖಂಡವೆಂದು ಗುರುತಿಸಿದನು. ಅವನು ಈ ಪ್ರದೇಶವನ್ನು 'ಹೊಸ ಜಗತ್ತು' ಎಂದು ಕರೆದನು. 1507 ರಲ್ಲಿ ಜರ್ಮನ್ ಭೂಪಟ ತಯಾರಕನಾದ (ಕಾರ್ಟೋಗ್ರಾಫರ್) ಮಾರ್ಟಿನ್ ವಾಲ್ಡ್ಸ್ ಮುಲ್ಲರ್ ಈ ಪ್ರದೇಶಗಳಿಗೆ ಅಮೆರಿಗೋ ವೆಸ್ಪುಸಿಯ ಹೆಸರಿನೊಂದಿಗೆ ಸಾಮ್ಯವಿರುವ 'ಅಮೇರಿಕಾ' ಎಂಬ ಹೆಸರನ್ನು ನೀಡಿದನು.



1507 ರಲ್ಲಿ ಮಾರ್ಟಿನ್ ವಾಲ್ಡ್ಸ್ ಮುಲ್ಲರ್ ತಯಾರಿಸಿದ ಜಾಗತಿಕ ಭೂಪಟ

ಆ ಕಾಲದ ಇತರ ಪ್ರಮುಖ ಭೌಗೋಳಿಕ ಅನ್ವೇಷಣೆಗಳನ್ನು ಕೆಳಗೆ ಕೊಡಲಾಗಿದೆ.

| ವ್ಯಕ್ತಿಗಳು | ಅನ್ವೇಷಣೆಗಳು |
|---|---|
| ಪೆಡ್ರೋ ಅಲ್ವಾರೆಸ್ ಕಬ್ರಾಲ್ | ಬ್ರೆಜಿಲ್ |
| ಫರ್ಡಿನಾಂಡ್ ಮೆಗಲನ್ | ಮೊದಲ ಬಾರಿಗೆ ಸಮುದ್ರದ ಮೂಲಕ ಭೂಪ್ರದಕ್ಷಿಣೆ ಮಾಡಿದನು |
| ಜೋನ್ ಕ್ಯಾಬಟ್ | ನ್ಯೂಫೌಂಡ್ ಲೇಂಡ್ |

ಐ.ಸಿ.ಟಿ.ಯ ಸಹಾಯದಿಂದ ಭೌಗೋಳಿಕ ಅನ್ವೇಷಣೆಗಳಿಗೆ ಸಂಬಂಧಿಸಿದ ಪಟ್ಟಿಯನ್ನು ವಿಸ್ತರಿಸಿರಿ.

ಭೌಗೋಳಿಕ ಅನ್ವೇಷಣೆಗಳು ಅನೇಕ ಪರಿಣಾಮಗಳನ್ನು ಉಂಟುಮಾಡಿದವು. ಅವು ಯಾವುವು ಎಂದು ನೋಡೋಣ.

### ತ್ರಿಕೋನ ವ್ಯಾಪಾರ

ಅಟ್ಲಾಂಟಿಕ್ ತ್ರಿಕೋನ ವ್ಯಾಪಾರದಲ್ಲಿ ಯುರೋಪಿನ ಉತ್ಪನ್ನಗಳನ್ನು ಆಫ್ರಿಕಾಕ್ಕೆ ತಲುಪಿಸಿ ಅಲ್ಲಿ ಮಾರಾಟ ಮಾಡಿದರು. ಅಲ್ಲಿಂದ ಗುಲಾಮರನ್ನು ಖರೀದಿಸಿ ನಂತರ ಅವರನ್ನು ಅಮೇರಿಕಾಕ್ಕೆ ತಲುಪಿಸಿ ಮಾರಾಟ ಮಾಡಿದರು. ಅಲ್ಲಿಂದ ಸಕ್ಕರೆ, ಮದ್ಯ ಮತ್ತು ಹತ್ತಿಯನ್ನು ಯುರೋಪಿಗೆ ಕೊಂಡುಹೋದರು. ಈ ರೀತಿಯಲ್ಲಿ ಮೂರೂ ಭೂಖಂಡಗಳನ್ನು ಪರಸ್ಪರ ಬೆಸೆದುಕೊಂಡು ನಡೆಸಿದ ವ್ಯಾಪಾರವನ್ನು ತ್ರಿಕೋನ ವ್ಯಾಪಾರ ಎಂದು ಕರೆಯಲಾಗುತ್ತದೆ. (ಭೂಪಟ 4.4 ನ್ನು ಗಮನಿಸಿರಿ)




ಭೂಪಟ 4.4

- ಅಟ್ಲಾಂಟಿಕ್ ಕರಾವಳಿಯು ಅಮೇರಿಕಾ, ಆಫ್ರಿಕಾ, ಏಷ್ಯಾ ಎಂಬೀ ಭೂಖಂಡಗಳಿಗೆ ಪ್ರಯಾಣಿಸಲಿರುವ ಪ್ರಮುಖ ಸಮುದ್ರಮಾರ್ಗವಾಗಿ ಬದಲಾಯಿತು. ಇದರ ಪರಿಣಾಮವಾಗಿ ಮೆಡಿಟರೇನಿಯನ್ ವ್ಯಾಪಾರವು ಕುಸಿಯಿತು ಮತ್ತು ಅಟ್ಲಾಂಟಿಕ್ ಕರಾವಳಿಯ ವ್ಯಾಪಾರವು ಪ್ರಗತಿಯನ್ನು ಹೊಂದಿತು.
- ಅಮೇರಿಕಾ, ಆಫ್ರಿಕಾ ಮತ್ತು ಏಷ್ಯಾ ಎಂಬೀ ಭೂಖಂಡಗಳ ಅನೇಕ ಪ್ರದೇಶಗಳು ಯುರೋಪಿಯನ್ನರ ಆಕ್ರಮಣಗಳಿಗೆ ಒಳಗಾದವು.
- ಏಷ್ಯಾದ ಕರಿಮೆಣಸು ಸೇರಿದಂತೆ ಇತರ ಸುಗಂಧದ್ರವ್ಯ ಬೆಳೆಗಳ ವ್ಯಾಪಾರವನ್ನು ಯುರೋಪಿಯನ್ನರ ಏಕಸ್ವಾಮ್ಯವಾಗಿ ಬದಲಾಯಿಸುವ ಪ್ರಯತ್ನವು ಆರಂಭವಾಯಿತು.
- ದಕ್ಷಿಣ ಅಮೇರಿಕಾದಿಂದ ದೊಡ್ಡ ಪ್ರಮಾಣದಲ್ಲಿ ಚಿನ್ನ ಮತ್ತು ಬೆಳ್ಳಿಯು ಯುರೋಪನ್ನು ತಲುಪಿತು. ಅದರಲ್ಲಿ ಒಂದು ಭಾಗವು ಭಾರತವನ್ನೂ ತಲುಪಿತು.
- ಯುರೋಪ್, ಆಫ್ರಿಕಾ ಮತ್ತು ಅಮೇರಿಕಾವನ್ನೊಳಗೊಂಡ ತ್ರಿಕೋನ ವ್ಯಾಪಾರ (Triangular Trade) ದ ಅಭಿವೃದ್ಧಿ.
- ಚಿನ್ನ, ಬೆಳ್ಳಿ ಮೊದಲಾದವುಗಳು ದೊಡ್ಡ ಪ್ರಮಾಣದಲ್ಲಿ ಯುರೋಪಿಗೆ ತಲುಪುವುದರೊಂದಿಗೆ ನಾಣ್ಯಗಳ ಬಳಕೆಯು (Monetisation) ಹೆಚ್ಚಾಯಿತು.

ಕ್ರಮೇಣ, ಪೋರ್ಚುಗಲ್ ಮತ್ತು ಸ್ಪೈನ್‌ನ ವಾಣಿಜ್ಯ ಆಧಿಪತ್ಯವು ಕುಸಿಯುವುದರೊಂದಿಗೆ ನೆದರ್ಲೇಂಡ್, ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ರಾಷ್ಟ್ರಗಳು ಆ ಸ್ಥಾನವನ್ನು

ಸ್ವಾಧೀನಪಡಿಸಿಕೊಂಡವು. ಈ ಪೈಪೋಟಿಯಲ್ಲಿ ನೆದರ್ಲೇಂಡನ್ನು ಹಿಂದಿಕ್ಕಿದ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಏಷ್ಯಾ, ಆಫ್ರಿಕಾ ಮತ್ತು ಅಮೇರಿಕಾಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದವು. ಸ್ಪೈನ್ ಮತ್ತು ಪೋರ್ಚುಗಲ್‌ನ ನಿಯಂತ್ರಣದಲ್ಲಿದ್ದ ಅಮೇರಿಕಾದ ಪ್ರದೇಶಗಳನ್ನು ನಂತರ ಲ್ಯಾಟಿನ್ ಅಮೇರಿಕಾ (Latin America) ಎಂದು ಕರೆಯಲಾಯಿತು. ವಸಾಹತೀಕರಣದ ಮೂಲಕ ಆರ್ಥಿಕ ಲಾಭವನ್ನು ಗಳಿಸಿದ ಇಂಗ್ಲೆಂಡ್, ಫ್ರಾನ್ಸ್ ಇತ್ಯಾದಿ ದೇಶಗಳ ತೀವ್ರ ಸ್ಪರ್ಧೆಗೆ ನಂತರದ ಜಗತ್ತು ಸಾಕ್ಷಿಯಾಯಿತು.

ಸಮುದ್ರಯಾನದ ಪರಿಣಾಮಗಳು ಮತ್ತು ವ್ಯಾಪಾರದ ಆಧಿಪತ್ಯದಲ್ಲಿ ಅವುಗಳು ಉಂಟುಮಾಡಿದ ಬದಲಾವಣೆಗಳು ಎಂಬಿವುಗಳನ್ನು ಸೇರಿಸಿಕೊಂಡು ಭೂಪಟಗಳ ಮತ್ತು ಚಿತ್ರಗಳ ಸಹಾಯದಿಂದ ಒಂದು ಡಿಜಿಟಲ್ ಆಲ್ಬಂ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

ಭೂಪಟ (4.5)ವನ್ನು ಗಮನಿಸಿರಿ.




ಭೂಪಟ 4.5

ಮೇಲೆ ಕೊಡಲಾದ ಭೂಪಟ (4.5) ದ ಸಹಾಯದಿಂದ ವಿವಿಧ ಭೂಖಂಡಗಳಲ್ಲಿ ಯುರೋಪಿನ ದೇಶಗಳು ಸ್ಥಾಪಿಸಿದ ವಸಾಹತುಗಳನ್ನು ಕಂಡುಹಿಡಿಯಿರಿ. ಅವುಗಳನ್ನು ಗುರುತಿಸಿ ಕೆಳಗೆ ಕೊಡಲಾದ ಪಟ್ಟಿಯಲ್ಲಿ ದಾಖಲಿಸಿರಿ ಮತ್ತು ಅಟ್ಲಾಸಿನ ಸಹಾಯದಿಂದ ಹೆಚ್ಚಿನ ವಸಾಹತುಗಳನ್ನು ಕಂಡುಹಿಡಿದು ಪಟ್ಟಿಯನ್ನು ವಿಸ್ತರಿಸಿರಿ.

| ದೇಶಗಳು | ವಸಾಹತುಗಳು | | |
|---|---|---|---|
| | ಏಷ್ಯಾ | ಆಫ್ರಿಕಾ | ಅಮೇರಿಕಾ |
| ಪೋರ್ಚುಗಲ್ | | | |
| ಸ್ಪೈನ್ | | | |
| ನೆದರ್ಲೇಂಡ್ | | | |
| ಫ್ರಾನ್ಸ್ | | | |
| ಇಂಗ್ಲೆಂಡ್ | | | |

## ಮರ್ಕಂಟಲಿಸಂ

*1499ರಲ್ಲಿ ಭಾರತದಿಂದ ಹಿಂತಿರುಗಿದ ವಾಸ್ಕೋ ಡ ಗಾಮನಿಗೆ ರಾಜ ಮ್ಯಾನುಯೆಲ್ ಮತ್ತು ರಾಜಸಭೆಯು ಗೌರವಯುತವಾದ ಸತ್ಕಾರ ನೀಡಿದ ಸಂದರ್ಭದಲ್ಲಿ ರಾಜಸಭೆಯ ಸದಸ್ಯನಾದ ವಿಮಿಯಾಸೊ ಪ್ರಭುವು ವಾಸ್ಕೋ ಡ ಗಾಮನನ್ನು ಉದ್ದೇಶಿಸಿ " ಭಾರತದಿಂದ ನಾವು ಯಾವ ಸರಕುಗಳನ್ನು ಪಡೆಯಬಹುದು ಅದಕ್ಕೆ ಪ್ರತಿಯಾಗಿ ಭಾರತೀಯರು ಏನನ್ನು ಬಯಸುತ್ತಾರೆ?" ಎಂದು ಕೇಳಿದಾಗ ಕಾಳುಮೆಣಸು, ದಾಲ್ಚೀನಿ, ಶುಂಠಿ, ಧೂಪ, ಕಸ್ತೂರಿ ಮೊದಲಾದವುಗಳನ್ನು ಭಾರತದಿಂದ ಪಡೆಯಬಹುದು ಎಂದೂ ಚಿನ್ನ, ಬೆಳ್ಳಿ, ವೆಲ್ವೆಟ್, ಸ್ಕಾರ್ಲೆಟ್ ಬಟ್ಟೆ ಇತ್ಯಾದಿಗಳನ್ನು ಭಾರತೀಯರು ಬಯಸುತ್ತಾರೆ ಎಂದೂ ವಾಸ್ಕೋ ಡ ಗಾಮನು ಉತ್ತರಿಸಿದನು. ನಂತರ ಪ್ರಭು ಈ ರೀತಿಯಾಗಿ ಪ್ರತಿಕ್ರಿಯಿಸಿದರು. "ಹಾಗಾದರೆ ಅವರು ನಮ್ಮನ್ನು ಕಂಡುಹಿಡಿದದ್ದು ಎಂದು ನಾನು ಭಾವಿಸುತ್ತೇನೆ."*

*C.R.Boxer, Portuguese Conquest and Commerce in Southern Asia: 1500-1750,(Variorum), Hampshire, 1985, p. ix*

*(ಸ್ವತಂತ್ರಾನುವಾದ)*

ವಾಸ್ಕೋ ಡ ಗಾಮ ಮತ್ತು ವಿಮಿಯಾಸೋ ಪ್ರಭುವಿನ ನಡುವಿನ ಸಂಭಾಷಣೆಯನ್ನು ಗಮನಿಸಿದಿರಲ್ಲವೇ. ಪ್ರಭುವು ಈ ರೀತಿ ಹೇಳಲು ಕಾರಣವೇನಾಗಿರಬಹುದು? ಪರಿಶೀಲಿಸೋಣ.

ಆ ಕಾಲದಲ್ಲಿ ಯುರೋಪಿನ ದೇಶಗಳ ಆರ್ಥಿಕ ನೀತಿಯು ಚಿನ್ನ ಮತ್ತು ಬೆಳ್ಳಿಯನ್ನು ಸ್ವಾಧೀನಪಡಿಸಿಕೊಳ್ಳುವುದಾಗಿತ್ತು. ಭಾರತೀಯರಿಗೆ ಚಿನ್ನ ಮತ್ತು ಬೆಳ್ಳಿಯನ್ನು ನೀಡಬೇಕೆಂದು ವಾಸ್ಕೋ ಡ ಗಾಮನಿಂದ ತಿಳಿದಾಗ ಪ್ರಭುವು ಈ ರೀತಿಯಲ್ಲಿ ಪ್ರತಿಕ್ರಿಯಿಸಿದನು. ವ್ಯಾಪಾರದ ಮೂಲಕ ಚಿನ್ನ ಮತ್ತು ಬೆಳ್ಳಿಯ ಸಂಗ್ರಹಕ್ಕೆ ಪ್ರಾಧಾನ್ಯ ನೀಡಿದ ಅಂದಿನ ಆರ್ಥಿಕ ನೀತಿಯನ್ನು ಮರ್ಕಂಟಲಿಸಂ (Mercantilism) ಎನ್ನುತ್ತಾರೆ.

ಈ ನೀತಿಯ ಪ್ರಕಾರ ಒಂದು ದೇಶದ ಸಂಪತ್ತನ್ನು ಅದು ಹೊಂದಿರುವ ಚಿನ್ನ ಮತ್ತು ಬೆಳ್ಳಿಯ ಪ್ರಮಾಣದಿಂದ ನಿರ್ಧರಿಸಲಾಗುತ್ತದೆ. ಈ ನೀತಿಯನ್ನು ಅನುಸರಿಸಿದ ದೇಶಗಳು ಚಿನ್ನ ಮತ್ತು ಬೆಳ್ಳಿಯ ರೂಪದಲ್ಲಿ ಸಂಪತ್ತನ್ನು ಸಂಗ್ರಹಿಸಲು ಹಾತೊರೆಯುತ್ತಿದ್ದವು. ತಮ್ಮ ದೇಶಕ್ಕೆ ಆಮದುಗಳನ್ನು ಕಡಿಮೆ ಮಾಡುವ ಹಾಗೂ ರಫ್ತನ್ನು ಹೆಚ್ಚಿಸುವ ಮೂಲಕ ತಮ್ಮ ಕೈವಶವಿರುವ ಸಂಪತ್ತನ್ನು (ಚಿನ್ನ ಮತ್ತು ಬೆಳ್ಳಿ) ಸಂರಕ್ಷಿಸಲು ಮತ್ತು ಇತರ ದೇಶಗಳಿಂದ ಗರಿಷ್ಠ ಸಂಪತ್ತನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬುದು ಮರ್ಕಂಟಲಿಸಂ ನೀತಿಯ ವಿಶೇಷತೆಯಾಗಿದೆ.

### ಬುಲಿಯನ್ ನಾಣ್ಯ
(Bullion Coin)

ಸಂಪತ್ತು ಎಂಬ ನೆಲೆಯಲ್ಲಿ ಸಂಗ್ರಹಿಸಲಾದ ಚಿನ್ನ, ಬೆಳ್ಳಿ ಮುಂತಾದ ಬೆಲೆಬಾಳುವ ಲೋಹಗಳು ಬುಲಿಯನ್ (Bullion) ಎಂದು ಕರೆಯಲ್ಪಟ್ಟಿತು. ಬುಲಿಯನ್ ನಾಣ್ಯದಲ್ಲಿ ಒಳಗೊಂಡಿರುವ ಲೋಹಗಳ ಪ್ರಮಾಣ ಹಾಗೂ ಅದರ ಮೌಲ್ಯವನ್ನು ವಿನಿಮಯಕ್ಕಾಗಿ ಪರಿಗಣಿಸಲಾಗುತ್ತದೆ. ಉದಾ: ಒಂದು ಚಿನ್ನದ ನಾಣ್ಯದಲ್ಲಿರುವ ಚಿನ್ನದ ಮೌಲ್ಯವನ್ನು ಅದರ ವಿನಿಮಯ ಮೌಲ್ಯವಾಗಿ ಪರಿಗಣಿಸುವುದನ್ನು ಬುಲಿಯನ್ ವ್ಯವಸ್ಥೆ ಎನ್ನುವರು.

ಮರ್ಕಂಟಲಿಸಂ ನೀತಿಗಳ ವಿಶೇಷತೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

### ವಸಾಹತುಶಾಹಿ ನೀತಿಗಳು

ವಸಾಹತುಗಳಿಂದ ಗರಿಷ್ಠ ಸಂಪತ್ತನ್ನು ತಮ್ಮ ದೇಶಗಳಿಗೆ ತರುವ ಉದ್ದೇಶದೊಂದಿಗೆ ವಸಾಹತುಶಾಹಿ ದೇಶಗಳು ಜಾರಿಗೆ ತಂದ ನೀತಿಗಳು ಮತ್ತು ತಂತ್ರಗಳನ್ನು ವಸಾಹತುಶಾಹಿ

ನೀತಿಗಳು (Colonial policies) ಎನ್ನುತ್ತಾರೆ. ಏಷ್ಯಾದಲ್ಲಿ ನಡೆಸುತ್ತಿದ್ದ ಸುಗಂಧದ್ರವ್ಯ ವಸ್ತುಗಳ ವ್ಯಾಪಾರದ ಏಕಸ್ವಾಮ್ಯವನ್ನು ಅರಬರಿಂದ ವಶಪಡಿಸಿಕೊಳ್ಳುವುದು ಪೋರ್ಚುಗೀಸರ ವಸಾಹತುಶಾಹಿ ನೀತಿಯ ಪ್ರಮುಖ ಉದ್ದೇಶವಾಗಿತ್ತು. ಈ ನೀತಿಯ ಪ್ರಕಾರ ವಸಾಹತುಗಳಲ್ಲಿನ ವ್ಯಾಪಾರವು ಪೋರ್ಚುಗೀಸ್ ರಾಜನ ಏಕಸ್ವಾಮ್ಯವಾಯಿತು. ಅವರು ಯುರೋಪಿನ ಇತರ ದೇಶಗಳನ್ನು ಈ ವ್ಯಾಪಾರದಿಂದ ದೂರವಿರಿಸಲು ಪ್ರಯತ್ನಿಸಿದರು. ಇದಕ್ಕಾಗಿ ಅವರು ಪೋರ್ಚುಗೀಸ್ ಅಲ್ಲದ ಯುರೋಪಿಯನ್ನರಿಗೆ ಪೋರ್ಚುಗೀಸ್ ಹಡಗುಗಳಲ್ಲಿ ಪ್ರಯಾಣಿಸಲು ಅನುಮತಿ ನೀಡಲಿಲ್ಲ.

ಸ್ಪೈನ್ ಕೂಡ ತನ್ನ ವಸಾಹತುಗಳನ್ನು ರಾಜನ ನೇರ ಆಡಳಿತಕ್ಕೆ ಒಳಪಡಿಸಿತು. ಅವರು ಅಮೇರಿಕಾದಿಂದ ಸ್ಪೈನ್ ಗೆ ಸಾಧ್ಯವಾದಷ್ಟು ಚಿನ್ನ ಮತ್ತು ಬೆಳ್ಳಿಯನ್ನು ತಲುಪಿಸಲು ಪ್ರಯತ್ನಿಸಿದರು. ಡಚ್ಚರು ಮತ್ತು ಇಂಗ್ಲೀಷರು ಜೋಯಿಂಟ್ ಸ್ಟಾಕ್ ಕಂಪೆನಿಗಳ ಮೂಲಕ ವ್ಯಾಪಾರವನ್ನು ನಡೆಸುತ್ತಿದ್ದರು. ಆದರೆ ಪೋರ್ಚುಗಲ್, ಸ್ಪೈನ್ ಮುಂತಾದ ದೇಶಗಳ ರಾಜರುಗಳು ವಸಾಹತುಗಳೊಂದಿಗೆ ನೇರವಾಗಿ ವ್ಯಾಪಾರವನ್ನು ನಡೆಸುತ್ತಿದ್ದರು. ರಾಜರು ವ್ಯಾಪಾರದಿಂದ ಗಳಿಸಿದ ಆರ್ಥಿಕ ಲಾಭವನ್ನು ಅರಮನೆಗಳನ್ನು ನಿರ್ಮಿಸಲು ಮತ್ತು ಅಲಂಕರಿಸಲು ಖರ್ಚು ಮಾಡಿದರು. ಆದರೆ ಕಂಪನಿಗಳು ತಾವು ಗಳಿಸಿದ ಲಾಭವನ್ನು ವ್ಯವಹಾರದಲ್ಲಿ ಮರುಹೂಡಿಕೆ ಮಾಡಿ ಹೆಚ್ಚಿನ ಆದಾಯವನ್ನು ಗಳಿಸಿದವು. ಇದು ಇಂಗ್ಲೆಂಡಿನಲ್ಲಿ ಕೈಗಾರಿಕೆಗಳು ಆರಂಭಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿತು.

### ಜೋಯಿಂಟ್ ಸ್ಟಾಕ್ ಕಂಪನಿ

ಜೋಯಿಂಟ್ ಸ್ಟಾಕ್ ಕಂಪನಿಗಳು ಬಂಡವಾಳದ ಏಕೀಕರಣಕ್ಕೆ (Union of Capital) ಪ್ರಾಮುಖ್ಯವನ್ನು ನೀಡುವ ಮೂಲಕ ರೂಪುಗೊಳ್ಳುತ್ತವೆ. ಇವುಗಳು ವಿವಿಧ ಮೂಲಗಳಿಂದ ಬಂಡವಾಳವನ್ನು ಸಂಗ್ರಹಿಸುತ್ತವೆ ಮತ್ತು ಹೂಡಿಕೆಗೆ ಅನುಕೂಲವನ್ನು ಒದಗಿಸುತ್ತವೆ. ಪ್ರತಿಯೊಬ್ಬ ಹೂಡಿಕೆದಾರರೂ ಇದರಲ್ಲಿ ಪಾಲನ್ನು ಹೊಂದಿರುತ್ತಾರೆ.

'ಸಂಪತ್ತಿನ ಸರಿಯಾದ ವಿನಿಯೋಗವು ಇಂಗ್ಲೆಂಡಿನಲ್ಲಿ ಕೈಗಾರಿಕೀಕರಣಕ್ಕೆ ಸಹಾಯಕವಾಯಿತು.' ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ವಸಾಹತೀಕರಣ ಮತ್ತು ಸ್ಥಳೀಯರು

*ನಾನು ಹಡಗಿಗೆ ತಲುಪಿದಾಗ ಒಂದೇ ಸಂಕೋಲೆಯಲ್ಲಿ ಬಂಧಿಸಲ್ಪಟ್ಟ, ಸಂಕಷ್ಟ, ನೋವುಗಳು ಮಾತ್ರ ಪ್ರತಿಬಿಂಬಿಸುವ ಮುಖಭಾವವನ್ನು ಹೊಂದಿರುವ ಅನೇಕ ಕಪ್ಪು ಜನಾಂಗದವರನ್ನು ಕಂಡೆನು. ಡೆಕ್‌ಗೆ ಎಸೆಯಲ್ಪಟ್ಟ ನನ್ನ ಮೂಗಿಗೆ ಜೀವನದ ಅತ್ಯಂತ ಕಟುವಾದ ವಾಸನೆಯು ಬಡಿಯಿತು. ಅದರಿಂದಾಗಿ ಆಹಾರವನ್ನೂ ಕೂಡ ಸೇವಿಸಲು ಸಾಧ್ಯವಾಗದೆ ಸಾಯಲು ಆಗ್ರಹಿಸಿದ ನನ್ನನ್ನು ಒಬ್ಬ ಬಿಳಿಯ ವ್ಯಕ್ತಿ ಅಂಗಾತ ಮಲಗಿಸಿ ಕಾಲುಗಳನ್ನು ಕಟ್ಟಿದನು. ಇನ್ನೊಬ್ಬನಿಂದ ನನಗೆ ಭಯಂಕರವಾದ ಚಾಟಿ ಏಟುಗಳು ಬಿದ್ದುವು.*

*ಒಂದು ದಿನ ನಮ್ಮೊಂದಿಗಿದ್ದವರಲ್ಲಿ ಒಟ್ಟಿಗೆ ಸರಪಳಿಯಲ್ಲಿ ಬಂಧಿಸಿದ್ದ ಇಬ್ಬರು ಸಹಚರರು ಈ ಸಂಕಷ್ಟದ ಬದುಕಿಗಿಂತ ಸಾವೇ ಲೇಸು ಎಂದು ಸಮುದ್ರಕ್ಕೆ ಹಾರಿದರು. ಅನಾರೋಗ್ಯದ ಕಾರಣ ಸರಪಳಿಯಿಲ್ಲದ ಇನ್ನೊಬ್ಬ ಅವರ ಹಿಂದೆಯೇ ಹಾರಿದನು. ಹಡಗಿನ ಅಧಿಕಾರಿಗಳು ತಡೆದುದರಿಂದ ಅವರನ್ನು ಅನುಸರಿಸಲು ಬಯಸಿದ ಅನೇಕರಿಗೆ ಅದನ್ನು ಮಾಡಲು ಸಾಧ್ಯವಾಗಲಿಲ್ಲ. ಮೊದಲ ಇಬ್ಬರು ನೀರಿನಲ್ಲಿ ಮುಳುಗಿ ಮರಣಹೊಂದಿದರೆ, ಮೂರನೆಯವನನ್ನು ಬಂಧಿಸಿದ ಅಧಿಕಾರಿಗಳು ಸಾವನ್ನು ಬಯಸಿದ್ದಕ್ಕಾಗಿ ಅವನಿಗೆ ಚಾಟಿ ಏಟನ್ನು ಕೊಟ್ಟರು.*

*(Western Civilization Beyond Boundaries Noble, Strauss, Osheim, Neuschel, Accampo, Roberts, Cohen)*

*(ಸ್ವತಂತ್ರಾನುವಾದ)*



ಈ ಮೇಲಿನ ಚಿತ್ರವು ಸ್ಪೈನ್ ದೇಶದ ಹೆರ್ನಾನ್ ಕೊರ್ಟೆಸ್ ಮತ್ತು ಅವನ ತಂಡವು ಮೆಕ್ಸಿಕೊದಲ್ಲಿ (ಅಮೇರಿಕ ಭೂಖಂಡ) ಅಜೆಟಕರ ರಾಜಧಾನಿಯಾದ ಟೆನೋಚ್ಟಿಟ್ಲಾನ್ ಗೆ (Tenochtitlan) ಆಗಮಿಸಿದ ದೃಶ್ಯವನ್ನು ಸೂಚಿಸುತ್ತದೆ. (ಈ ಚಿತ್ರವನ್ನು ಪಾಠದ ಆರಂಭದಲ್ಲಿ ಕಾಣಬಹುದು) ಸ್ಥಳೀಯರು ಅವರಿಗೆ ಆಹಾರ ಮತ್ತು ಉಡುಗೊರೆಗಳನ್ನು ನೀಡುತ್ತಾರೆ. ಚಿತ್ರದಲ್ಲಿ ಸ್ಥಳೀಯ ದ್ವಿಭಾಷಿಯಾದ ಡೊನಾ ಮರಿನಾಳು ಹೆರ್ನಾನ್ ಕೊರ್ಟೆಸ್ ಸಮೀಪದಲ್ಲಿ ನಿಂತಿರುವುದನ್ನು ಕಾಣಬಹುದು. ಯುರೋಪಿಯನ್ನರು ಇಂತಹ ದ್ವಿಭಾಷಿಕರ ಸಹಾಯದಿಂದ ಸ್ಥಳೀಯರೊಂದಿಗೆ ಸಂವಹನ ನಡೆಸುತ್ತಿದ್ದರು.

ಯುರೋಪಿನ ಗುಲಾಮಹಡಗಿನಿಂದ ತಪ್ಪಿಸಿಕೊಂಡ ಆಫ್ರಿಕಾ ದೇಶದ ನಿವಾಸಿಯಾದ ಒಲೌದಾ ಈಕ್ವಿಯಾನೋ ಅವರ ಅನುಭವ ಕಥನವನ್ನು ಓದಿದಿರಲ್ಲವೆ. ಆಫ್ರಿಕಾದಲ್ಲಿನ ಗುಲಾಮಗಿರಿ ಮತ್ತು ಗುಲಾಮ ವ್ಯಾಪಾರವು ಅಲ್ಲಿನ ಸ್ಥಳೀಯರ ಮೇಲೆ ಯುರೋಪಿನ ವಸಾಹತುಶಾಹಿತ್ವ ಬೀರಿದ ಪರಿಣಾಮದ ಫಲವಾಗಿದೆ.

ವಸಾಹತುಶಾಹಿತ್ವದ ಇತರ ಪರಿಣಾಮಗಳು ಯಾವುವೆಂದು ನೋಡೋಣ.

- ವಸಾಹತುಗಳ ಸಂಪತ್ತು ಯುರೋಪಿನ ದೇಶಗಳಿಗೆ ಹರಿಯಿತು.
- ಸ್ಥಳೀಯರು ತಮ್ಮ ಪ್ರದೇಶದ ಮೇಲೆ ಹೊಂದಿದ್ದ ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳನ್ನು ಕಳೆದುಕೊಂಡರು.
- ವಸಾಹತುಗಳ ಸ್ಥಳೀಯ ಸಂಸ್ಕೃತಿಗಳು ಅವನತಿ ಹೊಂದಿದವು.
- ವಸಾಹತುಗಳಲ್ಲಿ ಪಾಶ್ಚಿಮಾತ್ಯ ಜೀವನ ಶೈಲಿಗಳು ಪಸರಿಸಿದವು.
- ವಸಾಹತುಗಳಲ್ಲಿ ಕ್ರೈಸ್ತ ಧರ್ಮವು ಪ್ರಚಾರವಾಯಿತು.

## ಹೊಸ ಜಗತ್ತು, ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಗಳು

ಭೌಗೋಳಿಕ ಅನ್ವೇಷಣೆಗಳು ವ್ಯಾಪಾರ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳಿಗೆ ದಾರಿ ಮಾಡಿ ಕೊಟ್ಟಿತು ಎಂದು ನಾವು ಈಗಾಗಲೇ ಚರ್ಚಿಸಿದ್ದೇವೆ. ಆರಂಭಕಾಲದಿಂದಲೇ ವ್ಯಾಪಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವರು ಇದರಿಂದ ಬಹಳ ಶ್ರೀಮಂತರಾದರು. ಅವರನ್ನು ವ್ಯಾಪಾರೋದ್ಯಮಿಗಳೆಂದು ಕರೆಯಲಾಗುತ್ತಿತ್ತು. ಈ ಆರ್ಥಿಕ ವ್ಯವಸ್ಥೆಯನ್ನು ವ್ಯಾಪಾರಿ ಬಂಡವಾಳಶಾಹಿತ್ವ (Merchant Capitalism) ಎಂದು ಕರೆಯಲಾಗುತ್ತದೆ.

ವ್ಯಾಪಾರೋದ್ಯಮಿಗಳು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಕರಕುಶಲ ಕಾರ್ಮಿಕರಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತಿದ್ದಲ್ಲದೆ ತಮ್ಮ ಮನೆಗಳನ್ನು ಕೇಂದ್ರೀಕರಿಸಿ ವಸ್ತುಗಳನ್ನು ಉತ್ಪಾದಿಸುತ್ತಿದ್ದರು. ಕರಕುಶಲ ಕಾರ್ಮಿಕರಿಗೆ ಅವರ ಸೇವೆಗೆ ಪ್ರತಿಫಲ ನೀಡಿದ ನಂತರ ಇವರು ಈ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟಮಾಡಿ ಲಾಭಗಳಿಸಿದರು. ಈ ರೀತಿಯಲ್ಲಿ ಉತ್ಪಾದಕರ ಹಾಗೂ ಬಳಕೆಗಾರರ ನಡುವಿನ ಮಧ್ಯವರ್ತಿಗಳಾಗಿ ವ್ಯಾಪಾರೋದ್ಯಮಿಗಳು ಬದಲಾದರು.

ವಸಾಹತೀಕರಣದ ಮೂಲಕ ಗಳಿಸಿದ ಸಂಪತ್ತನ್ನು ಉಪಯೋಗಿಸಿಕೊಂಡು ಇಂಗ್ಲೆಂಡ್ ಕೈಗಾರಿಕೆಗಳನ್ನು ಆರಂಭಿಸಿದ ವಿಚಾರವನ್ನು ಈ ಮೊದಲೇ ಸೂಚಿಸಲಾಗಿದೆಯಲ್ಲವೆ. ಈ ರೀತಿಯಾಗಿ ಸಂಪತ್ತನ್ನು ಹೂಡಿಕೆ ಮಾಡಿದವರು ಕೈಗಾರಿಕೆಗಳ ಯಜಮಾನರಾದರು ಮಾತ್ರವಲ್ಲದೆ ದೊಡ್ಡ ಪ್ರಮಾಣದಲ್ಲಿ ಲಾಭವನ್ನು ಗಳಿಸಿದರು. ಇದರೊಂದಿಗೆ ವ್ಯಾಪಾರ ಬಂಡವಾಳಶಾಹಿತ್ವವು ಕೈಗಾರಿಕಾ ಬಂಡವಾಳಶಾಹಿತ್ವವಾಗಿ (Industrial Capitalism) ಬದಲಾಯಿತು.

## ಕೈಗಾರಿಕಾ ಕ್ರಾಂತಿಯ ಕಡೆಗೆ

*ಫ್ರೆಂಚ್ ಕ್ರಾಂತಿಯು ಯುರೋಪಿನಲ್ಲಿ ಯುದ್ಧದ ಜ್ವಾಲೆಗೆ ದಾರಿಮಾಡಿಕೊಟ್ಟ ಸಮಯದಲ್ಲಿ, ಕಾಲುವೆಯ ಇನ್ನೊಂದು (ಇಂಗ್ಲೀಷ್ ಕಾಲುವೆ) ಬದಿಯಲ್ಲಿ ಹಗಲು ಸೂರ್ಯನಿಗೆ ತಡೆಯೊಡ್ಡಿಕೊಂಡೂ ರಾತ್ರಿ ಆಕಾಶವನ್ನು ಪ್ರಕಾಶಿಸುವಂತೆ ಮಾಡಿಕೊಂಡು ಇಂಗ್ಲೆಂಡ್‌ನ ಕಾರ್ಖಾನೆಗಳ ಚಿಮಿಣಿಗಳಿಂದ ಬೆಂಕಿ ಮತ್ತು ಹೊಗೆಯು ಮೇಲೇರಲಾರಂಭಿಸಿತು....*



ಇಂಗ್ಲೆಂಡ್‌ನ ಕಬ್ಬಿಣದ ಕೈಗಾರಿಕೆ

*(Western Civilization Beyond Boundaries Noble, Strauss, Osheim, Neuschel, Accampo, Roberts, Cohen)*

*(ಸ್ವತಂತ್ರಾನುವಾದ)*

ಮೇಲಿನ ವಿವರಣೆಯು 18ನೇ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಬೆಳೆದು ಬಂದ ಕಾರ್ಖಾನೆಗಳ ಕುರಿತಾದ ಮಾಹಿತಿಯಾಗಿದೆ. ಈ ಕಾರ್ಖಾನೆಗಳು ಯಂತ್ರಗಳನ್ನು ಬಳಸಿ ಬೃಹತ್ ಪ್ರಮಾಣದಲ್ಲಿ ಉತ್ಪಾದನೆಯನ್ನು ನಡೆಸುತ್ತಿದ್ದವು. ಉತ್ಪಾದನಾ ವಲಯಕ್ಕೆ ಯಂತ್ರಗಳ ಆಗಮನವಾದುದು ಅನೇಕ ಬದಲಾವಣೆಗಳನ್ನು ಉಂಟುಮಾಡಿತು. 1780 ಮತ್ತು 1850ರ ನಡುವೆ ಉತ್ಪಾದನಾ ಕ್ಷೇತ್ರದಲ್ಲಿ ಉಂಟಾದ ಇಂತಹ ಬದಲಾವಣೆಗಳನ್ನು ಕೈಗಾರಿಕಾ ಕ್ರಾಂತಿ (Industrial Revolution) ಎನ್ನುವರು. ಬಟ್ಟೆ ಉತ್ಪಾದನಾ ಕ್ಷೇತ್ರದಲ್ಲಿ ಕೈಗಾರಿಕಾ ಕ್ರಾಂತಿಯು ಪ್ರಾರಂಭವಾಯಿತು.

ಕೈಗಾರಿಕಾ ಬಂಡವಾಳಶಾಹಿತ್ವವು ಯಾವ ರೀತಿಯಲ್ಲಿ ವ್ಯಾಪಾರಿ ಬಂಡವಾಳಶಾಹಿತ್ವದಿಂದ ಭಿನ್ನವಾಗಿದೆ ಎಂದು ತಿಳಿದುಕೊಂಡು ದಾಖಲಿಸಿರಿ.

ಕೈಗಾರಿಕಾ ಕ್ರಾಂತಿಯ ಭಾಗವಾಗಿ ನಡೆದ ಪ್ರಮುಖ ಬದಲಾವಣೆಗಳನ್ನು ಪರಿಶೀಲಿಸೋಣ.

- ಉತ್ಪಾದನೆಯು ಯಾಂತ್ರೀಕೃತಗೊಂಡಿತು.
- ಉತ್ತಮ ಕಬ್ಬಿಣ-ಉಕ್ಕು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದರೊಂದಿಗೆ ಗುಣಮಟ್ಟದ ಉಪಕರಣಗಳನ್ನು ಉತ್ಪಾದಿಸಲು ಸಾಧ್ಯವಾಯಿತು.
- ಉಗಿಯನ್ನು ಚೈತನ್ಯದ ಮೂಲವಾಗಿ ಉಪಯೋಗಿಸಲು ಪ್ರಾರಂಭಿಸಿದರು.
- ಸಾರಿಗೆ ಸೌಲಭ್ಯಗಳು ಅಭಿವೃದ್ಧಿಗೊಂಡವು.
- ಉತ್ಪಾದನೆಯು ಗುಡಿಸಲುಗಳಿಂದ ಕಾರ್ಖಾನೆಗಳಿಗೆ ಸ್ಥಳಾಂತರಗೊಂಡಿತು.

### ಕೃಷಿ ಕ್ರಾಂತಿ
### (Agrarian Revolution)

17ನೇ ಶತಮಾನದಲ್ಲಿ ಇಂಗ್ಲೆಂಡಿನ ಕೃಷಿಕ್ಷೇತ್ರದಲ್ಲಿ ಉಂಟಾದ ಬೃಹತ್ ಬದಲಾವಣೆಗಳನ್ನು ಸೂಚಿಸಲು ಕೃಷಿಕ್ರಾಂತಿ ಎಂಬ ಪದವನ್ನು ಬಳಸಲಾಗುತ್ತದೆ. ಕೃಷಿಕ್ರಾಂತಿಗೆ ಸಂಬಂಧಿಸಿದ ಪ್ರಮುಖ ಬದಲಾವಣೆಗಳು.

- ಸಣ್ಣ ಕೃಷಿಭೂಮಿಗಳನ್ನು ಒಟ್ಟು ಸೇರಿಸಿ ರೂಪುಗೊಂಡ ವಿಶಾಲ ಕೃಷಿಭೂಮಿಗಳನ್ನು ಬೇಲಿ ಹಾಕಿ ಸಂರಕ್ಷಿಸಲಾಯಿತು. (Enclosure Movement).
- ಸರದಿ ಬೆಳೆಯನ್ನು ಪ್ರಾರಂಭಿಸಲಾಯಿತು.
- ಹೊಸ ಕೃಷಿ ಉಪಕರಣಗಳ ಬಳಕೆ

ಇದರ ಪರಿಣಾಮವಾಗಿ ಆಹಾರ ಉತ್ಪಾದನೆಯಲ್ಲಿ ಹೆಚ್ಚಳವುಂಟಾಯಿತು.

ಕೈಗಾರಿಕಾ ಕ್ರಾಂತಿಯು ಮಾನವ ಜೀವನದಲ್ಲಿ ಧನಾತ್ಮಕ ಮತ್ತು ಋಣಾತ್ಮಕ ಬದಲಾವಣೆಗಳಿಗೆ ದಾರಿಮಾಡಿಕೊಟ್ಟಿತು. ಅವುಗಳು ಯಾವುವು ಎಂದು ನೋಡೋಣ.

| ಒಳಿತುಗಳು | ಕೆಡುಕುಗಳು |
|---|---|
| ಕೈಗಾರಿಕೆಗಳ ಉದಯ | ಕಾರ್ಮಿಕರ ಶೋಷಣೆ |
| ಉತ್ಪಾದನೆಯಲ್ಲಿ ಹೆಚ್ಚಳ | ಬಡತನ, ಸಾಂಕ್ರಾಮಿಕ ರೋಗಗಳು |
| ನೂತನ ಉದ್ಯೋಗಾವಕಾಶಗಳು | ಮಹಿಳೆಯರಿಗೆ ಮತ್ತು ಮಕ್ಕಳಿಗೆ ದೀರ್ಘಾವಧಿಯ ಕೆಲಸದ ಸಮಯ ಮತ್ತು ಕಡಿಮೆ ವೇತನ |
| ನಗರಗಳ ಬೆಳವಣಿಗೆ ಮತ್ತು ವ್ಯಾಪಿಸುವಿಕೆ | ಕೊಳೆಗೇರಿಗಳ ಉದಯ |
| ನಾಗರಿಕ ಜೀವನ | ಜನದಟ್ಟಣೆಯ ಮತ್ತು ನೈರ್ಮಲ್ಯವಿಲ್ಲದ ನಗರಗಳು |
| ಉತ್ತಮ ಜೀವನ ಸನ್ನಿವೇಶಗಳು | ನಗರಗಳಲ್ಲಿ ಕಾರ್ಮಿಕರ ದುಸ್ತರ ಬದುಕು |

## ಸೈಂಟ್ ಗಿಲ್ಸ್




ಸೈಂಟ್ ಗಿಲ್ಸ್ ಕೊಳೆಗೇರಿಯ ದೃಶ್ಯ

ಇದು ಲಂಡನ್ ನಗರದ ಸೈಂಟ್ ಗಿಲ್ಸ್ ಕೊಳೆಗೇರಿಯ ಬಡತನವನ್ನು ಸೂಚಿಸುವ ಚಿತ್ರವಾಗಿದೆ. "ಶುಚಿತ್ವವಿಲ್ಲದ ಮಕ್ಕಳು, ನೀಳವಾದ ಕೆದರಿದ ಕೂದಲಿರುವ, ಹರಿದು ಚಿಂದಿಯಾದ ಬಟ್ಟೆ ಧರಿಸಿದ, ಧೂಮಪಾನ ಮಾಡುವ, ಬಹುಪಾಲು ಐರ್ಲೆಂಡ್‌ನಿಂದ ಬಂದು ಬಳಲಿ ಬೆಂಡಾದ ಪುರುಷರು; ಬೂಟು, ಕಾಲುಚೀಲಗಳಿಲ್ಲದ, ಮಡಿಲಲ್ಲಿ ಮಗುವನ್ನಿರಿಸಿದ ಬಹುಪಾಲು ಮಹಿಳೆಯರು, ದಾರದಿಂದ ಬಿಗಿಯಾಗಿ ಕಟ್ಟಿದ ಏಕವಸ್ತ್ರದಿಂದಿರುವ ಸ್ತ್ರೀಯರು; ತೋಳದಂತಿರುವ ನಾಯಿಗಳು, ಕೊಳೆತ ತರಕಾರಿಗಳು ಬಿದ್ದಿರುವ ಕಾಲುದಾರಿ; ಕುಬ್ಜ ಮನೆಗಳು, ಬೀದಿಗಳಲ್ಲಿ ಅಲ್ಲಲ್ಲಿ ನೇತುಹಾಕಿದ ಲಿನನ್ ಬಟ್ಟೆಗಳು; ಕೆಲಸದ ಮಧ್ಯೆ ನಿಶ್ಚಲರಾದ ಜನತೆ; ಶೂಟಿಂಗ್ ಜ್ಯಾಕೆಟ್ ಗಳ ಅವಶೇಷಗಳೆಡೆಯಲ್ಲಿಯೂ, ಕಿಟಕಿಗಳ ಬಾಗಿಲುಗಳಿಗೆ ಒರಗಿಯೂ, ಅಂಗಳದಲ್ಲೂ ಬೀದಿಯಲ್ಲಿಯೂ ತೊಂದರೆಯಾಗುವ ರೀತಿಯಲ್ಲಿ ವಿಶ್ರಾಂತಿ ಪಡೆಯುವವರು, ಅವರ ಸುತ್ತಲೂ ಸ್ವಲ್ಪವೂ ನಿದ್ರಿಸದಂತೆ ಕಾಣುವ ನಿಸ್ತೇಜರಾದ ಬಾಲಕರು, ಬಹುಮಂದಿಗೂ ಅವರ ಜೀವನೋಪಾಯಗಳ ನಡುವಿನ ಸಂಬಂಧ ಇದಕ್ಕಿಂತ ಮೊದಲು ಇಷ್ಟೊಂದು ಕಳಪೆಯಾಗಿರಲಿಲ್ಲ."

*(Western Civilization Beyond Boundaries Noble, Strauss, Osheim, Neuschel, Accampo, Roberts, Cohen)*

(ಸ್ವತಂತ್ರಾನುವಾದ)

ಕೈಗಾರಿಕೀಕರಣದ ಕೆಡುಕುಗಳನ್ನು ನೀವು ಗಮನಿಸಿದಿರಲ್ಲವೇ. ಕೈಗಾರಿಕೋದ್ಯಮಿಗಳ ಶೋಷಣೆಗಳ ವಿರುದ್ಧ ವಿವಿಧ ರೀತಿಯ ಪ್ರತಿಭಟನೆಗಳು ಮತ್ತು ಆಶಯಗಳು ಬೆಳೆದು ಬಂದವು. ಸಮಾಜವಾದಿ ಆಶಯಗಳು ಇವುಗಳಲ್ಲಿ ಪ್ರಧಾನವಾದುದಾಗಿದೆ. ಸಂಪನ್ಮೂಲಗಳ ನ್ಯಾಯಯುತ ವಿತರಣೆ ಮತ್ತು ಉತ್ಪಾದನಾ ಘಟಕಗಳ ಸಾರ್ವಜನಿಕ ಮಾಲೀಕತ್ವವು ಸಮಾಜವಾದಿ ಆಶಯಗಳ ಕೇಂದ್ರಬಿಂದುವಾಗಿತ್ತು. ಆರಂಭದಲ್ಲಿ ಕೇವಲ ಕಲ್ಪನೆಯೋ ಕನಸೋ ಆಗಿದ್ದ ಸಮಾಜವಾದವನ್ನು ಪ್ರಾಯೋಗಿಕ ಮತ್ತು ವೈಜ್ಞಾನಿಕವಾದ ಸಿದ್ಧಾಂತವಾಗಿ ಬದಲಾಯಿಸಿದ ಗೌರವವು ಕಾರ್ಲ್ ಮಾರ್ಕ್ಸ್ ಮತ್ತು ಫೆಡರಿಕ್ ಎಂಗೆಲ್ಸ್‌ಗೆ ಸಲ್ಲುತ್ತದೆ.


ಕಾರ್ಲ್ ಮಾರ್ಕ್ಸ್

'ಕೈಗಾರಿಕಾ ಕ್ರಾಂತಿಯ ಒಳಿತುಗಳು ಮತ್ತು ಕೆಡುಕುಗಳು' ಎಂಬ ವಿಷಯದ ಕುರಿತು ಸಂವಾದವನ್ನು ಆಯೋಜಿಸಿರಿ.

## ಸಾಮ್ರಾಜ್ಯ ಶಾಹಿತ್ವ

ಇದು ಬ್ರಿಟಿಷ್ ವಿಡಂಬನಾತ್ಮಕ ನಿಯತಕಾಲಿಕವಾದ ಪಂಚ್ 1906ರಲ್ಲಿ ಪ್ರಕಟಿಸಿದ ಕಾರ್ಟೂನ್ ಆಗಿದೆ. ಬೆಲ್ಜಿಯಂ ರಾಜನಾದ ಲಿಯೋಪೋಲ್ಡ್ ಒಂದು ಹಾವಿನ ರೂಪದಲ್ಲಿ ರಬ್ಬರ್ ಸುರುಳಿಗಳಾಗಿ ಓರ್ವ ಕಾಂಗೋ ಸ್ವದೇಶಿಯನ್ನು ಸುತ್ತುವರಿಯುವುದನ್ನು ಕಾರ್ಟೂನ್ ಚಿತ್ರದಲ್ಲಿ ಕಾಣಬಹುದು. ಯುರೋಪಿನ ದೇಶವಾದ ಬೆಲ್ಜಿಯಂ, ಆಫ್ರಿಕಾದ ರಾಷ್ಟ್ರವಾದ ಕಾಂಗೋದಲ್ಲಿ ಆರಂಭಿಸಿದ ರಬ್ಬರ್ ಕೃಷಿಯು ಅಲ್ಲಿನ ಜನರನ್ನು ಹೇಗೆ ಬಾಧಿಸಿತು ಎಂಬುದನ್ನು ಈ ಕಾರ್ಟೂನ್ ಸೂಚಿಸುತ್ತದೆ.

- ಆಫ್ರಿಕಾದ ದೇಶವಾದ ಕಾಂಗೋದಲ್ಲಿ ಬೆಲ್ಜಿಯಂ ರಬ್ಬರ್ ಕೃಷಿಯನ್ನು ಯಾಕೆ ಆರಂಭಿಸಿರಬಹುದು?
- ಇದು ಕಾಂಗೋ ದೇಶವನ್ನು ಹೇಗೆ ಬಾಧಿಸಿರಬಹುದು?
- ಇಂತಹ ಕ್ರಮಗಳನ್ನು ಬೆಲ್ಜಿಯಂ ಮಾತ್ರ ಕೈಗೊಂಡಿರಬಹುದೆ?

ಪರಿಶೀಲಿಸೋಣ.


ಬೆಲ್ಜಿಯಂ ಕಾಂಗೋದ ರಬ್ಬರ್ ಸುರುಳಿಗಳು

ಕೈಗಾರಿಕೆಗಳಲ್ಲಿ ಉತ್ಪಾದನೆಯು ಹೆಚ್ಚಾದಂತೆ ಇವುಗಳಿಗೆ ಬೇಕಾದ ಕಚ್ಚಾಸಾಮಾಗ್ರಿಗಳನ್ನು ಸಂಪೂರ್ಣವಾಗಿ ಕೈಗಾರಿಕೀಕರಣಗೊಂಡ ಆ ದೇಶಗಳಿಂದಲೇ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಇದರ ಪರಿಣಾಮವಾಗಿ, ಬೆಲ್ಜಿಯಂನಂತಹ ದೇಶಗಳು ವಸಾಹತುಗಳನ್ನು ತಮಗೆ ಅಗತ್ಯವಾದ ಕಚ್ಚಾಸಾಮಾಗ್ರಿಗಳನ್ನು

## ಸಾಮ್ರಾಜ್ಯ ಶಾಹಿತ್ವ

ಒಂದು ದೇಶವು ತನ್ನ ಗಡಿಯ ಹೊರಗಿನ ಇತರ ಪ್ರದೇಶಗಳ ಮೇಲೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಧಿಪತ್ಯವನ್ನು ಸ್ಥಾಪಿಸುವ ಮತ್ತು ನೆಲೆ ನಿಲ್ಲಿಸುವ ಪ್ರಕ್ರಿಯೆಯನ್ನು ಸಾಮ್ರಾಜ್ಯಶಾಹಿತ್ವ ಎನ್ನುವರು.

ಸಂಗ್ರಹಿಸಲಿರುವ ಕೇಂದ್ರಗಳಾಗಿ ಬದಲಾಯಿಸಿದವು.

ಕೈಗಾರಿಕೋದ್ಯಮಿಗಳು ಉತ್ಪಾದನೆಯನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸುವ ಮೂಲಕ ಮತ್ತು ವೇತನವನ್ನು ಕಡಿಮೆ ಮಾಡುವ ಮೂಲಕ ಲಾಭವನ್ನು ಹೆಚ್ಚಿಸಲು ಪ್ರಯತ್ನಿಸಿದರು. ವೇತನದಲ್ಲಿನ ಇಳಿಕೆಯು ಉತ್ಪನ್ನಗಳನ್ನು ಖರೀದಿಸುವ ಜನರ ಸಾಮರ್ಥ್ಯವನ್ನು ಕಡಿಮೆ ಮಾಡಿತು. ಇದರಿಂದಾಗಿ ಉತ್ಪನ್ನಗಳನ್ನು ತಮ್ಮ ದೇಶಗಳಲ್ಲಿ ಸಂಪೂರ್ಣವಾಗಿ ಮಾರಾಟ ಮಾಡಲು ಸಾಧ್ಯವಾಗಲಿಲ್ಲ. ಹೀಗಾಗಿ ಕೈಗಾರಿಕಾ ರಾಷ್ಟ್ರಗಳು ಮಾರುಕಟ್ಟೆಗಳಿಗಾಗಿ ಅನ್ವೇಷಣೆಯನ್ನು ಆರಂಭಿಸಿದವು. ಅವರು ಈ ಮಾರುಕಟ್ಟೆಗಳನ್ನು ವಸಾಹತುಗಳಲ್ಲಿ ಕಂಡುಕೊಂಡರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಯುರೋಪಿಯನ್ನರು ವಸಾಹತುಗಳನ್ನು ಕಚ್ಚಾವಸ್ತುಗಳನ್ನು ಸಂಗ್ರಹಿಸುವ ಸ್ಥಳಗಳಾಗಿ ಮತ್ತು ಉತ್ಪನ್ನಗಳನ್ನು ಮಾರಾಟ ಮಾಡಲಿರುವ ಮಾರುಕಟ್ಟೆಗಳಾಗಿ ಪರಿವರ್ತಿಸಿದರು. ಇದಕ್ಕಾಗಿ ಅಲ್ಲಿ ಅವರು ರಾಜಕೀಯ ಆಧಿಪತ್ಯವನ್ನು ಸ್ಥಾಪಿಸಿದರು. ಇದು ಸಾಮ್ರಾಜ್ಯಶಾಹಿತ್ವಕ್ಕೆ (Imperialism) ಕಾರಣವಾಯಿತು.

ಸಾಮ್ರಾಜ್ಯಶಾಹಿತ್ವವು ಯುರೋಪಿನ ರಾಷ್ಟ್ರಗಳ ಆರ್ಥಿಕ ನೀತಿಗಳನ್ನು ಹೇಗೆ ಬದಲಾಯಿಸಿತು? ಚರ್ಚಿಸಿರಿ.

19ನೇ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೆಂಡ್, ಫ್ರಾನ್ಸ್ ಎಂಬೀ ರಾಷ್ಟ್ರಗಳು ಬೃಹತ್ ಸಾಮ್ರಾಜ್ಯಶಾಹಿ ಶಕ್ತಿಗಳಾಗಿ ಮಾರ್ಪಟ್ಟವು. ಪ್ರಪಂಚದ ಹೆಚ್ಚಿನ ಭಾಗಗಳೂ ಈ ಎರಡು ಶಕ್ತಿಗಳ ಆಧಿಪತ್ಯಕ್ಕೊಳಪಟ್ಟವು. ಶೀಘ್ರದಲ್ಲೇ, ಜರ್ಮನಿ, ಇಟಲಿ, ಬೆಲ್ಜಿಯಂ, ಅಮೇರಿಕಾ, ಜಪಾನ್ ಮುಂತಾದ ರಾಷ್ಟ್ರಗಳೂ ಹೊಸ ಸಾಮ್ರಾಜ್ಯಶಾಹಿ ರಾಷ್ಟ್ರಗಳಾಗಿ ಬೆಳೆದು ಬಂದವು. ಈ ಹೊಸ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ತಮ್ಮ ವಸಾಹತುಗಳನ್ನು ವ್ಯಾಪಿಸಲು ಪ್ರಯತ್ನಿಸಲಾರಂಭಿಸಿದವು. ಇದು ಹಳೆಯ ಸಾಮ್ರಾಜ್ಯಶಾಹಿ ಮತ್ತು ಹೊಸ ಶಕ್ತಿಗಳ ನಡುವೆ ತೀವ್ರ ಪೈಪೋಟಿಗೆ ಕಾರಣವಾಯಿತು. ಇದು 20ನೇ ಶತಮಾನದ ಜಾಗತಿಕ ಚರಿತ್ರೆಯ ದಿಶೆಯ ಮೇಲೆ ಪ್ರಭಾವ ಬೀರಿತಲ್ಲದೆ ಹೊಸ ಸಂಘರ್ಷಗಳಿಗೆ ದಾರಿ ಮಾಡಿಕೊಟ್ಟಿತು. ಅವು ಯಾವುವೆಂದು ಪರಿಶೀಲಿಸೋಣ.

## ಪ್ರಥಮ ಜಾಗತಿಕ ಯುದ್ಧ

"1992 ಜೂನ್ 28 ರಂದು ಮತ್ತು ಆ ವರ್ಷದ ಅನಂತರದ ದಿನಗಳಲ್ಲಿ ಸಾವಿರಾರು ಜನರ ಜೀವನವನ್ನು ಬಲಿತೆಗೆದುಕೊಂಡ ಬಾಲ್ಕನ್ ಯುದ್ಧದ ಕೇಂದ್ರವಾದ ಸರಜಾವೋಗೆ ಫ್ರೆಂಚ್ ಅಧ್ಯಕ್ಷರಾದ ಮಿತ್ತರಾಂಡ್ ಅನಿರೀಕ್ಷಿತ ಹಾಗೂ ತ್ವರಿತ ಭೇಟಿಯನ್ನು ನೀಡಿದರು.... ಫ್ರೆಂಚ್ ಅಧ್ಯಕ್ಷರು ಸರಜಾವೋಗೆ ಭೇಟಿ ನೀಡಲು ಆ ದಿನವನ್ನೇ ಆಯ್ಕೆ ಮಾಡಲು ಕಾರಣವೇನಾಗಿರಬಹುದು?... ಯಾಕೆಂದರೆ ಜೂನ್ 28 ಎಂಬುದು ಆಸ್ಟ್ರಿಯ – ಹಂಗೇರಿಯ ಆರ್ಚ್ ಡ್ಯೂಕ್ ಆಗಿದ್ದ ಫ್ರಾನ್ಸಿಸ್ ಫರ್ಡಿನಾಂಡ್ ಸರಜಾವೋದಲ್ಲಿ 1914ರಲ್ಲಿ ಕೊಲೆಯಾದ ದಿನವಾಗಿತ್ತು...."

*The Age of Extremes The Short Twentieth Century 1914-1991, Eric Hobsbawm*

(ಸ್ವತಂತ್ರಾನುವಾದ)


ಎರಿಕ್ ಹಾಬ್ಸ್‌ಬಾಮ್

ಇದು ಪ್ರಸಿದ್ಧ ಇತಿಹಾಸಕಾರನಾದ ಎರಿಕ್ ಹಾಬ್ಸ್‌ಬಾಮ್ ಅವರು ಬರೆದ ಫ್ರಾನ್ಸ್ ಅಧ್ಯಕ್ಷರ ಸರಜಾವೊ ಭೇಟಿಯ ಕುರಿತಾದ ವಿವರಣೆಯ ಭಾಗವಾಗಿದೆ. ಇದರಲ್ಲಿ 1914 ರಿಂದ 1918 ರ ತನಕ ನಡೆದ ಪ್ರಥಮ ಜಾಗತಿಕ ಯುದ್ಧದ ಕಾರಣಗಳಲ್ಲಿ ಒಂದಾದ ಹತ್ಯೆಯ ಕುರಿತು ಅವರು ನೆನಪಿಸುತ್ತಾರೆ. ಜಗತ್ತಿನ ಎಲ್ಲಾ ರಾಷ್ಟ್ರಗಳೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಈ ಯುದ್ಧದಲ್ಲಿ ಭಾಗವಹಿಸಿದ್ದವು. ಯುದ್ಧದ ಇತರ ಕಾರಣಗಳು ಯಾವುವು ಎಂದು ನೋಡೋಣ.

## ಸಾಮ್ರಾಜ್ಯಶಾಹಿ ದೇಶಗಳ ತೀವ್ರ ಪೈಪೋಟಿ

ಸಾಮ್ರಾಜ್ಯಶಾಹಿ ಶಕ್ತಿಗಳ ತೀವ್ರ ಪೈಪೋಟಿಯ ಕುರಿತು ಈ ಮೊದಲೇ ಸೂಚಿಸಲಾಗಿದೆಯಲ್ಲವೇ. ಹಳೆಯ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಕೈವಶದಲ್ಲಿದ್ದ ಪ್ರದೇಶಗಳನ್ನು ವಶಪಡಿಸಿಕೊಂಡರೆ ಮಾತ್ರವೇ ಹೊಸ ಸಾಮ್ರಾಜ್ಯಶಾಹಿ ದೇಶಗಳಿಗೆ ತಮ್ಮ ಉದ್ಯಮದಲ್ಲಿ ಯಶಸ್ವಿಯಾಗಲು ಸಾಧ್ಯವಿತ್ತು. ಜರ್ಮನಿಯು ಆರ್ಥಿಕ ಮತ್ತು ಕೈಗಾರಿಕಾ ವಲಯದಲ್ಲಿ ಗಳಿಸಿದ ಗಮನಾರ್ಹ ಪ್ರಗತಿಯು ಫ್ರಾನ್ಸ್ ಮತ್ತು ಇಂಗ್ಲೆಂಡನ್ನು ಆತಂಕಕ್ಕೀಡುಮಾಡಿತು. ಆಫ್ರಿಕಾ ಮತ್ತು ಏಷ್ಯಾದ ಪ್ರದೇಶಗಳು ಇಂಗ್ಲೆಂಡ್ ಮತ್ತು ಫ್ರಾನ್ಸ್‌ನ ವಸಾಹತುಗಳಾಗಿದ್ದುದರಿಂದ, ಜರ್ಮನಿಯು ತುರ್ಕಿಯಿಂದ ನಿಯಂತ್ರಿಸಲ್ಪಟ್ಟಿದ್ದ ಒಟ್ಟೋಮನ್ ಸಾಮ್ರಾಜ್ಯದ ಪ್ರದೇಶಗಳ ಮೇಲೆ ತನ್ನ ದೃಷ್ಟಿ ನೆಟ್ಟಿತು. ಇದಕ್ಕಾಗಿ ಅವರು ಬರ್ಲಿನ್ – ಬಾಗ್ದಾದ್ ರೈಲು ಮಾರ್ಗದ ಯೋಜನೆಗೆ ರೂಪುರೇಷೆ ನೀಡಿದರು. ಇದು ತಮ್ಮ ನಿಯಂತ್ರಣ ವಲಯಗಳ ಭದ್ರತೆಗೆ ತೊಂದರೆ ಉಂಟುಮಾಡುತ್ತದೆ ಎಂದು ಇಂಗ್ಲಂಡ್, ಫ್ರಾನ್ಸ್ ಮತ್ತು ರಷ್ಯಾ ದೇಶಗಳು ಆತಂಕಗೊಂಡಿದ್ದವು. ಹೀಗೆ ಘರ್ಷಣೆಗಳು ಮತ್ತು ದ್ವೇಷವು ಬೆಳೆಯಿತು.

## ಆಕ್ರಮಣಕಾರಿ ರಾಷ್ಟ್ರೀಯತೆ

ತನ್ನ ದೇಶದ ಕುರಿತಾದ ಅಮಿತವೂ ಭಾವನಾತ್ಮಕವೂ ಆದ ಅಭಿಮಾನ ಮತ್ತು ಅದರ ವೈಭವೀಕರಣವನ್ನು ಆಕ್ರಮಣಕಾರಿ ರಾಷ್ಟ್ರೀಯತೆ ಎನ್ನುವರು. ಇದು ವಂಶೀಯತೆಯೊಂದಿಗೆ ಬೆಸೆದುಕೊಂಡಿದೆ. ಒಂದು ಜನಾಂಗದ ಜನರು ವಾಸಿಸುವ ಎಲ್ಲಾ ಪ್ರದೇಶಗಳು ತಮಗೆ ಸೇರಿವೆ ಎಂಬ ವಾದವನ್ನು ಹಲವು ರಾಷ್ಟ್ರಗಳು ಮುಂದಿರಿಸಿದವು. ಅಂತಹ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು ತಮ್ಮ ರಾಷ್ಟ್ರದ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಯತ್ನಕ್ಕೆ ಈ ರಾಷ್ಟ್ರಗಳು ಜನಾಂಗೀಯತೆಯನ್ನು ಉಪಯೋಗಿಸಿದವು. ಆಕ್ರಮಣಕಾರಿ ರಾಷ್ಟ್ರೀಯತೆಯು ಜರ್ಮನಿ, ಸರ್ಬಿಯ ಮೊದಲಾದ ದೇಶಗಳಲ್ಲಿ ಅಪಾಯಕಾರಿ ಮಟ್ಟಕ್ಕೆ ಬೆಳೆಯಿತು. ಪಾನ್-ಸ್ಲಾವ್, ಪಾನ್-ಜರ್ಮನ್ ಚಳುವಳಿಗಳು ಈ ರೀತಿಯ ಆಕ್ರಮಣಕಾರಿ ರಾಷ್ಟ್ರೀಯತೆಗಿರುವ ಉದಾಹರಣೆಗಳಾಗಿವೆ.

### ಪಾನ್-ಸ್ಲಾವ್ ಚಳುವಳಿ

ಇದು ಪೂರ್ವ ಯುರೋಪಿನ ಸ್ಲಾವ್ ವಂಶಜರು ವಾಸಿಸುವ ಪ್ರದೇಶಗಳನ್ನು ಒಂದುಗೂಡಿಸುವ ಉದ್ದೇಶದೊಂದಿಗೆ ಆರಂಭಿಸಿದ ಚಳುವಳಿಯಾಗಿದೆ. ಇದನ್ನು ಬಾಲ್ಕನ್ ದೇಶವಾದ ಸರ್ಬಿಯಾವು ನೇತೃತ್ವವನ್ನು ನೀಡಿತು. ಈ ಚಳುವಳಿಯನ್ನು ರಷ್ಯಾವು ಬೆಂಬಲಿಸಿತು.

### ಪಾನ್-ಜರ್ಮನ್ ಚಳುವಳಿ

ಇದು ಜರ್ಮನಿಯ ನೇತೃತ್ವದಲ್ಲಿ ಪ್ರಾರಂಭವಾದ ಚಳುವಳಿಯಾಗಿದೆ. ಮಧ್ಯ ಯುರೋಪ್ ಮತ್ತು ಬಾಲ್ಕನ್ ಪ್ರದೇಶಕ್ಕೆ ಆಡಳಿತವನ್ನು ವಿಸ್ತರಿಸಲು ಟ್ಯುಟೋನಿಕ್ ವಂಶಜರನ್ನು ಒಂದುಗೂಡಿಸುವುದು ಈ ಚಳುವಳಿಯ ಗುರಿಯಾಗಿತ್ತು.

## ಸೈನಿಕ ಬಣಗಳ ರೂಪೀಕರಣ

ವಸಾಹತುಗಳಿಗೋಸ್ಕರ ನಡೆದ ಸ್ಪರ್ಧೆ ಮತ್ತು ಆಕ್ರಮಣಕಾರಿ ರಾಷ್ಟ್ರೀಯತೆಯು ಹತ್ತೊಂಬತ್ತನೇ ಶತಮಾನದ ಕೊನೆಯ ದಿನಗಳಲ್ಲಿ ಯುರೋಪಿನ ರಾಷ್ಟ್ರಗಳ ನಡುವೆ ಪರಸ್ಪರ ಭೀತಿ ಮತ್ತು ಅನುಮಾನಗಳನ್ನು ಸೃಷ್ಟಿಸಿತು. ಇದು ರಾಷ್ಟ್ರಗಳನ್ನು ಪರಸ್ಪರ ಸೈನಿಕ ಮೈತ್ರಿ ಮಾಡಿಕೊಳ್ಳಲು ಪ್ರೇರೇಪಿಸಿತು. ಇದರ ಪರಿಣಾಮವಾಗಿ ತ್ರಿಶಕ್ತಿ ಮೈತ್ರಿ ಮತ್ತು ತ್ರಿಶಕ್ತಿ ಸೌಹಾರ್ದ ಎಂಬ ಎರಡು ಪ್ರಮುಖ ಸೈನಿಕ ಬಣಗಳು ರೂಪುಗೊಂಡವು.

### ಸೈನಿಕ ಬಣಗಳು






ಆರ್ಚ್ ಡ್ಯೂಕ್ ಫ್ರಾನ್ಸಿಸ್ ಫರ್ಡಿನಾಂಡ್ ನನ್ನು ಹತ್ಯೆಗೈಯುವ ದೃಶ್ಯ,
ಇಟಲಿಯ ದಿನಪತ್ರಿಕೆಯೊಂದರಲ್ಲಿ ಪ್ರಕಟಗೊಂಡ ಚಿತ್ರ.

ಪ್ರಪಂಚದ ವಿವಿಧ ಭಾಗಗಳಲ್ಲಿ ಈ ಎರಡು ಮೈತ್ರಿಗಳಿಗೆ ಸೇರಿದ ರಾಷ್ಟ್ರಗಳ ನಡುವೆ ಘರ್ಷಣೆಗಳು ಹುಟ್ಟಿಕೊಂಡವು. ಒಂದು ರಾಷ್ಟ್ರದ ನಿಯಂತ್ರಣದಲ್ಲಿರುವ ಪ್ರದೇಶ ಅಥವಾ ವಸಾಹತುಗಳನ್ನು ಇನ್ನೊಂದು ರಾಷ್ಟ್ರವು ವಶಪಡಿಸಿಕೊಳ್ಳಲು ನಡೆಸಿದ ಪ್ರಯತ್ನಗಳು ಘರ್ಷಣೆಗಳಿಗೆ ದಾರಿಮಾಡಿತು. ಸೈನಿಕ ಬಣಗಳಲ್ಲಿ ಸದಸ್ಯರಾದ ಯಾವುದಾದರೂ ಒಂದು ರಾಷ್ಟ್ರವು ಒಳಗೊಂಡ ಘರ್ಷಣೆಗಳಲ್ಲಿ ಒಕ್ಕೂಟದ ಇತರ ಸದಸ್ಯ ರಾಷ್ಟ್ರಗಳು ಭಾಗಿಯಾದಾಗ ಸಮಸ್ಯೆಗಳು ಉಲ್ಬಣಿಸಿದವು.

ಫ್ರೆಂಚ್ ಅಧ್ಯಕ್ಷ ಮಿತ್ತರಾಂಡ್ ಭೇಟಿ ನೀಡಿದ ಬೋಸ್ನಿಯಾದ ರಾಜಧಾನಿಯಾದ ಸರೆಜಾವೋದಲ್ಲಿ ಆಸ್ಟ್ರಿಯ – ಹಂಗೇರಿಯ ಉತ್ತರಾಧಿಕಾರಿಯಾದ ಆರ್ಚ್ ಡ್ಯೂಕ್ ಫ್ರಾನ್ಸಿಸ್ ಫರ್ಡಿನಾಂಡ್ ಹತ್ಯೆಯಾದ ವಿಚಾರವನ್ನು ಈ ಮೊದಲೇ ಸೂಚಿಸಲಾಗಿದೆಯಲ್ಲವೆ. ಸರ್ಬಿಯಾ ಪ್ರಜೆಯಾದ ಗಾವ್ ಲೋ ಪ್ರಿನ್ಸೆಪ್ ಈ ಹತ್ಯೆಯನ್ನು ಮಾಡಿದ್ದನು. ಸರ್ಬಿಯ ಮತ್ತು ಆಸ್ಟ್ರಿಯಾದ ನಡುವೆ ಈ ಮೊದಲೇ ವಿವಾದಗಳಿದ್ದುದರಿಂದ ಈ ಹತ್ಯೆಯಲ್ಲಿ ಸರ್ಬಿಯಾವು ಭಾಗಿಯಾಗಿದೆ ಎಂದು ಆಸ್ಟ್ರಿಯಾ ಆರೋಪಿಸಿತು. ನಂತರ 1914 ಜುಲೈ 28 ರಂದು ಆಸ್ಟ್ರಿಯ – ಹಂಗೇರಿಗಳು ಒಟ್ಟಾಗಿ ಸರ್ಬಿಯಾದ ವಿರುದ್ಧ ಯುದ್ಧ ಘೋಷಿಸಿದವು. ಎರಡೂ ಕಡೆಯಲ್ಲಿ ಮಿತ್ರರಾಷ್ಟ್ರಗಳು ಸೇರುವುದರೊಂದಿಗೆ ಇದು ಜಾಗತಿಕ ಯುದ್ಧವಾಗಿ ಮಾರ್ಪಟ್ಟಿತು.

ಯುದ್ಧದ ಪರಿಣಾಮಗಳನ್ನು ಕೆಳಗೆ ಕೊಡಲಾಗಿದೆ.

- ಲಕ್ಷಾಂತರ ಸೈನಿಕರು ಮತ್ತು ನಾಗರಿಕರು ಪ್ರಾಣ ಕಳೆದುಕೊಂಡರು.
- ಕೃಷಿ, ಕೈಗಾರಿಕಾ ವಲಯಗಳು ಅವನತಿ ಹೊಂದಿದವು.

- ಯುರೋಪಿನ ಸಾರ್ವಭೌಮತೆಯ ಪತನವು ಆರಂಭವಾಯಿತು.
- ಏಷ್ಯಾ ಮತ್ತು ಆಫ್ರಿಕಾದಲ್ಲಿ ಸ್ವಾತಂತ್ರ್ಯ ಹೋರಾಟಗಳು ತೀವ್ರಗೊಂಡವು.
- ಜನಾಂಗ ಸಂಘದ (League of Nations) ರೂಪೀಕರಣವಾಯಿತು.
- ಇಟಲಿ, ಜರ್ಮನಿ, ಸ್ಪೈನ್ ಎಂಬೀ ರಾಷ್ಟ್ರಗಳಲ್ಲಿ ಸ್ವೇಚ್ಛಾಧಿಪತ್ಯ (Totalitarianism) ಆಡಳಿತವು ಆರಂಭವಾಯಿತು.

**ಜನಾಂಗ ಸಂಘ**
**(League of Nations)**

ಜಾಗತಿಕ ಶಾಂತಿ, ಸುರಕ್ಷೆ ಹಾಗೂ ಎಲ್ಲಾ ರಾಷ್ಟ್ರಗಳಿಗೂ ಸ್ವಾತಂತ್ರ್ಯವನ್ನು ಖಾತರಿಪಡಿಸಲು ಒಂದು ಅಂತಾರಾಷ್ಟ್ರೀಯ ಸಂಘಟನೆಯನ್ನು ರೂಪೀಕರಿಸಬೇಕೆಂಬ ಆಶಯವನ್ನು ಅಮೇರಿಕಾದ ಅಧ್ಯಕ್ಷರಾದ ವೂಡ್ರೋವಿಲ್ಸನ್ ಮುಂದಿರಿಸಿದರು. ಇದರ ಆಧಾರದಲ್ಲಿ 1920 ಜನವರಿ 10ನೇ ತಾರೀಕಿಗೆ ಜಾಗತಿಕ ಶಾಂತಿ ಮತ್ತು ಸುರಕ್ಷೆಯನ್ನು ಖಾತರಿಪಡಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಅಂತಾರಾಷ್ಟ್ರೀಯ ಸಂಘಟನೆಯೇ ಜನಾಂಗ ಸಂಘ.

## ಯುರೋಪಿನಲ್ಲಿ ಸ್ವೇಚ್ಛಾಧಿಪತ್ಯ ಆಡಳಿತದ ಬೆಳವಣಿಗೆ



ಆಶ್ವಿಟ್ಸ್‌ನಲ್ಲಿರುವ ಸ್ಮಾರಕ

*ನಾಝಿ ಕಾನ್ಸಂಟ್ರೇಶನ್ ಕ್ಯಾಂಪಿನಲ್ಲಿ ಬದುಕಿ ಉಳಿದ ಲಿಡಿಯ ಮ್ಯಾಕ್ಸಿಮೋವಿಕ್ಸ್ 2021 ರಲ್ಲಿ ಪೋಪ್ ಫ್ರಾನ್ಸಿಸ್‌ರನ್ನು ಸಂದರ್ಶಿಸಿದಾಗ ಅವಳ ಕೈಗಳಿಗೆ ಆಶ್ವಿಟ್ಸ್ ಸೆರೆಮನೆಯಲ್ಲಿ ಅವಳ ಮೂರನೇ ವಯಸ್ಸಿನಲ್ಲಿ ಹಚ್ಚೆ ಹಾಕಿದ್ದ ಜೈಲು ಖೈದಿ ಸಂಖ್ಯೆಯ ಮೇಲೆ ಪೋಪ್ ಫ್ರಾನ್ಸಿಸ್ ಚುಂಬಿಸಿದರು. ಆಶ್ವಿಟ್ಸ್ ನಲ್ಲಿ ಡಾ. ಜೋಸೆಫ್ ಮಂಗಲ್‌ರ ಅತಿ ಕ್ರೂರವಾದ ಪ್ರಯೋಗಗಳಿಗೆ ಒಳಗಾಗಿದ್ದ ಆ ಮುಗ್ಧ ಬಾಲೆಗೆ ಮರಣವನ್ನು ಪ್ರತಿದಿನವೂ ನೇರವಾಗಿ ಕಾಣಬೇಕಾಗಿ ಬಂದಿತ್ತು. ಸ್ವಂತ ಜೀವದ ಹಂಗು ತೊರೆದು ಅವಳ ತಾಯಿಯು ಯಾರಿಗೂ ಕಾಣದಂತೆ ತಂದ ಬ್ರೆಡ್‌ ನ ತುಣುಕನ್ನು ಸೇವಿಸಿ ಆ ಮಗು ಬದುಕಿ ಉಳಿದಿತ್ತು. ಆಶ್ವಿಟ್ಸ್ ನಿಂದ ಬಿಡುಗಡೆಗೊಂಡಾಗ ನಾಲ್ಕು ವರ್ಷ ಪ್ರಾಯ ಮಾತ್ರ ಆಗಿದ್ದ ಅವಳನ್ನು ಕಾಯುತ್ತಿದ್ದುದು ಎಲ್ಲಿಗೋ ಓಡಿಹೋಗಲು ನಿರ್ಬಂಧಿತಳಾಗಿದ್ದ ತನ್ನ ತಾಯಿಗೋಸ್ಕರವಿದ್ದ ಹುಡುಕಾಟವಾಗಿತ್ತು...*

(ಸ್ವತಂತ್ರಾನುವಾದ)

ಮೇಲೆ ನೀಡಿರುವುದು ಆಶ್ವಿಟ್ಸ್ (ಪೋಲೆಂಡ್) ನಲ್ಲಿರುವ ನಾಝಿ ಕಾನ್ಸಂಟ್ರೆಶನ್ ಕ್ಯಾಂಪ್‌ನಲ್ಲಿ (ನಾಝಿ ಸೆರೆಮನೆ) ಬದುಕಿ ಉಳಿದ ಲಿಡಿಯಾ ಮ್ಯಾಕ್ಸಿಮೋವಿಕ್ಸ್‌ನ ಆತ್ಮಕಥೆಯಾಗಿದೆ. ಅವಳು ತನ್ನ ಅನುಭವಗಳನ್ನು 'ಎ ಲಿಟಿಲ್ ಗರ್ಲ್ ಇನ್ ಆಶ್ವಿಟ್ಸ್' (A Little Girl in Auschwitz) ಎಂಬ ಪುಸ್ತಕದಲ್ಲಿ ವಿವರಿಸಿದ್ದಾಳೆ. ನಾಝಿಸಂ ಕುರಿತು ನೀವು ಈ ಮೊದಲು ಕೇಳಿರುವಿರಾ? ಅದರ ಇತಿಹಾಸವನ್ನು ಪರಿಶೀಲಿಸೋಣ.

ಪ್ರಥಮ ಜಾಗತಿಕ ಯುದ್ಧವು ಯುರೋಪಿನಲ್ಲಿ ಉಂಟುಮಾಡಿದ ಆರ್ಥಿಕ ರಾಜಕೀಯ ಅನಿಶ್ಚಿತತೆಯ ಪರಿಣಾಮವಾಗಿ ಕೆಲವು ದೇಶಗಳಲ್ಲಿ ಸ್ವೇಚ್ಛಾಧಿಪತ್ಯವನ್ನು (Totalitarianism) ಬೆಂಬಲಿಸುವ ಚಳುವಳಿಗಳು ಹುಟ್ಟಿಕೊಂಡವು. ನಾಗರಿಕರ ಖಾಸಗಿತನವನ್ನು ಗೌರವಿಸದೆ ಆಡಳಿತವು ಜೀವನದ ಎಲ್ಲಾ ವಲಯಗಳಲ್ಲೂ ನಿಯಂತ್ರಣವನ್ನು ಹೇರುವುದನ್ನು ಸ್ವೇಚ್ಛಾಧಿಪತ್ಯ

**ಫ್ಯಾಸಿಸಂ**

'ಫಾಸಸ್' ಎಂಬ ಲ್ಯಾಟಿನ್ ಪದದಿಂದ 'ಫ್ಯಾಸಿಸಂ' ಎಂಬ ಪದವು ರೂಪುಗೊಂಡಿದೆ. ರೋಮನ್ ಚಕ್ರವರ್ತಿಗಳ ಅಧಿಕಾರವನ್ನು ಸೂಚಿಸುವ 'ಒಂದು ಕಟ್ಟು ಕೋಲು ಮತ್ತು ಅದರ ಮೇಲೆ ಕೊಡಲಿ' ಎಂಬುದು ಇದರ ಅರ್ಥ.

ಎನ್ನುತ್ತಾರೆ. ಈ ಸಿದ್ಧಾಂತವು ರಾಷ್ಟ್ರವನ್ನು ಅತಿಯಾಗಿ ವೈಭವೀಕರಿಸುವುದು ಮಾತ್ರವಲ್ಲದೆ ಪ್ರತಿಯೊಬ್ಬ ಪ್ರಜೆಯೂ ಹಕ್ಕುಗಳಿಲ್ಲದೆ ರಾಷ್ಟ್ರಕ್ಕಾಗಿ ಜೀವಿಸಬೇಕು ಎಂಬುದನ್ನು ಪ್ರತಿಪಾದಿಸುತ್ತದೆ. ಸ್ವೇಚ್ಛಾಧಿಪತ್ಯದ ವಿಶೇಷತೆಗಳನ್ನು ಪರಿಶೀಲಿಸೋಣ.

- ಪ್ರಜಾಪ್ರಭುತ್ವದಲ್ಲಿ ನಿರಾಸಕ್ತಿ
- ಸಮಾಜವಾದದೊಂದಿಗೆ ವಿರೋಧ
- ಸ್ವೇಚ್ಛಾಧಿಪತ್ಯ ಆಡಳಿತವನ್ನು ಬೆಂಬಲಿಸುವುದು
- ಆಕ್ರಮಣಕಾರಿ ರಾಷ್ಟ್ರೀಯತೆ
- ರಾಜಕೀಯ ವಿರೋಧಿಗಳ ನಿರ್ಮೂಲನೆ
- ಯುದ್ಧ ಮತ್ತು ಆಕ್ರಮಣಗಳನ್ನು ಪ್ರೋತ್ಸಾಹಿಸುವುದು

ಪ್ರಥಮ ಜಾಗತಿಕ ಯುದ್ಧದ ನಂತರ ಇಟಲಿ ಮತ್ತು ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದ ಸ್ವೇಚ್ಛಾಧಿಪತ್ಯ ಚಳುವಳಿಯ ಕುರಿತು ಪರಿಚಯಿಸಿಕೊಳ್ಳೋಣ.

| ಇಟಲಿ | ಜರ್ಮನಿ |
|---|---|
| • ಇಟಲಿಯಲ್ಲಿ 'ಫ್ಯಾಸಿಸಂ' (Fascism) ಎಂದು ಕರೆಯಲ್ಪಡುತ್ತದೆ.<br>• ಸ್ಥಾಪಕ – ಬೆನಿಟ್ಟೋ ಮುಸ್ಸೋಲಿನಿ<br>• 1922 ರಲ್ಲಿ ಅಧಿಕಾರವನ್ನು ವಶಪಡಿಸಿಕೊಳ್ಳುವುದಾಗಿ ಹೆದರಿಸಿ ರಾಜಧಾನಿಯಾದ ರೋಮಿಗೆ ಮೆರವಣಿಗೆಯನ್ನು ಆಯೋಜಿಸಿದನು.<br>• ಮೆರವಣಿಗೆಯ ನಂತರ ಅಧಿಕಾರಕ್ಕೆ ಬಂದನು.<br>• 'ಕಪ್ಪಂಗಿಗಳು' (Blackshirts) ಎಂಬ ಸಶಸ್ತ್ರ ಪಡೆಯನ್ನು ರೂಪಿಸಿದನು.<br>• ಫ್ಯಾಸಿಸ್ಟೇತರ ಪಕ್ಷಗಳನ್ನು ನಿಷೇಧಿಸಿದನು.<br>• ಸಮಾಜವಾದಿಗಳು, ಕಾರ್ಮಿಕರು, ಕೃಷಿಕ ಸಂಘಟನೆಗಳೊಂದಿಗೆ ಶತ್ರುತ್ವ.<br><br>ಬೆನಿಟೋ ಮುಸ್ಸೋಲಿನಿ | • ಜರ್ಮನಿಯಲ್ಲಿ ನಾಝಿಸಂ (Nazism) ಎಂದು ಕರೆಯಲ್ಪಡುತ್ತದೆ.<br>• ಸ್ಥಾಪಕ – ಅಡೋಲ್ಫ್ ಹಿಟ್ಲರ್<br>• 1923 ರಲ್ಲಿ ಅಧಿಕಾರವನ್ನು ವಶಪಡಿಸಿಕೊಳ್ಳಲು ಬರ್ಲಿನ್‌ಗೆ ಮೆರವಣಿಗೆಯನ್ನು ಆಯೋಜಿಸಿದ ನಂತರ ಸೆರೆಮನೆಗೆ ತಳ್ಳಲ್ಪಟ್ಟನು.<br>• ಚುನಾವಣೆಯ ಮೂಲಕ ಅಧಿಕಾರಕ್ಕೆ ಬರುವ ಪ್ರಯತ್ನವನ್ನು ಆರಂಭಿಸಿದನು.<br>• 'ಕಂದು ಅಂಗಿಗಳು' (Brownshirts) ಎಂಬ ಸೈನ್ಯವನ್ನು ರೂಪಿಸಿದನು.<br>• 1933 ರ ಚುನಾವಣೆಯಲ್ಲಿ ಬಹುಮತವನ್ನು ಗಳಿಸಲು ವಿಫಲವಾದರೂ ಕುತಂತ್ರದ ಮೂಲಕ ಅಧಿಕಾರಕ್ಕೆ ಬಂದನು.<br>• ಕಮ್ಯುನಿಸ್ಟರು, ಸಮಾಜವಾದಿಗಳು, ಪ್ರಜಾಪ್ರಭುತ್ವವಾದಿಗಳು, ಯಹೂದಿಯರು ಮುಂತಾದವರನ್ನು ವಧಿಸಲಿರುವ ಧೋರಣೆಗಳನ್ನು ಜಾರಿಗೊಳಿಸಿದನು.<br>• 'ಗಸ್ಟಾಪೊ' ಎಂಬ ರಹಸ್ಯ ಪೋಲೀಸ್ ವ್ಯವಸ್ಥೆಯನ್ನು ಉಪಯೋಗಿಸಿ ಮಾಹಿತಿಗಳನ್ನು ಸಂಗ್ರಹಿಸಿದನು.<br>• ಹಿಟ್ಲರನ ಆಕ್ರಮಣ ಸರಣಿಗಳು ಎರಡನೇ ಮಹಾಯುದ್ಧಕ್ಕೆ ಕಾರಣವಾಯಿತು.<br><br>ಅಡೋಲ್ಫ್ ಹಿಟ್ಲರ್ |

ಸ್ವೇಚ್ಛಾಧಿಪತ್ಯವು ಪೌರರ ಸ್ವಾತಂತ್ರ್ಯದ ಹಕ್ಕುಗಳಿಗೆ ಮತ್ತು ವಿಶ್ವಶಾಂತಿಗೆ ಹೇಗೆ ಬೆದರಿಕೆಯಾದವು. ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ಮರಳಿ ಯುದ್ಧಕ್ಕೆ

*ಪ್ರೀತಿಯ ಅಮ್ಮ,*

*ನಾನು ತಿಳಿದಿರುವ ಎಲ್ಲರ ಪೈಕಿ - ನನ್ನ ಭಾವನೆಗಳು ಅತಿ ಹೆಚ್ಚು ತಲಪುವುದು ಅಮ್ಮನ ಕಡೆಗೆ ಆಗಿದೆ ಎಂದು ನನಗೆ ತಿಳಿದಿರುವುದರಿಂದ ಅವುಗಳನ್ನು ನಾನು ಅಮ್ಮನೊಂದಿಗೆ ಮಾತ್ರವೇ ಹಂಚಿಕೊಳ್ಳುತ್ತೇನೆ.*

*ನನ್ನ ವಿಧಿಯನ್ನು ನಾನೇ ಆಯ್ಕೆ ಮಾಡಿಕೊಂಡಿರುವೆನು. ಆದುದರಿಂದ ನನ್ನ ಸಾವಿಗೆ ಯಾರನ್ನೂ ಹೊಣೆಗಾರರನ್ನಾಗಿಸದಿರಿ. ಅಮ್ಮನಿಗೆ ಏನು ಬರೆಯಲಿ ಎಂದು ನನಗೆ ತಿಳಿದಿಲ್ಲ. ಕಾರಣವೇನೆಂದರೆ ನನಗೆ ಸರಿಯಾಗಿ ಚಿಂತಿಸಲು ಸಾಧ್ಯವಾದರೂ ಸೂಕ್ತವಾದ ಪದಗಳು ಸಿಗುತ್ತಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ನನ್ನ ಭಾಗವಹಿಸುವಿಕೆಯನ್ನು ನಾನೇ ಸ್ವತಃ ಆಯ್ಕೆ ಮಾಡಿಕೊಂಡಿರುವುದಾಗಿದೆ. ನಮ್ಮ ವಿಜಯವು ಸಮೀಪಿಸುತ್ತಿದೆ. ಆದರೆ ನಾನು ಮರಣಹೊಂದುತ್ತಿದ್ದೇನೆ.*

*ಸ್ಪಾರ್ಟಕೋ ಫೋಂಡನೋಟ್*

*The Age of Extremes The Short Twentieth Century 1914-1991, Eric Hobsbawm*

(ಸ್ವತಂತ್ರಾನುವಾದ)

ಇದು ಫ್ರೆಂಚ್ ಲಿಬರೇಶನ್ ಆರ್ಮಿಯಲ್ಲಿ ಇಟಾಲಿಯನ್ ಸ್ವಯಂಸೇವಕ ಸೈನಿಕನಾಗಿದ್ದ ಸ್ಪಾರ್ಟಕೋ ಫೋಂಡನೋಟ್ ಸಾಯುವ ಮೊದಲು ತನ್ನ ತಾಯಿಗೆ ಬರೆದ ಪತ್ರವಾಗಿದೆ. ಎರಡನೇ ಜಾಗತಿಕ ಯುದ್ಧದಲ್ಲಿ ಅವನು ತನ್ನ ಪ್ರಾಣವನ್ನು ಕಳೆದುಕೊಂಡನು. 1939 ರಿಂದ 1945ರ ವರೆಗೆ ನಡೆದ ಈ ಯುದ್ಧದ ಹಿನ್ನೆಲೆಯನ್ನು ಪರಿಶೀಲಿಸೋಣ.

## ವರ್ಸಾಯಿ ಒಪ್ಪಂದ

ಒಂದನೇ ಜಾಗತಿಕ ಯುದ್ಧದ ನಂತರ ಜರ್ಮನಿಯು ಮಿತ್ರರಾಷ್ಟ್ರಗಳೊಂದಿಗೆ ಸಹಿ ಹಾಕಿದ ಶಾಂತಿ ಒಪ್ಪಂದವನ್ನು ವರ್ಸಾಯಿ ಒಪ್ಪಂದ ಎನ್ನುತ್ತಾರೆ. ಅದರ ನಿಬಂಧನೆಗಳು ಎರಡನೇ ಜಾಗತಿಕ ಯುದ್ಧಕ್ಕೆ ಕಾರಣವಾದವು. ಈ ಒಪ್ಪಂದದ ಪ್ರಕಾರ ಜರ್ಮನಿಗೆ ವಸಾಹತುಗಳು ಮತ್ತು ತಮ್ಮ ನಿಯಂತ್ರಣದಲ್ಲಿದ್ದ ಪ್ರದೇಶಗಳು ನಷ್ಟವಾದವು. ಜರ್ಮನಿಯನ್ನು ನಿಶ್ಶಸ್ತ್ರೀಕರಣಗೊಳಿಸಿದುದು ಮಾತ್ರ ವಲ್ಲದೆ ಜರ್ಮನಿಯ ಮೇಲೆ ದೊಡ್ಡ ಪ್ರಮಾಣದಲ್ಲಿ ಯುದ್ಧದ ದಂಡವನ್ನು ಹೊರಿಸಲಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಎರಡನೇ ಜಾಗತಿಕ ಯುದ್ಧವು ವರ್ಸಾಯಿ ಒಪ್ಪಂದ ಮತ್ತು ಅದರ ರೂವಾರಿಗಳ ವಿರುದ್ಧ ಜರ್ಮನಿಯು ನಡೆಸಿದ ದಂಗೆಯಾಗಿತ್ತು.



ಡೇವಿಡ್ ಲೋಯ್ಡ್ ಜಾರ್ಜ್ (ಇಂಗ್ಲೆಂಡ್) ಜೋರ್ಜ್ ಕ್ಲೆಮೆನ್ಸೊ (ಫ್ರಾನ್ಸ್) ವೂಡ್ರೋವಿಲ್ಸನ್ (ಅಮೇರಿಕಾ) ವರ್ಸಾಯಿ ಒಪ್ಪಂದದ ರೂವಾರಿಗಳು

### ಜನಾಂಗ ಸಂಘದ ಪರಾಜಯ

ಪ್ರಥಮ ಜಾಗತಿಕ ಯುದ್ಧದ ನಂತರ ರೂಪುಗೊಂಡ ಜನಾಂಗ ಸಂಘಕ್ಕೆ ರಾಷ್ಟ್ರಗಳ ನಡುವಿನ ವಿವಾದಗಳು ಮತ್ತು ಸಂಘರ್ಷಗಳನ್ನು ಪರಿಹರಿಸಲು ಅಥವಾ ಅಂತಾರಾಷ್ಟ್ರೀಯ ನಿಶ್ಯಸ್ತ್ರೀಕರಣವನ್ನು ಜಾರಿಗೊಳಿಸಲು ಸಾಧ್ಯವಾಗಲಿಲ್ಲ. ಜಪಾನ್, ಇಟಲಿ ಮತ್ತು ಜರ್ಮನಿಗಳು ವಿವಿಧ ದೇಶಗಳನ್ನು ಆಕ್ರಮಿಸಿದಾಗ ಅದನ್ನು ನಿಯಂತ್ರಿಸಲು ಜನಾಂಗ ಸಂಘವು ವಿಫಲವಾಯಿತು.

### ಸೈನಿಕ ಶಕ್ತಿಗಳ ರೂಪೀಕರಣ

ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಡುವಿನ ತೀವ್ರ ಸ್ಪರ್ಧೆಯು ಕೆಳಗೆ ಕೊಡಲಾದ ಸೈನಿಕ ಒಪ್ಪಂದಗಳ ರೂಪೀಕರಣಕ್ಕೆ ದಾರಿಮಾಡಿಕೊಟ್ಟಿತು.

**ಅಕ್ಷಶಕ್ತಿಗಳು (Axis Powers)**
- ಇಟಲಿ
- ಜರ್ಮನಿ
- ಜಪಾನ್

**ಮಿತ್ರಶಕ್ತಿಗಳು (Allied Powers)**
- ಇಂಗ್ಲೆಂಡ್
- ಚೈನಾ
- ಫ್ರಾನ್ಸ್

### ಮ್ಯೂನಿಚ್ ಒಪ್ಪಂದ (Munich Agreement)

ಜೆಕೊಸ್ಲಾವಾಕಿಯಾದ ದೊಡ್ಡ ಕೈಗಾರಿಕಾ ಕೇಂದ್ರ ಪ್ರದೇಶವಾದ ಸುಡಟ್ಟನ್ ಲೇಂಡಿನ ಮೇಲೆ ಹಿಟ್ಲರನು ಹಕ್ಕು ಮಂಡಿಸಿದನು. ಒಂದು ದೊಡ್ಡ ವಿಭಾಗ ಜರ್ಮನ್ ಜನತೆಯು ಇಲ್ಲಿ ವಾಸಿಸುತ್ತಿದ್ದಾರೆ ಎಂಬುದು ಹಿಟ್ಲರ್ ನ ಈ ವಾದಕ್ಕೆ ಆಧಾರವಾಗಿತ್ತು. ಹಿಟ್ಲರನ ಈ ವಾದವನ್ನು ವಿರೋಧಿಸುವ ಬದಲು, ಫ್ರಾನ್ಸ್ ಮತ್ತು ಬ್ರಿಟನ್ 1938 ರಲ್ಲಿ ಜರ್ಮನಿಯ ಮ್ಯೂನಿಚ್‌ನಲ್ಲಿ ಸಹಿ ಹಾಕಿದ ಒಪ್ಪಂದದ ಪ್ರಕಾರ ಸುಡಟ್ಟನ್ ಲೇಂಡನ್ನು ಜರ್ಮನಿಗೆ ಬಿಟ್ಟುಕೊಟ್ಟವು. ಈ ಒಪ್ಪಂದವು ಮ್ಯೂನಿಚ್ ಒಪ್ಪಂದವಾಗಿದೆ. ಆದರೆ ಈ ಒಪ್ಪಂದವನ್ನು ಜೆಕೊಸ್ಲಾವಾಕಿಯಾವು ಅಂಗೀಕರಿಸಲಿಲ್ಲ. ಅವರನ್ನು ಬೆಂಬಲಿಸಿದ ಸೋವಿಯತ್ ಯೂನಿಯನನ್ನು ಮಾತುಕತೆಗೆ ಆಹ್ವಾನಿಸಿರಲೂ ಇಲ್ಲ.



ಮ್ಯೂನಿಚ್ ಒಪ್ಪಂದಕ್ಕೆ ಸಹಿ ಹಾಕಿದ ನಂತರ, ಇಂಗ್ಲೆಂಡಿಗೆ ಮರಳಿದ ಪ್ರಧಾನಮಂತ್ರಿ ನೆವಿಲ್ಲೆ ಚೆಂಬರ್ಲೇನ್ 'ನಮ್ಮ ಕಾಲಘಟ್ಟದ ಶಾಂತಿ' ಎಂದು ಒಪ್ಪಂದವನ್ನು ಶ್ಲಾಘಿಸಿಕೊಂಡು ಜನರನ್ನುದ್ದೇಶಿಸಿ ಮಾತನಾಡುವ ಚಿತ್ರ

ಅನಂತರ ಅಮೇರಿಕಾ ಮತ್ತು ಸೋವಿಯತ್ ಯೂನಿಯನ್ ಗಳು ಮಿತ್ರಶಕ್ತಿ ಒಕ್ಕೂಟದೊಂದಿಗೆ ಸೇರಿಕೊಂಡವು.

### ತುಷ್ಟೀಕರಣ ನೀತಿ (Policy of Appeasement)

ರಷ್ಯಾದ ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದ ಸೋವಿಯತ್ ಯೂನಿಯನ್ ಪ್ರಪಂಚದಾದ್ಯಂತ ಸಮಾಜವಾದಿ ಆಶಯಗಳನ್ನು ಹರಡಿತು. ಇದು ಪಾಶ್ಚಾತ್ಯ ಬಂಡವಾಳಶಾಹಿ ರಾಷ್ಟ್ರಗಳಿಗೆ ಭಯವನ್ನುಂಟುಮಾಡಿತು. ತತ್ಪರಿಣಾಮವಾಗಿ ಅವರು ಸೋವಿಯತ್ ಯೂನಿಯನನ್ನು ತಮ್ಮ ಮುಖ್ಯ ಶತ್ರುವಾಗಿ ಕಂಡರು. ಅವರು ಫ್ಯಾಸಿಸ್ಟ್ ಆಕ್ರಮಣವನ್ನು ಸಮಾಜವಾದಿ ಆಶಯಗಳ ಹರಡುವಿಕೆಯನ್ನು ನಿಯಂತ್ರಿಸಲಿರುವ ಮಾರ್ಗವಾಗಿ ಮನಗಂಡರು. ಮ್ಯೂನಿಚ್ ಒಪ್ಪಂದವು ಪಾಶ್ಚಾತ್ಯ ತುಷ್ಟೀಕರಣಕ್ಕೆ ಪ್ರಮುಖ ಉದಾಹರಣೆಯಾಗಿದೆ. ಈ ತುಷ್ಟೀಕರಣ ನೀತಿಗಳು ಹಿಟ್ಲರನ ಆತ್ಮವಿಶ್ವಾಸವನ್ನು ಹೆಚ್ಚಿಸಿತು ಮಾತ್ರವಲ್ಲ ಅವನು ಆಕ್ರಮಣಗಳನ್ನು ನಿರ್ಭೀತಿಯಿಂದ ಮುಂದುವರಿಸಿದನು. 1939 ಸೆಪ್ಟೆಂಬರ್ 1 ರಂದು ಜರ್ಮನಿಯು ಪೋಲೆಂಡನ್ನು ಆಕ್ರಮಿಸುವುದರೊಂದಿಗೆ ಎರಡನೇ ಜಾಗತಿಕ ಯುದ್ಧವು ಆರಂಭಗೊಂಡಿತು.

ಯುದ್ಧದ ಪರಿಣಾಮಗಳನ್ನು ನಾವು ಪರಿಚಯಿಸೋಣ.

- ದಶಲಕ್ಷದಷ್ಟು ಜನರು ಮೃತಪಟ್ಟರು.
- ಪ್ರಪಂಚದಾದ್ಯಂತ ಆಹಾರದ ಕೊರತೆ ಮತ್ತು ಸಾಂಕ್ರಾಮಿಕ ರೋಗಗಳು ಹರಡಿತು.
- ಯುರೋಪಿನ ಆರ್ಥಿಕ ವ್ಯವಸ್ಥೆಯು ಕುಸಿಯಿತು.
- ವಸಾಹತುಶಾಹಿತ್ವ ಮತ್ತು ಸಾಮ್ರಾಜ್ಯಶಾಹಿತ್ವಕ್ಕೆ ಹಿನ್ನಡೆಯಾಯಿತು.
- ಯುರೋಪಿನ ಸಾರ್ವಭೌಮತ್ವವು ನಾಶವಾಯಿತು.
- ವಿಶ್ವಸಂಸ್ಥೆಯನ್ನು (United Nations Organisation) ರೂಪೀಕರಿಸಲಾಯಿತು.
- ಇಟೆಲಿ ಮತ್ತು ಜರ್ಮನಿಗಳಲ್ಲಿ ಸ್ವೇಚ್ಛಾಧಿಪತ್ಯ ಆಡಳಿತವು ನಾಶವಾಯಿತು.
- ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯವನ್ನು ಪಡೆದವು.
- ಅಮೇರಿಕ ಮತ್ತು ಸೋವಿಯತ್ ಯೂನಿಯನ್ ಪ್ರಬಲ ಜಾಗತಿಕ ಶಕ್ತಿಗಳಾಗಿ ಹೊರಹೊಮ್ಮಿದವು.

### ಸಂಯುಕ್ತ ರಾಷ್ಟ್ರ ಸಂಘ
**(United Nations Organisation)**

ಎರಡನೇ ಜಾಗತಿಕ ಯುದ್ಧಾನಂತರ, ಪ್ರಪಂಚದಲ್ಲಿ ಶಾಂತಿ, ಸಮಾಧಾನ, ಸುರಕ್ಷೆಯನ್ನು ಖಾತರಿಪಡಿಸುವ ಉದ್ದೇಶದಿಂದ ರೂಪುಗೊಂಡ ಅಂತಾರಾಷ್ಟ್ರೀಯ ಸಂಘಟನೆಯೇ ಸಂಯುಕ್ತರಾಷ್ಟ್ರ ಸಂಘ. ಇದು 1945 ಅಕ್ಟೋಬರ್ 24 ರಂದು ಅಸ್ತಿತ್ವಕ್ಕೆ ಬಂತು.

ಎರಡೂ ಜಾಗತಿಕ ಯುದ್ಧಗಳ ಕಾರಣ ಮತ್ತು ಪರಿಣಾಮಗಳನ್ನು ಪರಸ್ಪರ ಹೋಲಿಸಿ ಟಿಪ್ಪಣಿ ತಯಾರಿಸಿರಿ.

## ಯುದ್ಧಾನಂತರದ ಜಗತ್ತು

ಆರ್ಥಿಕ ಹಿತಾಸಕ್ತಿಯು ಯುರೋಪಿನ ಶಕ್ತಿಗಳ ಸಾಮ್ರಾಜ್ಯಶಾಹಿತ್ವದ ಪೈಪೋಟಿಗೂ ಎರಡು ಜಾಗತಿಕ ಯುದ್ಧಗಳಿಗೂ ಕಾರಣವಾಯಿತೆಂದು ನೀವು ತಿಳಿದಿರಲ್ಲವೆ. ಎರಡನೆ ಮಹಾಯುದ್ಧದ ಅಂತ್ಯದ ವೇಳೆಗೆ ಈ ತನಕ ಪರಸ್ಪರ ಹೋರಾಡುತ್ತಿದ್ದ ಯುರೋಪಿಯನ್ ಶಕ್ತಿಗಳು ಅಪ್ರಸ್ತುತವಾದವು. ಅಮೇರಿಕಾ ಸಂಯುಕ್ತ ರಾಷ್ಟ್ರಗಳು ಮತ್ತು ಸೋವಿಯತ್ ಯೂನಿಯನ್ ತದ್ವಿರುದ್ಧ ಆರ್ಥಿಕ ನೀತಿಗಳನ್ನು ಅನುಸರಿಸಿದವು. ಅಮೇರಿಕವು ಬಂಡವಾಳಶಾಹಿ ಆರ್ಥಿಕ ನೀತಿಯನ್ನು ಮತ್ತು ಸೋವಿಯತ್ ಯೂನಿಯನ್ ಸಮಾಜವಾದಿ ಆರ್ಥಿಕ ನೀತಿಯನ್ನು ಸ್ವೀಕರಿಸಿದವು. ಪರಸ್ಪರ ಶತ್ರುತ್ವವನ್ನು ಬೆಳೆಸಿದ ಎರಡೂ ರಾಷ್ಟ್ರಗಳು ತಮ್ಮ ಆಶಯಗಳನ್ನು ಜಗತ್ತಿನಾದ್ಯಂತ ಪ್ರಚಾರ ಮಾಡಲು ಪ್ರಯತ್ನಿಸಿದವು. ಇವರ ನಡುವಿನ ಈ ಶೀತಲ ಸಮರವು ಅರ್ಧ ಶತಮಾನಗಳ ಕಾಲ ಮುಂದುವರಿಯಿತು. 1991 ರಲ್ಲಿ ಸೋವಿಯತ್ ಯೂನಿಯನಿನ ಪತನದೊಂದಿಗೆ ಶೀತಲ ಸಮರವು ಕೊನೆಗೊಂಡಿತು.

### ಶೀತಲ ಸಮರ (Cold War)

ಶೀತಲ ಸಮರವು ಎರಡನೇ ಜಾಗತಿಕ ಯುದ್ಧದ ನಂತರ ಅಮೇರಿಕಾ ನೇತೃತ್ವದ ಬಂಡವಾಳಶಾಹಿ ದೇಶಗಳು ಮತ್ತು ಸೋವಿಯತ್ ಯೂನಿಯನ್ ನೇತೃತ್ವದ ಸಮಾಜವಾದಿ ದೇಶಗಳ ನಡುವಿನ ಆಶಯಪರವಾದ ಘರ್ಷಣೆಯಾಗಿದೆ. ಇದು ಪ್ರತ್ಯಕ್ಷ ಯುದ್ಧ ಅಥವಾ ಶಾಂತಿಯ ಕಾಲವಾಗಿರಲಿಲ್ಲ. ಈ ಎರಡೂ ಬಣಗಳಲ್ಲಿ ಸೇರದ ರಾಷ್ಟ್ರಗಳ ಒಕ್ಕೂಟವೇ ಅಲಿಪ್ತ ಚಳುವಳಿ.

ಎರಡನೇ ಜಾಗತಿಕ ಯುದ್ಧದ ನಂತರ ಏಷ್ಯಾ ಹಾಗೂ ಆಫ್ರಿಕಾದಲ್ಲಿನ ವಸಾಹತುಗಳು ಸ್ವಾತಂತ್ರ್ಯ ಹೊಂದಿದುದರ ಕುರಿತು ಈ ಮೊದಲೇ ಸೂಚಿಸಲಾಗಿದೆಯಲ್ಲವೆ. ಇದರೊಂದಿಗೆ ಬಂಡವಾಳಶಾಹಿ ಆಶಯ ಗಳನ್ನು ಅಳವಡಿಸಿದ ಅಮೇರಿಕವು ಸಂಪತ್ತು ಗಳಿಸುವ ಉದ್ದೇಶದಿಂದ ಹೊಸ ಮಾರ್ಗವನ್ನು ಸ್ವೀಕರಿಸಿತು. ಹೊಸತಾಗಿ ಸ್ವತಂತ್ರವಾದ ದೇಶಗಳಿಗೆ ಸಾಲವನ್ನು ನೀಡಿ ಪರೋಕ್ಷವಾಗಿ ಶೋಷಣೆ ಮಾಡಿತು. ಇದು ವಿಭಿನ್ನ ರೀತಿಯ ಸಾಮ್ರಾಜ್ಯ ಶಾಹಿತ್ವವಾಗಿತ್ತು. ಈ ನೀತಿಯನ್ನು ನವೀನ ಸಾಮ್ರಾಜ್ಯಶಾಹಿತ್ವ (Neo Colonisation) ಎಂದು ಕರೆಯಲಾಗುತ್ತದೆ. ಈ ಹೊಸ ವಸಾಹತುಶಾಹಿ ನೀತಿಯನ್ನು ಹಣಕಾಸು ಬಂಡವಾಳಶಾಹಿತ್ವ (Finance Capitalism) ದ ಮೂಲಕ ಜಾರಿಗೆ ತರಲಾಯಿತು.

**ಹಣಕಾಸು ಬಂಡವಾಳ ಶಾಹಿತ್ವ**

ಬ್ಯಾಂಕಿಂಗ್, ಇನ್ಶ್ಯೂರೆನ್ಸ್‌ನಂತಹ ಹಣಕಾಸು ಸಂಸ್ಥೆಗಳು ಪ್ರಮುಖ ಪಾತ್ರವಹಿಸುವ ಆರ್ಥಿಕ ವ್ಯವಸ್ಥೆಯನ್ನು ಹಣಕಾಸು ಬಂಡವಾಳಶಾಹಿತ್ವ ಎನ್ನುವರು. ಈ ಹಂತದಲ್ಲಿ ಕೈಗಾರಿಕಾ ಉತ್ಪಾದನೆ ಹಾಗೂ ಜನಕ್ಷೇಮಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಆರ್ಥಿಕ ವಿನಿಮಯಕ್ಕೆ ನೀಡಲಾಗುತ್ತದೆ. ಬ್ಯಾಂಕುಗಳು, ಶೇರು ಮಾರುಕಟ್ಟೆಗಳು, ಹೂಡಿಕಾ ಸಂಸ್ಥೆಗಳು ಈ ಆರ್ಥಿಕ ವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಉತ್ಪನ್ನಗಳೋ ತಂತ್ರಜ್ಞಾನದ ಸುಧಾರಣೆಗಳೋ ಇಲ್ಲದೆ ಅಗಾಧ ಪ್ರಮಾಣದ ಸಂಪತ್ತನ್ನು ಸಂಗ್ರಹಿಸಲು ಈ ವ್ಯವಸ್ಥೆಯು ಅವಕಾಶ ಒದಗಿಸುತ್ತದೆ.

ಸೈನ್ಯ ಮತ್ತು ಯುದ್ಧಗಳಲ್ಲದೆ ಜಗತ್ತಿನಾದ್ಯಂತ ಪ್ರಭಾವ ಬೀರಲು ಹಣಕಾಸು ಬಂಡವಾಳಶಾಹಿತ್ವವು ಬೃಹತ್ ಉದ್ದಿಮೆಗಳಿಗೆ ಅವಕಾಶವನ್ನು ಒದಗಿಸುತ್ತದೆ. ಇಂತಹ ಬೃಹತ್ ಉದ್ದಿಮೆಗಳು ವಿವಿಧ ರಾಷ್ಟ್ರಗಳಲ್ಲಿ ಬಂಡವಾಳವನ್ನು ಹೂಡಿ ಲಾಭವನ್ನು ಪಡೆಯುತ್ತವೆ.

ಹಣಕಾಸು ಬಂಡವಾಳಶಾಹಿತ್ವವು ದೊಡ್ಡ ಲಾಭವನ್ನು ಗುರಿಯಾಗಿಟ್ಟುಕೊಂಡು ಕಾರ್ಯನಿರ್ವಹಿಸುತ್ತದೆ. ಜನಸಾಮಾನ್ಯರು ಮತ್ತು ಸಾಂಪ್ರದಾಯಿಕ ವೃತ್ತಿಯಲ್ಲಿ ತೊಡಗಿರುವವರು ಇದರ ದುಷ್ಪರಿಣಾಮಗಳನ್ನು ಅನುಭವಿಸುತ್ತಿದ್ದಾರೆ. ಅವರು ಸ್ವತಂತ್ರವಾಗಿ ಬಳಸಬಹುದಾಗಿದ್ದ ಸಂಪನ್ಮೂಲಗಳು ನಷ್ಟವಾದವು ಮತ್ತು ಕೆಲವೇ ಕೆಲವು ಬಂಡವಾಳಶಾಹಿಗಳ ನಿಯಂತ್ರಣಕ್ಕೊಳಗಾದುದನ್ನು ಕಾಣಬಹುದು. ಅನಿಯಂತ್ರಿತವಾದ ಸಂಪನ್ಮೂಲಗಳ ಶೋಷಣೆಯು ಹಲವು ರೀತಿಯ ಪರಿಸರ ಸಮಸ್ಯೆಗಳನ್ನು ಉಂಟುಮಾಡುತ್ತಿದೆ.

15ನೇ ಶತಮಾನದಿಂದ 20 ನೇ ಶತಮಾನದ ವರೆಗಿನ ಕಾಲದಲ್ಲಿ ರೂಪುಗೊಂಡ ಆರ್ಥಿಕ ವ್ಯವಸ್ಥೆಯ ಕುರಿತು ನಾವು ಈ ವರೆಗೆ ಚರ್ಚಿಸಿದೆವು. ನೂತನ ತಂತ್ರಜ್ಞಾನಗಳು ಹಾಗೂ ಅದರೊಂದಿಗೆ ಸಮಾಜದಲ್ಲುಂಟಾದ ಬದಲಾವಣೆಗಳು ಈ ಆರ್ಥಿಕ ಬದಲಾವಣೆಗೆ ಕಾರಣವಾಯಿತು. ಐದು ಶತಮಾನಗಳಲ್ಲಿ ಒಡೆತನವು ಹಲವಾರು ಹಂತಗಳ ಮೂಲಕ ಅಭಿವೃದ್ಧಿ ಹೊಂದಿತು. ಇದು ಈ ಪ್ರಪಂಚದ ಇತಿಹಾಸದ ಮೇಲೆ ಎಷ್ಟು ಆಳವಾಗಿ ಪ್ರಭಾವ ಬೀರಿತು ಎಂದೂ ಕೋಟಿಗಟ್ಟಲೆ ಜನರನ್ನು ಯಾವ ಯಾವ ರೀತಿಯಲ್ಲಿ ತಲುಪಿತೆಂದೂ ಈ ಅಧ್ಯಾಯದಿಂದ ಸ್ಪಷ್ಟವಾಗುತ್ತದೆ. ಇದು ಇತಿಹಾಸದ ಹಾದಿಯನ್ನು ನಿರ್ಣಯಿಸುವುದರಲ್ಲಿ ಆರ್ಥಿಕ ಘಟಕಗಳು ಮತ್ತು ವ್ಯವಸ್ಥೆಗಳಿಗಿರುವ ಪಾತ್ರವನ್ನು ಬೊಟ್ಟು ಮಾಡುತ್ತದೆ. ಅದರೊಂದಿಗೆ ಈ ಕಾಲಘಟ್ಟವು ಬಂಡವಾಳಶಾಹಿತ್ವ ಹಿತಾಸಕ್ತಿಗಳ ಎದುರು ಮಾನವೀಯ ಮೌಲ್ಯಗಳ ಕುಸಿತಕ್ಕೂ ಸಾಕ್ಷಿಯಾಯಿತು.

## ಮುಂದುವರಿದ ಚಟುವಟಿಕೆಗಳು

- ಹದಿನೈದನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗಿನ ಜಾಗತಿಕ ಚರಿತ್ರೆಯ ಮೇಲೆ ಪ್ರಭಾವ ಬೀರಿದ ಪ್ರಮುಖ ಆರ್ಥಿಕ ನೀತಿಗಳನ್ನು ಸೂಚಿಸುವ ಡಿಜಿಟಲ್ ಪ್ರದರ್ಶನವನ್ನು ಆಯೋಜಿಸಿರಿ.
- ಕೈಗಾರಿಕಾ ಕ್ರಾಂತಿಯ ಆವಿಷ್ಕಾರಗಳಿಗೆ ಸಂಬಂಧಿಸಿದ ಉಪಕರಣಗಳನ್ನು ಮತ್ತು ವ್ಯಕ್ತಿಗಳನ್ನು ಸೇರಿಸಿಕೊಂಡು ಐ.ಸಿ.ಟಿ.ಯ ಸಹಾಯದಿಂದ ಸಮಾಜವಿಜ್ಞಾನ ಪ್ರಯೋಗಾಲಯದಲ್ಲಿ ಪ್ರದರ್ಶನವನ್ನು ಆಯೋಜಿಸಿರಿ.
- 15ನೆಯ ಶತಮಾನದಿಂದ 20ನೆಯ ಶತಮಾನದವರೆಗಿನ, ಪಾಠಭಾಗದಲ್ಲಿ ಪರಾಮರ್ಶಿಸಲಾದ ಪ್ರಮುಖ ಘಟನೆಗಳಿಗೆ ಸಂಬಂಧಿಸಿದ ರಾಷ್ಟ್ರಗಳು ಮತ್ತು ಭೂಪ್ರದೇಶಗಳು ಒಳಗೊಂಡ ಅಟ್ಲಸ್ ತಯಾರಿಸಿರಿ.
- ಗುಲಾಮಗಿರಿತನವನ್ನು ಪ್ರಮುಖ ವಿಷಯವಾಗಿ ಪ್ರಸ್ತುತಪಡಿಸಿದ ಅಂಕಲ್ ಟಾಮ್ಸ್ ಕ್ಯಾಬಿನ್ ಎಂಬ ಚಲನಚಿತ್ರವನ್ನು ಸಮಾಜವಿಜ್ಞಾನ ಪ್ರಯೋಗಾಲಯದಲ್ಲಿ ಪ್ರದರ್ಶಿಸಿರಿ ಮತ್ತು ಆಸ್ವಾದನ ಟಿಪ್ಪಣಿಯನ್ನು ತಯಾರಿಸಿರಿ.



# 5

# ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕಾಭಿಪ್ರಾಯ



**ಸಾರ್ವಜನಿಕ ಆರೋಗ್ಯ ಮಸೂದೆ ಆಯ್ಕೆ ಸಮಿತಿ; ಅಭಿಪ್ರಾಯಗಳನ್ನು ನೀಡಬಹುದು**

ಕೋಟ್ಟಯಂ: ಕೇರಳ ಸಾರ್ವಜನಿಕ ಆರೋಗ್ಯ ಮಸೂದೆಯ ವಿಧಾನ ಸಭಾ ಆಯ್ಕೆ ಸಮಿತಿಯು ಸೆಪ್ಟಂಬರ್ 24 ರಂದು ಬೆಳಿಗ್ಗೆ 10.30ಕ್ಕೆ ಕೋಟ್ಟಯಂ ಕಲಕ್ಟರೇಟ್ ಕಾನ್ಫರೆನ್ಸ್ ಹಾಲ್ ನಲ್ಲಿ ಸಭೆ ಸೇರಲಿದೆ. ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಸಾರ್ವಜನಿಕರು, ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಪ್ರತಿನಿಧಿಗಳು ಮೊದಲಾದವರಿಗೆ ಅಭಿಪ್ರಾಯಗಳನ್ನು ಮತ್ತು ಸೂಚನೆಗಳನ್ನು ನೀಡಬಹುದು. ಮಸೂದೆ ಮತ್ತು ಮಸೂದೆಯ ವ್ಯವಸ್ಥೆಗಳಿಗೆ ಸಂಬಂಧಿಸಿದ ಪ್ರಶ್ನಾವಳಿಯು www.niyamasabha.org ಎಂಬ ವೆಬ್ ಸೈಟಿನಲ್ಲಿ ಲಭ್ಯವಿದೆ. ಸೂಚನೆಗಳನ್ನು ಮತ್ತು ಅಭಿಪ್ರಾಯಗಳನ್ನು ಲಿಖಿತವಾಗಿ ಅಥವಾ legislation@niyamasabha.nic.in ಎಂಬ ಇಮೇಲ್ ವಿಳಾಸದಲ್ಲಿ ನೀಡಬಹುದು.

ಇದು ಸಾರ್ವಜನಿಕ ಆರೋಗ್ಯ ಮಸೂದೆಗೆ ಸಂಬಂಧಿಸಿ ಸಾರ್ವಜನಿಕರು, ಜನಪ್ರತಿನಿಧಿಗಳು, ವಿವಿಧ ಸಂಘಟನಾ ಪ್ರತಿನಿಧಿಗಳು ಮೊದಲಾದವರಿಂದ ಅಭಿಪ್ರಾಯಗಳು ಮತ್ತು ಸೂಚನೆಗಳನ್ನು ಸಂಗ್ರಹಿಸಲು ನೀಡಿರುವ ಪತ್ರಿಕಾ ವಾರ್ತೆಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಕಾರಗಳು ನೀತಿರೂಪೀಕರಣದ ಭಾಗವಾಗಿ ಈ ರೀತಿಯಲ್ಲಿ ಸಾರ್ವಜನಿಕ ಅಭಿಪ್ರಾಯಗಳನ್ನು ಸ್ವೀಕರಿಸುತ್ತಾರೆ.

ಚಿತ್ರವನ್ನು ಗಮನಿಸಿರಿ.




ಮೇಲೆ ನೀಡಿರುವುದು ಒಂದು ಪ್ರದೇಶದ ಜನರು ಒಟ್ಟುಸೇರುವ ಪ್ರಾದೇಶಿಕ ಸಮಿತಿಯಾದ ಗ್ರಾಮಸಭೆ / ವಾರ್ಡುಸಭೆಯ ಚಿತ್ರವಾಗಿದೆ. ಜನರನ್ನು ಬಾಧಿಸುವ ಅಭಿವೃದ್ಧಿ ಸಮಸ್ಯೆಗಳು, ತ್ಯಾಜ್ಯ ನಿರ್ವಹಣಾ ಸಮಸ್ಯೆಗಳು, ಪರಿಸರ ಮಾಲಿನ್ಯ, ಕುಡಿಯುವ ನೀರಿನ ಸಮಸ್ಯೆ ಮೊದಲಾದ ಸಮಸ್ಯೆಗಳನ್ನು ಅಲ್ಲಿ ಚರ್ಚಿಸಲಾಗುತ್ತದೆಯಲ್ಲವೇ. ಗ್ರಾಮ ಸಭೆ / ವಾರ್ಡು ಸಭೆಯಲ್ಲಿ ಒಟ್ಟು ಸೇರಿದವರ ಸಾಮಾನ್ಯ ಅಭಿಪ್ರಾಯವನ್ನು ಪರಿಗಣಿಸಿ ಇಂತಹ ಸಮಸ್ಯೆಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ.

ಶಾಲಾ ವಾರ್ಷಿಕೋತ್ಸವದ ಆಯೋಜನೆಗೆ ಸಂಬಂಧಿಸಿ ಸಂಘಟಕರು ನಿಮ್ಮ ಅಭಿಪ್ರಾಯಗಳನ್ನು ಕೇಳುತ್ತಾರಲ್ಲವೇ. ನೀವು ಹೇಗೆಲ್ಲಾ ಅಭಿಪ್ರಾಯಗಳನ್ನು ತಿಳಿಸುತ್ತೀರಿ?

- ಶಾಲಾ ಪಾರ್ಲಿಮೆಂಟಿನ ಮೂಲಕ
- ಸಂಘಟನಾ ಸಮಿತಿಯ ಸಭೆಗಳಲ್ಲಿ ಭಾಗವಹಿಸುವ ತರಗತಿ ಪ್ರತಿನಿಧಿಗಳ ಮೂಲಕ
- 

ಶಾಲಾ ಚಟುವಟಿಕೆಗಳಲ್ಲಿ ನಿಮ್ಮ ಅಭಿಪ್ರಾಯಗಳನ್ನು ತಿಳಿಸುವ ವಿವಿಧ ಮಾರ್ಗಗಳನ್ನು ದಾಖಲಿಸಿದ್ದೀರಲ್ಲವೇ.

ಪಾಠದ ಆರಂಭದಲ್ಲಿ ನೀಡಿರುವ ಪತ್ರಿಕಾ ವಾರ್ತೆಯು ಸಾರ್ವಜನಿಕ ಆರೋಗ್ಯದ ವಿಷಯಕ್ಕೆ ಸಂಬಂಧಿಸಿದ್ದಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಪಾಯವು ಜನರ ದೃಷ್ಟಿಕೋನಗಳು, ಆಸಕ್ತಿಗಳು ಮತ್ತು ಅಭಿಲಾಷೆಗಳ ಮೂಲಕ ರೂಪುಗೊಳ್ಳುತ್ತದೆ. ಸಾರ್ವಜನಿಕ ಆರೋಗ್ಯ ಎಂಬುದು ಒಟ್ಟು ಸಮಾಜದ ಮೇಲೆ ಪರಿಣಾಮ ಬೀರುವ ಪ್ರಮುಖವಾದ ಒಂದು ವಿಷಯವಾಗಿದೆ. ಈ ವಿಷಯದ ಕುರಿತು ಸಾರ್ವಜನಿಕರ ಅಭಿಪ್ರಾಯವನ್ನು ತಿಳಿಯುವ ಕೆಲಸವನ್ನು ಸರಕಾರ ಮಾಡಿದೆ. ಈ ರೀತಿಯಲ್ಲಿ ಜನರನ್ನು ಬಾಧಿಸುವ ಸಾರ್ವಜನಿಕ ಸಮಸ್ಯೆಗಳ ಕುರಿತಾದ ಜನರ ಸಾಮಾನ್ಯವಾದ ಅಭಿಪ್ರಾಯವೇ ಸಾರ್ವಜನಿಕ ಅಭಿಪ್ರಾಯವಾಗಿದೆ. ಇದು ಒಂದು ವಿಷಯದ ಬಗ್ಗೆ ಸಮಾಜದ ಜನರು ಸಾಮಾನ್ಯವಾಗಿ ಸ್ವೀಕರಿಸುವ ನಿಲುವು ಅಥವಾ ಅಭಿಪ್ರಾಯವಾಗಿರಬಹುದು.

ಸಾರ್ವಜನಿಕ ಅಭಿಪ್ರಾಯದ ಮೂಲಕ ಸಶಕ್ತರಾಗುವ ನಾಗರಿಕ ಸಮಾಜವು ಪ್ರಜಾಪ್ರಭುತ್ವವನ್ನು ಬಲಗೊಳಿಸುತ್ತದೆ. ಅವರ ಅಭಿಪ್ರಾಯಗಳಲ್ಲಿನ ಯುಕ್ತಿಚಿಂತನೆ ಮತ್ತು ವೈಜ್ಞಾನಿಕ ದೃಷ್ಟಿಕೋನವು ಸಾರ್ವಜನಿಕ ಅಭಿಪ್ರಾಯವನ್ನು ಗುಣಾತ್ಮಕಗೊಳಿಸುತ್ತದೆ. ಸಾಮಾಜಿಕ ವಿಷಯಗಳಲ್ಲಿ ಜಾಗೃತರಾಗಿರುವ ನಾಗರಿಕ ಸಮಾಜವು ಈ ಮೂಲಕ ರೂಪುಗೊಳ್ಳುತ್ತದೆ.

**ನಾಗರಿಕ ಸಮಾಜ**
**(Civil Society)**

ನಾಗರಿಕ ಸಮಾಜವೆಂಬುದು ಸಾಮಾಜಿಕ ಒಳಿತಿಗಾಗಿ ಕೆಲಸ ಮಾಡುವ ವಿವಿಧ ಸಂಘಟನೆಗಳು, ಗುಂಪುಗಳು, ವ್ಯಕ್ತಿಗಳು ಮೊದಲಾದವರನ್ನೊಳಗೊಂಡ ಪ್ರಜಾಪ್ರಭುತ್ವದಲ್ಲಿನ ಒಂದು ನಿರ್ಣಾಯಕ ಆಶಯವಾಗಿದೆ. ನಾಗರಿಕ ಸಮಾಜವು ಸರಕಾರದ ನಿಯಂತ್ರಣ ಅಥವಾ ಲಾಭದ ಉದ್ದೇಶವಿಲ್ಲದೆ ವೈವಿಧ್ಯಮಯ ಆಸಕ್ತಿಗಳು ಮತ್ತು ದೃಷ್ಟಿಕೋನಗಳೊಂದಿಗೆ ಸ್ವಯಂಪ್ರೇರಣೆಯಿಂದ ಕಾರ್ಯನಿರ್ವಹಿಸುವ ಜನರನ್ನು ಒಳಗೊಂಡಿದೆ.

ನಿಮ್ಮ ಪ್ರದೇಶದ ಸಾರಿಗೆ ಸೌಕರ್ಯಗಳು, ತ್ಯಾಜ್ಯ ನಿರ್ವಹಣೆ ಮೊದಲಾದವುಗಳಿಗೆ ಸಂಬಂಧಿಸಿ ನಿಮ್ಮ ಮತ್ತು ನಿಮ್ಮ ಸ್ನೇಹಿತರ ಅಭಿಪ್ರಾಯಗಳನ್ನು ತರಗತಿಯಲ್ಲಿ ಚರ್ಚಿಸಿ, ಸಮಾಜವಿಜ್ಞಾನ ಕ್ಲಬ್ ನಲ್ಲಿ ಮಂಡಿಸಿರಿ.

## ಸಾರ್ವಜನಿಕ ಅಭಿಪ್ರಾಯದ ವಿಶೇಷತೆಗಳು

ಸಾಮಾಜಿಕ ಜೀವನದಲ್ಲಿ, ಆಡಳಿತ ಹಂತದಲ್ಲಿ ಮತ್ತು ರಾಜಕೀಯ ಹಂತದಲ್ಲಿ ಸಾರ್ವಜನಿಕ ಅಭಿಪ್ರಾಯದ ಪ್ರಭಾವವು ಬಹಳ ಹಿರಿದಾಗಿದೆ. ಸಮಾಜದ ಕೆಲವು ಸಮಸ್ಯೆಗಳನ್ನು ಜವಾಬ್ದಾರಿಯುತ ಪೌರರು ಇತರ ನಾಗರಿಕರ ಗಮನಕ್ಕೆ ತರುವಾಗ ಸಾರ್ವಜನಿಕ ಅಭಿಪ್ರಾಯವು ರೂಪುಗೊಳ್ಳುತ್ತದೆ. ಸಾರ್ವಜನಿಕ ಅಭಿಪ್ರಾಯವು ಸರಕಾರದ ಮೇಲೆ ಜನರ ನಿಯಂತ್ರಣಕ್ಕಿರುವ ಪರಿಣಾಮಕಾರಿ ಮಾರ್ಗವಾಗಿದೆ. ಪ್ರಜಾಪ್ರಭುತ್ವವನ್ನು ಬಲಪಡಿಸುವ ಚರ್ಚೆಗಳನ್ನು ಸಾರ್ವಜನಿಕ ಅಭಿಪ್ರಾಯವು ಪ್ರೋತ್ಸಾಹಿಸುತ್ತದೆ. ಸಾರ್ವಜನಿಕ ಅಭಿಪ್ರಾಯವನ್ನು ಪ್ರಜಾಪ್ರಭುತ್ವದ ಬುನಾದಿಗಳಲ್ಲೊಂದಾಗಿ ಪರಿಗಣಿಸಲಾಗುತ್ತದೆ.

ಸಾರ್ವಜನಿಕ ಅಭಿಪ್ರಾಯದ ವಿಶೇಷತೆಗಳೇನೆಂದು ನೋಡೋಣ.

- ಸಾರ್ವಜನಿಕ ಅಭಿಪ್ರಾಯವು ವೈವಿಧ್ಯಮಯ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತದೆ.
- ಸಾರ್ವಜನಿಕ ಅಭಿಪ್ರಾಯವು ಬಹುಸಂಖ್ಯಾತ ಜನರ ದೃಷ್ಟಿಕೋನಗಳೋ ಅಭಿಪ್ರಾಯಗಳೋ ಆಗಬೇಕೆಂದಿಲ್ಲ. ಆದರೆ ಇದು ಒಂದು ವಿಷಯದ ಬಗ್ಗೆ ಸಾಮಾನ್ಯ ಒಮ್ಮತವನ್ನು ರೂಪಿಸುತ್ತದೆ.
- ಸಂದರ್ಭಗಳು, ಸಮಯ ಮತ್ತು ಹೊಸ ತಿಳುವಳಿಕೆಗಳಿಗೆ ಅನುಸಾರವಾಗಿ ಸಾರ್ವಜನಿಕಾಭಿಪ್ರಾಯವು ಬದಲಾಗಬಹುದು.
- ಸಾರ್ವಜನಿಕ ಅಭಿಪ್ರಾಯವು ಯಾವಾಗಲೂ ರಾಜಕೀಯ ವಿಷಯಗಳಿಗೆ ಸೀಮಿತವಾಗಿರದೆ, ಸಾಮಾಜಿಕ – ಆರ್ಥಿಕ – ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿಯೂ ರೂಪುಗೊಳ್ಳುತ್ತದೆ.
- ಸಾರ್ವಜನಿಕ ಅಭಿಪ್ರಾಯಗಳಿಗೆ ಭೂಮಿತಿಯನ್ನು ನಿಶ್ಚಯಿಸಲು ಸಾಧ್ಯವಿಲ್ಲ. ಯಾರಿಗೂ ಯಾವ ಪ್ರದೇಶದಿಂದಲೂ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದಾಗಿದೆ.
- ಸಾರ್ವಜನಿಕ ಅಭಿಪ್ರಾಯವು ಪ್ರಜಾಸತ್ತಾತ್ಮಕ ಸಂವಹನವನ್ನು ಖಚಿತಪಡಿಸುತ್ತದೆ.

ಡಯಾಗ್ರಾಂ ಪೂರ್ತಿಗೊಳಿಸಿ ಸಾರ್ವಜನಿಕ ಅಭಿಪ್ರಾಯದ ಪ್ರತಿಯೊಂದು ವಿಶೇಷತೆಗಳನ್ನು ತರಗತಿಯಲ್ಲಿ ಚರ್ಚಿಸಿ, ಚಾರ್ಟ್ ತಯಾರಿಸಿರಿ.



ಸಾರ್ವಜನಿಕ ಅಭಿಪ್ರಾಯವು ಸಾಮಾನ್ಯವಾದ ಒಂದು ಸಮಸ್ಯೆಯ ಕುರಿತಾದ ಜನರ ಅಭಿಪ್ರಾಯವಾಗಿದೆ ಎಂದು ನಾವು ಚರ್ಚಿಸಿದೆವಲ್ಲವೇ. ವ್ಯಕ್ತಿಗಳ ಸಾಮಾಜಿಕ – ಸಾಂಸ್ಕೃತಿಕ ಹಿನ್ನೆಲೆ, ಮನೋಭಾವ, ನಂಬಿಕೆಗಳು, ಪೂರ್ವಗ್ರಹಿಕೆಗಳು, ನಾಯಕತ್ವಗುಣ, ಶಿಕ್ಷಣ ಮೊದಲಾದವು ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಭಾವ ಬೀರುವ ಘಟಕಗಳಾಗಿವೆ.

## ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಏಜೆನ್ಸಿಗಳು

ಸಾರ್ವಜನಿಕ ಅಭಿಪ್ರಾಯ ರೂಪೀಕರಣ ಎಂಬುದು ಯಾಂತ್ರಿಕವಾದ, ನಿಖರವಾದ ಅಥವಾ ಸಂಪೂರ್ಣ ಸಮಯಬಂಧಿತವಾದ ಒಂದು ಪ್ರಕ್ರಿಯೆಯಲ್ಲ. ಯಾವಾಗ ಸಮಾಜದಲ್ಲಿ ಒಂದು ಸಾರ್ವಜನಿಕ ಸಮಸ್ಯೆ ಉದ್ಭವಿಸುವುದೋ, ಆಗ ಸಮಾಜದ ವಿವಿಧ ವಿಭಾಗಗಳು ತಮ್ಮ ಅಭಿಪ್ರಾಯಗಳನ್ನು ಮತ್ತು ದೃಷ್ಟಿಕೋನಗಳನ್ನು ಪ್ರಕಟಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಕೆಲವು ಅಭಿಪ್ರಾಯಗಳಿಗೆ ಹೆಚ್ಚಿನ ಅಂಗೀಕಾರ ಲಭಿಸಿ, ಮುಂದೆ ಅದೊಂದು ಸಾರ್ವಜನಿಕ ಅಭಿಪ್ರಾಯವಾಗಿ ಬೆಳೆಯುತ್ತದೆ. ಔಪಚಾರಿಕ ಮತ್ತು ಅನೌಪಚಾರಿಕ ಪ್ರಕ್ರಿಯೆಗಳ ಮೂಲಕ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳುತ್ತದೆ.

ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಮತ್ತು ಆ ಮೂಲಕ ಪ್ರಜಾಪ್ರಭುತ್ವವನ್ನು ಬಲಗೊಳಿಸುವಲ್ಲಿ ಕುಟುಂಬ ಮತ್ತು ಶೈಕ್ಷಣಿಕ ಸಂಸ್ಥೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಅಲ್ಲದೆ ಸಮವಯಸ್ಕರ ಗುಂಪುಗಳು, ಮಾಧ್ಯಮಗಳು, ರಾಜಕೀಯ ಪಕ್ಷಗಳು, ಸಾಮಾಜಿಕ ಸಂಸ್ಥೆಗಳು, ಸಂಘಟನೆಗಳು, ಅಭಿಪ್ರಾಯ ಸಂಗ್ರಹ, ಕಲೆ, ಸಾಹಿತ್ಯ ಮೊದಲಾದವುಗಳು ತಮ್ಮ ಪಾತ್ರಗಳನ್ನು ನಿರ್ವಹಿಸುತ್ತವೆ. ಇವೆಲ್ಲವೂ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ವಿವಿಧ ಏಜೆನ್ಸಿಗಳಾಗಿವೆ. ಪ್ರತಿಯೊಂದನ್ನೂ ನಾವು ಪರಿಶೋಧಿಸೋಣ.

### 1. ಕುಟುಂಬ (Family)

ಒಂದು ಕುಟುಂಬದ ಸಂಭಾಷಣೆಯನ್ನು ಗಮನಿಸಿರಿ.




ಹೆತ್ತವರೊಂದಿಗೆ ಇಂತಹ ಚರ್ಚೆಗಳಲ್ಲಿ ನೀವು ಭಾಗಿಗಳಾಗುತ್ತೀರಲ್ಲವೇ. ಒಂದು ಮಗುವಿನ ಸಮಾಜೀಕರಣ ಪ್ರಕ್ರಿಯೆಯು ಕುಟುಂಬದಿಂದ ಆರಂಭವಾಗುತ್ತದೆಯಲ್ಲವೇ. ಕುಟುಂಬದ ಸದಸ್ಯರ ಪರಂಪರಾಗತ ನಂಬಿಕೆಗಳು,ತಿಳುವಳಿಕೆಗಳು ಮೊದಲಾದವು

ಮಗುವಿನ ಅಭಿಪ್ರಾಯ ರೂಪೀಕರಣದ ಮೇಲೆ ಪ್ರಭಾವ ಬೀರುತ್ತವೆ. ಕುಟುಂಬದಲ್ಲಿ ನಡೆಯುವ ಚರ್ಚೆಗಳಲ್ಲಿ ಮತ್ತು ಸಂಭಾಷಣೆಗಳಲ್ಲಿ ಮಗು ಪಾಲ್ಗೊಳ್ಳುತ್ತದೆ ಅಥವಾ ಸಾಕ್ಷಿಯಾಗುತ್ತದೆ. ಇಂತಹ ಸಂಭಾಷಣೆಗಳಲ್ಲಿ ರಾಜಕೀಯ, ನಂಬಿಕೆ, ಧರ್ಮ, ಸಾಹಿತ್ಯ ಮೊದಲಾದ ವಿಷಯಗಳಿರುತ್ತವೆ. ಹೀಗೆ ವಿವಿಧ ವಿಷಯಗಳ ಕುರಿತಾದ ಮಗುವಿನ ಅಭಿಪ್ರಾಯ ರೂಪೀಕರಣದಲ್ಲಿ ಕುಟುಂಬ ಎಂಬ ಪ್ರಾಥಮಿಕ ಏಜನ್ಸಿಯು ಪ್ರಭಾವವನ್ನು ಬೀರುತ್ತದೆ.

ಸಾರ್ವಜನಿಕ ಅಭಿಪ್ರಾಯ ರೂಪೀಕರಣದ ಪ್ರಾಥಮಿಕ ಹಂತವು ಕುಟುಂಬದಿಂದ ಆರಂಭವಾಗುತ್ತದೆ. ಈ ಹೇಳಿಕೆಯನ್ನು ಅವಲೋಕಿಸಿ ಟಿಪ್ಪಣಿ ತಯಾರಿಸಿರಿ.

## 2. ಶೈಕ್ಷಣಿಕ ಸಂಸ್ಥೆಗಳು (Educational Institutions)

ಅಧ್ಯಾಪಿಕೆ ಮತ್ತು ಮಕ್ಕಳ ನಡುವಿನ ಸಂಭಾಷಣೆಯನ್ನು ಕೆಳಗೆ ನೀಡಲಾಗಿದೆ. ಇದು ಯಾವ ವಿಷಯದ ಕುರಿತಾದ ಚರ್ಚೆ ಎಂಬುದನ್ನು ಗಮನಿಸಿರಿ.




ಮಗುವಿನ ಜ್ಞಾನ ರೂಪೀಕರಣ ಮತ್ತು ವಿಕಾಸದಲ್ಲಿ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರಮುಖ ಪಾತ್ರವಿದೆ. ಹಕ್ಕುಗಳು, ಕರ್ತವ್ಯಗಳು, ವೈಜ್ಞಾನಿಕ ಪ್ರಜ್ಞೆ, ವಿಮರ್ಶಾತ್ಮಕ ಚಿಂತನೆ, ಸಂಸ್ಕೃತಿ ಮೊದಲಾದವುಗಳ ಕುರಿತಾದ ಜ್ಞಾನ ಮತ್ತು ಕೌಶಲ್ಯಗಳನ್ನು ಪ್ರಧಾನವಾಗಿ ಶೈಕ್ಷಣಿಕ ಸಂಸ್ಥೆಗಳ ಮೂಲಕ ಮಗು ಪಡೆದುಕೊಳ್ಳುತ್ತದೆ. ಶಿಕ್ಷಣ ಪ್ರಕ್ರಿಯೆಯು ಒಬ್ಬ ವ್ಯಕ್ತಿಯಲ್ಲಿ ಯಾವುದಾದರೊಂದು ವಿಷಯದ ಕುರಿತು ಸ್ವತಂತ್ರ ಮತ್ತು ತರ್ಕಬದ್ಧ ಅಭಿಪ್ರಾಯವನ್ನು ರೂಪಿಸಲು ಸಹಾಯಮಾಡುತ್ತದೆ. ಮಕ್ಕಳಲ್ಲಿ ವಿವಿಧ ವಿಷಯಗಳ ತಿಳುವಳಿಕೆಯನ್ನು ರೂಪಿಸುವಲ್ಲಿ ಶೈಕ್ಷಣಿಕ ಸಂಸ್ಥೆಗಳು ಪ್ರಧಾನ ಪಾತ್ರವಹಿಸುತ್ತವೆ. ಶಾಲಾ ಪಾರ್ಲಿಮೆಂಟ್,

ಕ್ಲಬ್ ಚಟುವಟಿಕೆಗಳು, ಕ್ರೀಡಾ – ಕಲಾ ಮೇಳಗಳು ಮೊದಲಾದ ಅನೇಕ ಶಾಲಾ ಚಟುವಟಿಕೆಗಳು ಮಕ್ಕಳಲ್ಲಿ ಪ್ರಜಾಪ್ರಭುತ್ವ ಮತ್ತು ಪೌರಪ್ರಜ್ಞೆಯನ್ನು ಬೆಳೆಸುವ ವೇದಿಕೆಗಳಾಗಿವೆ. ಇಂತಹ ಅವಕಾಶಗಳು ಮಕ್ಕಳಿಗೆ ತಮ್ಮ ಅಭಿಪ್ರಾಯ ಪ್ರಕಟಣೆಗಿರುವ ಧಾರಾಳ ಸನ್ನಿವೇಶಗಳನ್ನೊದಗಿಸುವುದರೊಂದಿಗೆ ಈ ಮೂಲಕ ಅವರು ಸಾರ್ವಜನಿಕ ಅಭಿಪ್ರಾಯ ಪ್ರಕಟಣೆಗಿರುವ ನೈಪುಣ್ಯವನ್ನು ಗಳಿಸುತ್ತಾರೆ.

ಶಾಲಾ ಗ್ರಂಥಾಲಯದ ಚಟುವಟಿಕೆಗಳನ್ನು ಹೆಚ್ಚು ಕ್ರಿಯಾಶೀಲಗೊಳಿಸಲಿರುವ ಸಲಹೆ - ಸೂಚನೆಗಳನ್ನು ತರಗತಿಯಲ್ಲಿ ಚರ್ಚಿಸಿ, ಟಿಪ್ಪಣಿ ತಯಾರಿಸಿ ಶಾಲಾ ಪಾರ್ಲಿಮೆಂಟಿನಲ್ಲಿ ಮಂಡಿಸಿರಿ.

## 3. ಸಮವಯಸ್ಕರ ಗುಂಪುಗಳು (Peer groups)

ಸ್ನೇಹಿತರ ಸಂಭಾಷಣೆಗಳನ್ನು ಗಮನಿಸಿರಿ.




ಸಮವಯಸ್ಕರ ಗುಂಪಿನೊಳಗೆ ನಡೆಯುವ ಸಂವಾದಗಳು ಮತ್ತು ಚರ್ಚೆಗಳು ಸಾರ್ವಜನಿಕ ಅಭಿಪ್ರಾಯ ರೂಪೀಕರಣದ ಮೇಲೆ ಪ್ರಭಾವ ಬೀರುವ ಪ್ರಧಾನ ಘಟಕಗಳಾಗಿವೆ. ಸಮವಯಸ್ಕರ ಗುಂಪಿನ ಸದಸ್ಯರು ವ್ಯಕ್ತಿತ್ವ, ಮನೋಭಾವ, ನಡವಳಿಕೆ ಮೊದಲಾದ ವಿಷಯಗಳಲ್ಲಿ ಬಹುತೇಕ ಸಾಮಾನ್ಯ ಸ್ವಭಾವವನ್ನು ಹೊಂದಿರುತ್ತಾರೆ. ಇವರು ತಮ್ಮ ವೈಯಕ್ತಿಕ ಅನುಭವಗಳು, ಸಾಮಾಜಿಕ ಪ್ರಭಾವ ಮೊದಲಾದವುಗಳಲ್ಲಿ ಕೆಲವು ಸಾಮಾನ್ಯ ಗುಣಲಕ್ಷಣಗಳನ್ನು ಹಂಚಿಕೊಳ್ಳುತ್ತಾರೆ. ಸರಕಾರದ ನೀತಿಗಳೊಂದಿಗಿನ ಸಮೀಪನ, ವಿವಿಧ ವಿಷಯಗಳಲ್ಲಿ ಬೆಳೆಸುವ ಮನೋಭಾವ, ರಾಜಕೀಯ ಪಕ್ಷಗಳೊಂದಿಗಿನ ಸಮೀಪನ ಮೊದಲಾದವುಗಳಲ್ಲಿ ಸಮವಯಸ್ಕರ ಗುಂಪಿನ ಸದಸ್ಯರಿಗೆ

### ಸಮವಯಸ್ಕರ ಗುಂಪುಗಳು

ಸಮಾನ ಪ್ರಾಯ, ಸಮಾನ ರೀತಿಯ ಆಸಕ್ತಿಗಳು ಮತ್ತು ಗುರಿಗಳನ್ನು ಹೊಂದಿರುವ ಗುಂಪುಗಳನ್ನು ಸಮವಯಸ್ಕರ ಗುಂಪುಗಳು ಎಂದು ಕರೆಯುತ್ತಾರೆ. ಅವರು ತಮ್ಮ ನಂಬಿಕೆ, ಮೌಲ್ಯಗಳು, ಆಶಯಗಳು ಮೊದಲಾದವುಗಳಲ್ಲಿ ಸಮಾನತೆಯನ್ನು ಹೊಂದಿರುತ್ತಾರೆ.

ಪರಸ್ಪರ ಪ್ರಭಾವ ಬೀರಲು ಸಾಧ್ಯವಿದೆ. ಆ ಮೂಲಕ ಸಾಮಾನ್ಯ ಅಭಿಪ್ರಾಯಗಳನ್ನು ರೂಪಿಸಲು, ಅಸ್ತಿತ್ವದಲ್ಲಿರುವ ಅಭಿಪ್ರಾಯಗಳನ್ನು ಬದಲಾಯಿಸಲು ಮತ್ತು ಸರಿಯಾದ ಅಭಿಪ್ರಾಯಗಳಿಗೆ ತಲುಪಲು ಸಮವಯಸ್ಕರ ಗುಂಪುಗಳೊಳಗಿನ ಚರ್ಚೆಗಳು ಸಹಾಯಕವಾಗಿವೆ. ಹೀಗೆ ಸಮವಯಸ್ಕರ ಗುಂಪುಗಳೊಳಗಿನ ಸಂವಾದಗಳು ಮತ್ತು ಚರ್ಚೆಗಳು ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕೆ ಕಾರಣವಾಗುತ್ತವೆ.

ಮಾದಕದ್ರವ್ಯ ವಿರೋಧಿ ಸಂದೇಶಗಳನ್ನು ಪಸರಿಸಲು ನಿಮ್ಮ ಶಾಲೆ ಮತ್ತು ಪರಿಸರ ಪ್ರದೇಶಗಳಲ್ಲಿ ಯಾವೆಲ್ಲಾ ಕಾರ್ಯಕ್ರಮಗಳನ್ನು ಆಯೋಜಿಸಬಹುದು? ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ಪಟ್ಟಿ ತಯಾರಿಸಿರಿ.

## 4. ಮಾಧ್ಯಮಗಳು (Media)

ಸಾರ್ವಜನಿಕ ಅಭಿಪ್ರಾಯ ರೂಪೀಕರಣದಲ್ಲಿ ಮಾಧ್ಯಮಗಳಿಗೆ ಪ್ರಮುಖ ಪಾತ್ರವಿದೆ. ಮುದ್ರಣ ಮಾಧ್ಯಮಗಳು, ರೇಡಿಯೋ ಮತ್ತು ದೂರದರ್ಶನದಂತಹ ಸಾಂಪ್ರದಾಯಿಕ ಮಾಧ್ಯಮಗಳು, ಡಿಜಿಟಲ್ ಮಾಧ್ಯಮಗಳು, ಸಾಮಾಜಿಕ ಮಾಧ್ಯಮಗಳು ಮೊದಲಾದ ನವಮಾಧ್ಯಮಗಳ ಮೂಲಕ ಲಭಿಸುವ ವಾರ್ತೆಗಳು, ಚರ್ಚೆಗಳು ಮತ್ತು ಜಾಹೀರಾತುಗಳು ಜನರ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ಒಂದು ವಿಷಯವನ್ನು ಜನರ ಗಮನಕ್ಕೆ ತರಲು ಮತ್ತು ಅಂತಹ ವಿಷಯಗಳ ಕುರಿತಾಗಿ ಸಾರ್ವಜನಿಕ ಅಭಿಪ್ರಾಯ ರೂಪಿಸಲು ಮಾಧ್ಯಮಗಳಿಗೆ ಸಾಧ್ಯವಾಗುತ್ತದೆ.

### 4.1 ವಾರ್ತಾಪತ್ರಿಕೆಗಳು (News Papers)

ಎಲ್ಲಾ ಸಾಮಾಜಿಕ–ರಾಜಕೀಯ ಘಟನೆಗಳನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ವಾರ್ತಾಪತ್ರಿಕೆಗಳಿಗೆ ಪ್ರಮುಖ ಪಾತ್ರವಿದೆ. ಸಮಕಾಲೀನ ಸಮಸ್ಯೆಗಳನ್ನು ಜನರೆಡೆಗೆ




" 'ಇಂಡಿಯನ್ ಒಪೀನಿಯನ್' ಪ್ರಾರಂಭವಾದ ತಿಂಗಳಿನೊಳಗಾಗಿಯೇ ನಾನು ವೃತ್ತ ಪತ್ರಿಕೆಗಳ ಒಂದೇ ಗುರಿ, ಸೇವೆಯಾಗಿರಬೇಕೆಂದು ಅರಿತೆ. ವೃತ್ತವತ್ರಿಕೆ ಒಂದು ದೊಡ್ಡ ಶಕ್ತಿ. ಆದರೆ ಹತೋಟಿಯಿಲ್ಲದ ನೀರಿನ ಪ್ರವಾಹ, ಹಳ್ಳಿಗಳನ್ನೆಲ್ಲಾ ಮುಳುಗಿಸಿ ಪೈರನ್ನುನಾಶಮಾಡುವಂತೆ, ಹಿಡಿತವಿಲ್ಲದ ಲೇಖನಿ ಸಹ ನಾಶಕ್ಕೆ ಸಾಧನವಾಗುತ್ತದೆ. ಹತೋಟಿ ಹೊರಗಿನದಾದರೆ ಅದರಿಂದ ಹತೋಟಿಯಿಲ್ಲದಿರುವುದಕ್ಕಿಂತ ಹೆಚ್ಚು ಅಪಾಯವಾಗುತ್ತದೆ. ಅಂಕುಶ ಒಳಗಿನಿಂದ ಬಂದಾಗ ಮಾತ್ರ ಲಾಭದಾಯಕವಾಗಬಲ್ಲುದು. ಈ ವಿಚಾರ ಸರಣಿ ಸರಿಯಾದುದಾದರೆ, ಪ್ರಪಂಚದಲ್ಲಿ ಎಷ್ಟು ಪತ್ರಿಕೆಗಳು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬಲ್ಲವು? ಆದರೆ ಅಪ್ರಯೋಜಕವಾದವುಗಳನ್ನು ನಿಲ್ಲಿಸುವವರು ಯಾರು, ಅಪ್ರಯೋಜಕವೆಂದು ತೀರ್ಮಾನಿಸುವವರು ಯಾರು? ಪ್ರಪಂಚದಲ್ಲಿ ಪ್ರಯೋಜನಕರವಾದುವೂ, ಅಪ್ರಯೋಜಕವಾದವುಗಳೂ, ಒಳ್ಳೆಯದು ಮತ್ತು ಕೆಟ್ಟದ್ದು ಇರುವಂತೆ ಒಟ್ಟಿಗೆಯೇ ಇರುತ್ತವೆ. ಇವುಗಳಲ್ಲಿ ಮನುಷ್ಯ ತನಗೆ ಬೇಕಾದುದನ್ನು ಆರಿಸಿಕೊಳ್ಳಬೇಕು."

(ಮಹಾತ್ಮ ಗಾಂಧಿ, ನನ್ನ ಸತ್ಯಾನ್ವೇಷಣೆ)

ತಲುಪಿಸುವ ಮೂಲಕ ಮತ್ತು ಜನರ ಅಭಿಪ್ರಾಯಗಳನ್ನು ಸರಕಾರಕ್ಕೆ ತಲುಪಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದೃಢಗೊಳಿಸಲು ಪತ್ರಿಕೆಗಳಿಗೆ ಸಾಧ್ಯವಿದೆ. ಹೀಗೆ ಸಾರ್ವಜನಿಕ ಅಭಿಪ್ರಾಯ ರೂಪೀಕರಣದಲ್ಲಿ ವಾರ್ತಾಪತ್ರಿಕೆಗಳಿಗೆ ಪ್ರಮುಖ ಪಾತ್ರವಿದೆ.

ಪತ್ರಿಕೆಗಳ ಪ್ರಭಾವದ ಕುರಿತಾಗಿ ಗಾಂಧೀಜಿಯವರ ಅಭಿಪ್ರಾಯವನ್ನು ಓದಿದಿರಲ್ಲವೆ? ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಮಾತ್ರವಲ್ಲ, ಅವುಗಳನ್ನು ಬದಲಾಯಿಸಲು ಮತ್ತು ಕೆಲವು ಪ್ರತ್ಯೇಕ ಹಿತಾಸಕ್ತಿಗನುಸರಿಸಿ ಅವುಗಳ ಗತಿಬದಲಾಯಿಸಲೂ ಪತ್ರಿಕಾ ವಾರ್ತೆಗಳಮೂಲಕಸಾಧ್ಯವಿದೆ. ಕೆಲವೊಮ್ಮೆಕೆಲವುಸುದ್ದಿಗಳುವಾಸ್ತವಿಕವಾಗಿರಬೇಕೆಂದಿಲ್ಲ. ಸಮಾಜದಲ್ಲಿನ ಸಾರ್ವಜನಿಕ ಅಭಿಪ್ರಾಯದ ಗತಿಬದಲಾಯಿಸಲು ಮತ್ತು ಸಮಾಜವನ್ನು ತಪ್ಪಾಗಿ ಮುನ್ನಡೆಸಲು ಕೆಲವು ಪತ್ರಿಕಾ ವಾರ್ತೆಗಳು ಕಾರಣವಾಗುತ್ತವೆ. ಕೆಲವು ನಿಕ್ಷಿಪ್ತ ಹಿತಾಸಕ್ತಿಗಳಿಗಾಗಿ ತಪ್ಪಾದ ವಾರ್ತೆಗಳನ್ನು ಆನ್‌ಲೈನ್ ಪತ್ರಿಕೆಗಳು ಮತ್ತು ಇತರ ಮೂಲಗಳ ಮೂಲಕ ಜನರಿಗೆ ತಲುಪುವುದಿದೆ. ಹಲವು ಸಂದರ್ಭಗಳಲ್ಲಿ ಮಾಧ್ಯಮಗಳು ನೀಡುವ ವಾರ್ತೆಗಳಲ್ಲಿ ನಿಷ್ಪಕ್ಷವಾದ ಧೋರಣೆ ಮತ್ತು ನಿಖರತೆಯಿರುವುದಿಲ್ಲ ಎಂಬ ಟೀಕೆಯು ಸಮಾಜದಲ್ಲಿದೆ.

ಒಂದೇ ವಿಷಯಕ್ಕೆ ಸಂಬಂಧಿಸಿ ಇತ್ತೀಚೆಗಿನ ವಿವಿಧ ದಿನಪತ್ರಿಕೆಗಳಲ್ಲಿ ಬಂದ ವಾರ್ತೆಗಳನ್ನು ಸಂಗ್ರಹಿಸಿರಿ. ಅಧ್ಯಾಪಕರ ಸಹಾಯದಿಂದ ಅವುಗಳ ಪ್ರಸ್ತುತಿಯ ರೀತಿ, ಆಶಯ, ಸತ್ಯಾಸತ್ಯತೆ ಮೊದಲಾದವುಗಳನ್ನು ಪರಿಶೀಲಿಸಿ ವಿಶ್ಲೇಷಣ ಟಿಪ್ಪಣಿಯನ್ನು ತಯಾರಿಸಿರಿ.

### 4.2 ರೇಡಿಯೋ ಮತ್ತು ದೂರದರ್ಶನ (Radio & Television)

ರೇಡಿಯೋ ಮತ್ತು ದೂರದರ್ಶನಗಳು ಸಮಾಜದ ಕನ್ನಡಿಯಾಗಿ ಕಾರ್ಯನಿರ್ವಹಿಸುತ್ತವೆ. ಪತ್ರಿಕಾ ಮಾಧ್ಯಮಗಳು ಅಕ್ಷರಸ್ಥ ಸಮಾಜವನ್ನು ಮಾತ್ರ ಪರಿಗಣಿಸುವಾಗ ರೇಡಿಯೋ ಮತ್ತು ದೂರದರ್ಶನವು ಅನಕ್ಷರಸ್ಥ ಸಮಾಜದ ಚಿಂತನೆಗಳನ್ನು ಮತ್ತು ಜ್ಞಾನವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸರಕಾರದ ವಿವಿಧ ನೀತಿಗಳು ಮತ್ತು ಕಾರ್ಯಕ್ರಮಗಳ ಕುರಿತು ಜನರಿಗಿರುವ ಅಭಿಪ್ರಾಯಗಳು ಮತ್ತು ಆಲೋಚನೆಗಳ ಬಗ್ಗೆ ಸಮಾಜದಲ್ಲಿ ಆಶಯ ವಿನಿಮಯ ನಡೆಸುವಲ್ಲಿ ರೇಡಿಯೋ ಮತ್ತು ದೂರದರ್ಶನವು ವಹಿಸುವ ಪಾತ್ರ ಕಿರಿದಲ್ಲ.

### 4.3 ಸಾಮಾಜಿಕ ಮಾಧ್ಯಮಗಳು (Social Media)

ಸಮಕಾಲೀನ ಪ್ರಾಧಾನ್ಯವಿರುವ ಒಂದು ವಾರ್ತೆಗೆ ಸಂಬಂಧಿಸಿ ಜನರ ಪ್ರತಿಕ್ರಿಯೆಗಳನ್ನು ಗಮನಿಸಿದಿರಲ್ಲವೆ? ಮುಖ್ಯವಾಹಿನಿ ಮಾಧ್ಯಮಗಳಂತೆ ಯಾವುದೇ ವಿಷಯದ ಕುರಿತು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಇಂದು ಸಾಮಾಜಿಕ ಮಾಧ್ಯಮಗಳಿಗೂ ಪ್ರಮುಖ ಸ್ಥಾನವಿದೆ. ನೀವೂ ಕೂಡಾ ಹೀಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಕ್ರಿಯಿಸುವುದಿಲ್ಲವೆ?



ಕೆಳಗೆ ನೀಡಿರುವ ವಾರ್ತೆಯನ್ನು ಓದಿರಿ.




**FACT**

ಕೋಟ್ಟಯಂನ ಎಲ್ಲಾ ವಿದ್ಯಾಲಯಗಳಿಗೆ ನಾಳೆ ರಜೆ ಇಲ್ಲ; ಪ್ರಚಾರವಾಗುತ್ತಿರುವುದು ನಕಲಿ ಅಧಿಸೂಚನೆಯೆಂದು ಜಿಲ್ಲಾಧಿಕಾರಿಯವರು ತಿಳಿಸಿದ್ದಾರೆ. ಪ್ರಸ್ತುತ ದುರಂತ ನಿವಾರಣಾ ಕೇಂದ್ರಗಳಿರುವ ವಿದ್ಯಾಲಯಗಳಿಗೆ ಮಾತ್ರವೇ ನಾಳೆ (ಸೆ. 1) ರಜೆ ಘೋಷಿಸಲಾಗಿದೆಯೆಂದು ಜಿಲ್ಲಾಧಿಕಾರಿಯವರು ಸ್ಪಷ್ಟಪಡಿಸಿದರು. ಭಾರೀ ಮಳೆಯಿಂದಾಗಿ ಕೋಟ್ಟಯಂ ಜಿಲ್ಲೆಯ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ನಾಳೆ (ಸೆಪ್ಟಂಬರ್ 1) ರಜೆ ಘೋಷಿಸಲಾಗಿದೆ ಎಂದು ಪ್ರಚಾರವಾಗುತ್ತಿರುವ ಮಾಹಿತಿ ಸುಳ್ಳು ಎಂದು ಕೋಟ್ಟಯಂ ಜಿಲ್ಲಾಧಿಕಾರಿಯವರು ತಿಳಿಸಿದ್ದಾರೆ. ಮಳೆಯಿಂದಾಗಿ ಜಿಲ್ಲೆಯ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿದೆ ಎಂಬ ನಕಲಿ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಕಾರಣ ಜಿಲ್ಲಾಡಳಿತವು ಸ್ಪಷ್ಟೀಕರಣವನ್ನು ನೀಡಿದೆ.

ಮೇಲೆ ನೀಡಿರುವುದು ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಚಾರವಾದ ಒಂದು ನಕಲಿ ವಾರ್ತೆ ಮತ್ತು ಆ ವಾರ್ತೆಯ ನೈಜತೆಯ ಕುರಿತಾಗಿ ಜಿಲ್ಲಾಧಿಕಾರಿಯವರು ನೀಡಿರುವ ಸ್ಪಷ್ಟೀಕರಣವಾಗಿದೆ. ಇಂತಹ ಸುಳ್ಳು ವಾರ್ತೆಗಳು ಮತ್ತು ಸಂದೇಶಗಳು ಹರಡುವುದನ್ನು ತಡೆಯಲು ನಮಗೆ ಯಾವೆಲ್ಲಾ ಕ್ರಮಗಳನ್ನು ಸ್ವೀಕರಿಸಬಹುದು?

- ವಾರ್ತೆಗಳು ಮತ್ತು ಸಂದೇಶಗಳ ನೈಜತೆಯನ್ನು ದೃಢೀಕರಿಸಲು ಅದರ ಅಧಿಕೃತ ಮೂಲವನ್ನು ಕಂಡುಹಿಡಿಯುವುದು.
- ನಕಲಿ ವಾರ್ತೆ ಮತ್ತು ಸಂದೇಶಗಳೆಂದು ಗುರುತಿಸಿದರೆ ಅವುಗಳನ್ನು ಇತರರೊಂದಿಗೆ ಹಂಚಿಕೊಳ್ಳದಿರುವುದು.
- ಸೈಬರ್ ಸೆಲ್ ನಂತಹ ಅಧಿಕೃತ ವ್ಯವಸ್ಥೆಗಳಿಗೆ ಮಾಹಿತಿ ನೀಡುವುದು.
- 

ಆಧುನಿಕ ಕಾಲದಲ್ಲಿ ಸಮಾಜದಲ್ಲಿ ಹೆಚ್ಚಿನವರೂ ಡಿಜಿಟಲ್ ವೇದಿಕೆಗಳ ಮೂಲಕ ಆಶಯ ವಿನಿಮಯ ನಡೆಸುವವರಾಗಿದ್ದಾರೆ. ಇಂತಹ ಡಿಜಿಟಲ್ ಮಾಧ್ಯಮಗಳಲ್ಲಿನ ಮೋಸದ ಸಾಧ್ಯತೆಗಳನ್ನು ಪ್ರತಿಯೊಬ್ಬರೂ ಗುರುತಿಸುವುದು ಅನಿವಾರ್ಯವಾಗಿದೆ. ಅದಕ್ಕಾಗಿ ನಾವು ಮಾಧ್ಯಮ ಸಾಕ್ಷರತೆ (Media Literacy) ಮತ್ತು ಡಿಜಿಟಲ್ ಸಾಕ್ಷರತೆ (Digital Literacy) ಯನ್ನು ಗಳಿಸಬೇಕಾಗಿದೆ. ವಿವಿಧ ಮಾಧ್ಯಮಗಳ ಮೂಲಕ ಲಭಿಸುವ ಸಂದೇಶಗಳನ್ನು ಸರಿಯಾಗಿ ಮನನ ಮಾಡುವ, ವಿಶ್ಲೇಷಣೆ ಮಾಡುವ, ಮೌಲ್ಯಮಾಪನ ಮಾಡುವ, ಹೊಸ ವಾರ್ತೆಯನ್ನು ಸೃಷ್ಟಿಸುವ ಮತ್ತು ವಿನಿಮಯ ಮಾಡಲಿರುವ ಸಾಮರ್ಥ್ಯವನ್ನು ಮಾಧ್ಯಮ ಸಾಕ್ಷರತೆ ಎನ್ನುತ್ತಾರೆ. ಮಾಧ್ಯಮಗಳು ವಿಷಯಗಳನ್ನು ಹೇಗೆ ನಿರ್ಮಿಸುತ್ತವೆ, ಅವು

ನಮ್ಮ ತಿಳುವಳಿಕೆಯನ್ನು ಹೇಗೆ ರೂಪಿಸುತ್ತವೆ, ವಾರ್ತೆಗಳನ್ನು ಮತ್ತು ಸಂದೇಶಗಳನ್ನು ವಿಮರ್ಶಾತ್ಮಕವಾಗಿ ಹೇಗೆ ವ್ಯಾಖ್ಯಾನಿಸಬೇಕು ಎಂಬುದು ಇದರಲ್ಲಿ ಒಳಗೊಂಡಿದೆ.

ಡಿಜಿಟಲ್ ಮೂಲಗಳಿಂದ ಮಾಹಿತಿಗಳನ್ನು ಕಂಡುಹಿಡಿಯಲು, ವಿಶ್ಲೇಷಿಸಲು, ಡಿಜಿಟಲ್ ಉಪಕರಣಗಳು ಮತ್ತು ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಲಿರುವ ಸಾಮರ್ಥ್ಯವನ್ನು ಡಿಜಿಟಲ್ ಸಾಕ್ಷರತೆ ಎನ್ನುತ್ತಾರೆ. ಮೂಲಭೂತ ಕಂಪ್ಯೂಟರ್ ತಿಳುವಳಿಕೆ, ಇಂಟರ್‌ನೆಟ್‌ನ ಪರಿಣಾಮಕಾರಿಯಾದ ಬಳಕೆ, ಡಿಜಿಟಲ್ ವೇದಿಕೆಗಳೆಡೆಗೆ ಕೊಂಡೊಯ್ಯುವುದು, ಆನ್‌ಲೈನ್ ವಿಷಯಗಳನ್ನು ವಿಮರ್ಶಾತ್ಮಕ ಅವಲೋಕನ, ಸೈಬರ್ ಜ್ಞಾನ ಮೊದಲಾದವುಗಳೆಲ್ಲಾ ಇದರಲ್ಲಿ ಒಳಗೊಳ್ಳುತ್ತವೆ.

ಮಾಧ್ಯಮ ಸಾಕ್ಷರತೆಯು ವಿಷಯ ಮತ್ತು ಅದರ ವ್ಯಾಖ್ಯಾನದ ಮೇಲೆ ಗಮನ ಕೇಂದ್ರೀಕರಿಸುವಾಗ, ಡಿಜಿಟಲ್ ಸಾಕ್ಷರತೆಯು ಮುಖ್ಯವಾಗಿ ಉಪಕರಣಗಳನ್ನು ಮತ್ತು ವೇದಿಕೆಗಳನ್ನು ಪರಿಗಣಿಸುತ್ತದೆ.



'ಸಾರ್ವಜನಿಕ ಅಭಿಪ್ರಾಯ ರೂಪೀಕರಣದಲ್ಲಿ ನವಮಾಧ್ಯಮಗಳ ಪಾತ್ರ' ಎಂಬ ವಿಷಯದಲ್ಲಿ ಚರ್ಚೆಯೊಂದನ್ನು ಆಯೋಜಿಸಿ ಟಿಪ್ಪಣಿ ತಯಾರಿಸಿರಿ.

## 5. ರಾಜಕೀಯ ಪಕ್ಷಗಳು ಮತ್ತು ಅವುಗಳ ಚಟುವಟಿಕೆಗಳು
## (Political Parties and their Activities)

ರಾಜಕೀಯ ಪಕ್ಷಗಳು ಮತ್ತು ಅವುಗಳ ಕಾರ್ಯಚಟುವಟಿಕೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಜನಿಕ ಅಭಿಪ್ರಾಯದ ರೂಪೀಕರಣ ಮತ್ತು ಸಂಗ್ರಹದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಆಡಳಿತ ಪಕ್ಷಗಳು ಮತ್ತು ವಿರೋಧ ಪಕ್ಷಗಳು ಸಾರ್ವಜನಿಕ ಅಭಿಪ್ರಾಯ ರೂಪೀಕರಣದಲ್ಲಿ ಸಮಾನ ಪಾತ್ರವನ್ನು ವಹಿಸುತ್ತವೆ. ಸಾರ್ವಜನಿಕ ಸಮಸ್ಯೆಗಳ ಕುರಿತು ಚಿಂತನೆ ನಡೆಸುವ ಮೂಲಕ ಸಾರ್ವಜನಿಕರನ್ನು ರಾಜಕೀಯ ಜ್ಞಾನವುಳ್ಳವರಾಗಿ ಬದಲಾಯಿಸುವುದು ರಾಜಕೀಯ ಪಕ್ಷಗಳ ಮುಖ್ಯ ಉದ್ದೇಶವಾಗಿದೆ. ಪ್ರತಿಯೊಂದು ರಾಜಕೀಯಪಕ್ಷವೂ ಕೂಡಾ ಅವರಿಗನುಕೂಲಕರವಾದ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಪತ್ರಿಕೆಗಳು, ನಿಯತಕಾಲಿಕಗಳು, ಕರಪತ್ರಗಳು, ಪ್ರಣಾಳಿಕೆಗಳು, ಪೋಸ್ಟರುಗಳು ಇತ್ಯಾದಿಗಳನ್ನು ಪ್ರಕಟಿಸುತ್ತವೆ. ಇದರೊಂದಿಗೆ ಸಮಾವೇಶಗಳು, ಪ್ರತಿಭಟನೆಗಳು, ಮೆರವಣಿಗೆಗಳು, ಸೆಮಿನಾರ್‌ಗಳು ಇತ್ಯಾದಿಗಳನ್ನು ಕೂಡಾ ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕಾಗಿ ಆಯೋಜಿಸುತ್ತವೆ.

ಆಡಳಿತ ಪಕ್ಷಗಳು ತಮಗೆ ಅನುಕೂಲಕರವಾಗುವ ರೀತಿಯಲ್ಲಿ ಸರಕಾರದ ನೀತಿಗಳನ್ನು ಪ್ರಚಾರ ಮಾಡಲು ಪ್ರಯತ್ನಿಸುತ್ತವೆ. ಅದಕ್ಕೆ ಬೇಕಾದ ಪ್ರಚಾರ ತಂತ್ರಗಳನ್ನೂ ಸಿದ್ಧಪಡಿಸುತ್ತವೆ.

ವಿರೋಧ ಪಕ್ಷಗಳು ಆಡಳಿತದ ಲೋಪದೋಷಗಳು, ವೈಫಲ್ಯಗಳು ಮೊದಲಾದವುಗಳನ್ನು ಜನರ ಗಮನಕ್ಕೆ ತರುತ್ತವೆ. ಅವರು ಸರಕಾರಕ್ಕೆದುರಾದ ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕೆ ಸಹಾಯಮಾಡುವ ಹೋರಾಟಗಳು ಮತ್ತು ಅಭಿಯಾನಗಳನ್ನು ಕೈಗೊಳ್ಳುತ್ತಾರೆ.

ಎಲ್ಲಾ ರಾಜಕೀಯ ಪಕ್ಷಗಳೂ ಅಧಿಕಾರವನ್ನು ಪಡೆದು ತಮ್ಮ ಸ್ವಂತ ಆಶಯಗಳನ್ನು ಪ್ರಚಾರ ಮಾಡುವ ಆಸಕ್ತಿಯನ್ನು ಹೊಂದಿರುತ್ತವೆ. ಚುನಾವಣೆಯ ಸಂದರ್ಭಗಳಲ್ಲಿ ಪ್ರತಿಯೊಂದು

ರಾಜಕೀಯ ಪಕ್ಷವೂ ತಾವು ಅಧಿಕಾರಕ್ಕೆ ಬಂದರೆ ಜಾರಿಗೊಳಿಸುವ ಕಾರ್ಯಕ್ರಮಗಳನ್ನು ಪ್ರಣಾಳಿಕೆಯ ಮೂಲಕ ಪ್ರಕಟಿಸಿ, ಗರಿಷ್ಠ ಸಾರ್ವಜನಿಕ ಬೆಂಬಲವನ್ನು ಗಳಿಸಲು ಪ್ರಯತ್ನಿಸುತ್ತದೆ. ಸಮಾಜ ಮತ್ತು ಆಡಳಿತವು ಎದುರಿಸುವ ಎಲ್ಲಾ ಸಮಸ್ಯೆಗಳಲ್ಲಿ ಮಧ್ಯ ಪ್ರವೇಶಿಸಲು ಮತ್ತು ಅಭಿಪ್ರಾಯ ರೂಪಿಸಲು ರಾಜಕೀಯ ಪಕ್ಷಗಳು ಗಮನ ಹರಿಸುತ್ತವೆ. ಪ್ರತಿಯೊಂದು ರಾಜಕೀಯಪಕ್ಷವೂ ತಮ್ಮ ದೃಷ್ಟಿಕೋನಗಳನ್ನು ಮತ್ತು ಆಶಯಗಳನ್ನು ಮಂಡಿಸುವ ಮೂಲಕ ಜನರನ್ನು ತಮ್ಮ ಪರವಾಗಿ ಒಟ್ಟುಗೂಡಿಸಲು ಪ್ರಯತ್ನಿಸುತ್ತದೆ. ಆ ಮೂಲಕ ಜನರನ್ನು ಸಾರ್ವಜನಿಕ ವಿಷಯಗಳಲ್ಲಿ ಭಾಗವಹಿಸಲು ಮತ್ತು ಚುನಾವಣಾ ಪ್ರಕ್ರಿಯೆಗಳಲ್ಲಿ ಸಕ್ರಿಯರಾಗಿರಲು ಪ್ರಾಪ್ತರನ್ನಾಗಿಸುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದಷ್ಟೇ ಅಲ್ಲ, ಚುನಾವಣೆಯ ನಂತರವೂ ರಾಜಕೀಯ ಪಕ್ಷಗಳು ಸಾರ್ವಜನಿಕ ಸಮಸ್ಯೆಗಳ ಕುರಿತು ಪ್ರಚಾರ ಮಾಡುತ್ತಲೇ ಇರುತ್ತವೆ. ಚುನಾವಣಾ ಪ್ರಚಾರದ ಸಂದರ್ಭಗಳಲ್ಲಿ, ಪ್ರತಿಯೊಂದು ರಾಜಕೀಯ ಪಕ್ಷವೂ ಸಾರ್ವಜನಿಕ ಅಭಿಪ್ರಾಯವನ್ನು ತಮ್ಮ ಪಕ್ಷದ ಪರವಾಗಿ ರೂಪಿಸಲು, ತಮ್ಮದೇ ಆದ ಧೋರಣೆಗಳನ್ನು ಸ್ಪಷ್ಟಪಡಿಸಲು ಪ್ರಯತ್ನಿಸುತ್ತದೆ. ರಾಜಕೀಯ ಪಕ್ಷಗಳ ಪ್ರಚಾರ ಕಾರ್ಯಗಳು ಮಿತಿಮೀರಿದಾಗ ಚುನಾವಣಾ ಆಯೋಗವು ಮಧ್ಯಪ್ರವೇಶಿಸಿ ನಿಯಂತ್ರಿಸುವುದು ಸಾಮಾನ್ಯವಾಗಿದೆ.

ಕೆಳಗೆ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿ, ತರಗತಿಯಲ್ಲಿ ಚರ್ಚಿಸಿ, 'ಸಾರ್ವಜನಿಕ ಅಭಿಪ್ರಾಯ ರೂಪೀಕರಣದಲ್ಲಿ ರಾಜಕೀಯ ಪಕ್ಷಗಳ ಪಾತ್ರ' ಎಂಬ ವಿಷಯದಲ್ಲಿ ಒಂದು ಭಾಷಣವನ್ನು ತಯಾರಿಸಿರಿ.

**ಸಾರ್ವಜನಿಕ ಅಭಿಪ್ರಾಯ ರೂಪಿಸಲು ರಾಜಕೀಯ ಪಕ್ಷಗಳು ಸ್ವೀಕರಿಸುವ ವಿವಿಧ ಮಾರ್ಗಗಳು**

- ಪ್ರತಿಭಟನೆಗಳು
- 
- 
- 

## 6. ಸಾಮಾಜಿಕ ಸಂಸ್ಥೆಗಳು ಮತ್ತು ಸಂಘಟನೆಗಳು
## (Social Institutions and Organisations)

ಸಮಾಜದಲ್ಲಿ ಕಾರ್ಯನಿರ್ವಹಿಸುವ ವಿವಿಧ ಸಂಸ್ಥೆಗಳು ಮತ್ತು ಸಾಮಾಜಿಕ ಸಂಘಟನೆಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಧಾರ್ಮಿಕ ಸಂಸ್ಥೆಗಳು, ಜಾತಿ – ಮತ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಯುವಜನ ಸಂಘಟನೆಗಳು, ಸ್ತ್ರೀಸಮಾನತೆಗಾಗಿ ಹೋರಾಡುವ ಸಂಘಟನೆಗಳು, ಕಾರ್ಮಿಕ ಸಂಘಗಳು, ಮಾನವ ಹಕ್ಕು ಸಂಘಟನೆಗಳು, ಪರಿಸರ ಸಂಘಟನೆಗಳು, ವ್ಯಾಪಾರಿ – ವ್ಯವಸಾಯಿ ಸಂಘಟನೆಗಳು ಮೊದಲಾದವುಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತವೆ.

## 7. ಅಭಿಪ್ರಾಯ ಸಂಗ್ರಹ (Opinion Poll)




ಒಂದು ವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ನಡೆಸಿದ ಅಭಿಪ್ರಾಯ ಸಂಗ್ರಹ ಮತ್ತು ಅದರ ಫಲಿತಾಂಶವನ್ನು ಮೇಲಿನ ಚಿತ್ರದಲ್ಲಿ ನೀಡಲಾಗಿದೆ.

ವಿವಿಧ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ವಿಷಯಗಳಲ್ಲಿ ಸಾರ್ವಜನಿಕ ಮನೋಭಾವ ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಲು ಅಭಿಪ್ರಾಯ ಸಂಗ್ರಹವು ಬಹಳ ಪರಿಣಾಮಕಾರಿಯಾದ ಮಾರ್ಗವಾಗಿದೆ. ಒಂದು ಜನಸಂಖ್ಯಾ ಮಾದರಿಯನ್ನು ಆಯ್ಕೆ ಮಾಡಿ ಅವರಿಂದ ವಿಷಯದ ಕುರಿತಾದ ಅಭಿಪ್ರಾಯಗಳನ್ನು ರೂಪಿಸುತ್ತಾರೆ. ಈ ಅಭಿಪ್ರಾಯಗಳ ಆಧಾರದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪೀಕರಿಸುತ್ತಾರೆ. ಅಭಿಪ್ರಾಯ ಸಂಗ್ರಹಕ್ಕಾಗಿ ಅನೇಕ ವೃತ್ತಿಪರ ಸಂಸ್ಥೆಗಳು ಕಾರ್ಯಾಚರಿಸುತ್ತಿವೆ.

## 8. ಕಲೆ ಮತ್ತು ಸಾಹಿತ್ಯ (Art and Literature)



"ದಾಹಿಸಿದೆ ಭಗಿನಿ! ಕೃಪಾರಸದಿ ಮೋಹಿಸುವ
ತಂಪು ತಣ್ಣೀರ ನೀಡೆನೆಗೆಯಲೆ ಚೆಲುವೆ"
ಎಂಬ ನುಡಿ ಕೇಳಿದಳು ವಿಭ್ರಮಂ ತಾಳಿದಳು
ಆ ಮನೋಹರಿ ಪೇಳ್ದಳೀ ಮಾತನೊಡನೆ.

"ಅಲ್ಲಲ್ಲ! ಏನು ಕಥೆಯಿದು? ಹಂತ ಕಷ್ಟವೇ !
ಅರರೆ ದಾಹನಿಮಿತ್ತ ಜಾತಿಮರವೆ?
ನೀಚನಾರಿಯ ಕಯ್ಯನೀರ ನೀವ್ ಕುಡಿಯುವುದೆ?
ನಿಮ್ಮದೋ ಖ್ಯಾತಾರ್ಯ ಕುಲವಲ್ಲವೆ?

* * * * * * * *

ಅತಿಲಜ್ಜಿತನು ಭಿಕ್ಷು ಪೇಳ್ದನೀ ಮಾತನ್ನು
"ಜಾತಿ ಕೇಳಿದೆನಿಲ್ಲ ನಾ ಸೋದರಿ,
ಕೇಳ್ದೆ ಜಲವನು ಗಂಟಲಾರಿಹುದು! ನಿನಗಿನ್ನು
ಭೀತಿ ಬೇಡೌ! ನೀರ ಸುರಿ ಸುಂದರಿ!"

ಪದ್ಯಾನುವಾದ : ಕಯ್ಯಾರ ಕಿಞ್ಞಣ್ಣ ರೈ

ಮಹಾಕವಿ ಕುಮಾರನಾಶಾನ್ ಅವರ ಚಂಡಾಲಭಿಕ್ಷುಕಿ' ಎಂಬ ಖಂಡಕಾವ್ಯದ ಕನ್ನಡಾನುವಾದದ ಕೆಲವು ಸಾಲುಗಳನ್ನು ಮೇಲೆ ನೀಡಲಾಗಿದೆ. 'ಚಂಡಾಲಭಿಕ್ಷುಕಿ'ಯು ಜಾತಿ ವ್ಯವಸ್ಥೆಯಲ್ಲಿದ್ದ ಅಸ್ಪೃಶ್ಯತೆಯಂತಹ ಅನಾಚಾರಗಳಿಗೆದುರಾಗಿ ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಬಲವಾದ ಪ್ರಭಾವ ಬೀರಿದ ಕೃತಿಯಾಗಿದೆ.

ಪ್ರತಿಯೊಂದು ಕಾಲದಲ್ಲೂ ಕಲೆ, ಸಾಹಿತ್ಯ ಮತ್ತು ಸಿನಿಮಾಗಳು ಆಯಾಯಾ ಕಾಲದ ಸಾರ್ವಜನಿಕ ಅಭಿಪ್ರಾಯ ರೂಪೀಕರಣದ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ. 'ಪಾಟ್ಟಬಾಕಿ', 'ಅಡುಕ್ಕಳೆಯಿಲ್ ನಿನ್ನ್ ಅರಂಜತ್ತೇಕ್' ಮೊದಲಾದ ಸಾಹಿತ್ಯಕೃತಿಗಳು ಒಂದು ಕಾಲದಲ್ಲಿ ಕೇರಳದ ಸಾಮಾಜಿಕ ಜೀವನವನ್ನು ಬದಲಾಯಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದವುಗಳಾಗಿವೆ. ಭಾರತದ ಸ್ವಾತಂತ್ರ್ಯ ಹೋರಾಟಗಳಿಗೆ ಪ್ರೇರಣೆಯಾದ ರವೀಂದ್ರನಾಥ ಠಾಗೋರ್, ಸುಬ್ರಹ್ಮಣ್ಯ ಭಾರತಿ, ವಳ್ಳತ್ತೋಳ್ ನಾರಾಯಣ ಮೆನೋನ್ ಮೊದಲಾದವರ ಸಾಹಿತ್ಯ ರಚನೆಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಅಸ್ತಿತ್ವದಲ್ಲಿದ್ದ ಸಾಮಾಜಿಕ ಅನಾಚಾರಗಳಿಗೆದುರಾಗಿ ಬಲವಾದ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಓಟಂತುಳ್ಳಲ್, ಚಾಕ್ಯಾರ್ ಕೂತ್ ಮೊದಲಾದ ಕಲಾರೂಪಗಳಿಗೆ ಸಾಧ್ಯವಾಗಿದೆ. ವಿವಿಧ ಕಲಾರೂಪಗಳು ಮತ್ತು ಸಾಹಿತ್ಯ ರಚನೆಗಳು ನಿಮ್ಮ ಅಭಿರುಚಿಗಳ ಮತ್ತು ಆಸಕ್ತಿಗಳ ಮೇಲೆ ಪ್ರಭಾವ ಬೀರುವುದಿಲ್ಲವೆ?

ನಿಮ್ಮ ಅಭಿಪ್ರಾಯ ರೂಪೀಕರಣದ ಮೇಲೆ ಪ್ರಭಾವ ಬೀರಿದ ಯಾವುದಾದರೂ ಕಲಾಪ್ರಕಾರದ ಕುರಿತು ಅಥವಾ ಸಾಹಿತ್ಯ ರಚನೆಯ ಕುರಿತು ಸ್ನೇಹಿತರೊಂದಿಗೆ ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ಸಾರ್ವಜನಿಕ ಅಭಿಪ್ರಾಯ ರೂಪೀಕರಣವನ್ನು ಬಾಧಿಸುವ ಘಟಕಗಳು

ಸಾರ್ವಜನಿಕ ಅಭಿಪ್ರಾಯವು ಪ್ರಬಲವಾಗಿರುವಲ್ಲಿ ಪ್ರಜಾಪ್ರಭುತ್ವವೂ ಪ್ರಬಲವಾಗುತ್ತದೆ. ಪ್ರಬಲವಾದ ಸಾರ್ವಜನಿಕ ಅಭಿಪ್ರಾಯದ ಮೂಲಕ ಪ್ರಜಾಪ್ರಭುತ್ವದ ಇತಿಮಿತಿಗಳನ್ನು ಸರಿಪಡಿಸಲು ಮತ್ತು ಸರಿಯಾದ ದಿಕ್ಕಿನೆಡೆಗೆ ಮುನ್ನಡೆಸಲು ಸಾಧ್ಯವಿದೆ. ಆದರೆ ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕೆ ತಡೆಯನ್ನುಂಟುಮಾಡುವ ಕೆಲವು ಘಟಕಗಳು ಸಮಾಜದಲ್ಲಿವೆ. ಅವು ಯಾವುವೆಂದು ಪರಿಶೀಲಿಸೋಣ.

**ಅನಕ್ಷರತೆ** - ಅನಕ್ಷರಸ್ಥರಾದ ಜನರು ಸಾರ್ವಜನಿಕ ಸಮಸ್ಯೆಗಳ ಕುರಿತಾಗಿ ಸೀಮಿತ ಜ್ಞಾನವನ್ನು ಮಾತ್ರವೇ ಹೊಂದಿರುತ್ತಾರೆ. ತರ್ಕಬದ್ಧ ಅಭಿಪ್ರಾಯಗಳನ್ನು ರೂಪಿಸಲು ಬೇಕಾದ ಸಾಮರ್ಥ್ಯವನ್ನು ಅವರು ಹೊಂದಿರಬೇಕೆಂದಿಲ್ಲ.

**ಡಿಜಿಟಲ್ ವಿಭಜನೆ** - ಡಿಜಿಟಲ್ ವಿಭಜನೆ (Digital divide) ಎಂದರೆ ಇಂಟರ್‌ನೆಟ್, ಕಂಪ್ಯೂಟರ್, ಸ್ಮಾರ್ಟ್‌ಫೋನ್ ಮೊದಲಾದ ಆಧುನಿಕ ಮಾಹಿತಿ ತಂತ್ರಜ್ಞಾನದ ಪ್ರಯೋಜನವನ್ನು ಪಡೆಯುವ ಸಾಮರ್ಥ್ಯದಲ್ಲಿ (Access) ಉಂಟಾಗುವ ಅಂತರವಾಗಿದೆ. ಇದು ಸರಿಯಾದ ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕೆ ತಡೆಯನ್ನುಂಟುಮಾಡುತ್ತದೆ.

**ಬಡತನ** - ಬಡತನವನ್ನು ಅನುಭವಿಸುವ ವಿಭಾಗಗಳು ಸಾಮಾನ್ಯವಾಗಿ ಸಾರ್ವಜನಿಕ ವಿಷಯಗಳಿಂದ ದೂರವಿರುವವರಾಗಿದ್ದಾರೆ. ಆದುದರಿಂದ ಸಾರ್ವಜನಿಕ ವಿಷಯಗಳ ಕುರಿತಾದ ಅಭಿಪ್ರಾಯ ರೂಪೀಕರಣದಲ್ಲಿ ಇವರಿಗೆ ಸರಿಯಾದ ರೀತಿಯಲ್ಲಿ ಮಧ್ಯಪ್ರವೇಶಿಸಲು ಸಾಧ್ಯವಾಗುವುದಿಲ್ಲ.

**ಅನಾರೋಗ್ಯಕರ ರಾಜಕೀಯ ಚಟುವಟಿಕೆಗಳು ಮತ್ತು ಪ್ರಜಾಪ್ರಭುತ್ವ ರಹಿತ ರಾಜಕೀಯ ಪಕ್ಷಗಳು** - ರಾಜಕೀಯ ಚಟುವಟಿಕೆಗಳಲ್ಲಿ ಪಕ್ಷಪಾತ ಧೋರಣೆ ಮತ್ತು ಜನರೆಡೆಯಲ್ಲಿನ ಧ್ರುವೀಕರಣ ಚಟುವಟಿಕೆಗಳು ಸಾರ್ವಜನಿಕ ಅಭಿಪ್ರಾಯ ರಚನೆಗೆ ತಡೆಯನ್ನುಂಟುಮಾಡುವ ಘಟಕಗಳಾಗಿವೆ.

**ಚುನಾವಣಾ ಪ್ರಚಾರ ರಂಗದಲ್ಲಿರುವ ತಪ್ಪಾದ ಪ್ರವೃತ್ತಿಗಳು** - ಚುನಾವಣೆಗಳ ಸಂದರ್ಭದಲ್ಲಿ ಮತದಾರರ ಮೇಲೆ ಪ್ರಭಾವ ಬೀರುವುದಕ್ಕಾಗಿ ನಡೆಸುವ ಅನಾರೋಗ್ಯಕರವಾದ ಪ್ರವೃತ್ತಿಗಳು ನಿಜವಾದ ಸಾರ್ವಜನಿಕ ಅಭಿಪ್ರಾಯದ ಪ್ರತಿಫಲನಕ್ಕೆ ತಡೆಯನ್ನುಂಟುಮಾಡುತ್ತವೆ.

ಇವುಗಳ ಹೊರತಾಗಿ, ಪ್ರಾದೇಶಿಕವಾದ, ಭ್ರಷ್ಟಾಚಾರ, ಇತರ ಸಾಮಾಜಿಕ – ಆರ್ಥಿಕ – ಸಾಂಸ್ಕೃತಿಕ ವಿಭಾಗೀಯ ಹಿತಾಸಕ್ತಿಗಳು ಮತ್ತು ವ್ಯಕ್ತಿ ಆರಾಧನೆಗಳೆಲ್ಲವೂ ಸರಿಯಾದ ಸಾರ್ವಜನಿಕ ಅಭಿಪ್ರಾಯಗಳನ್ನು ಹಾನಿಗೊಳಿಸುವ ಘಟಕಗಳಾಗಿವೆ.

ಕೆಳಗೆ ಕೊಟ್ಟಿರುವ ಡಯಗ್ರಾಂ ಪೂರ್ತಿಗೊಳಿಸಿ ತರಗತಿಯಲ್ಲಿ ಚರ್ಚಿಸಿರಿ. ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕೆ ತಡೆಯನ್ನುಂಟುಮಾಡುವ ಇನ್ನಷ್ಟೂ ಘಟಕಗಳನ್ನು ಕಂಡುಹಿಡಿಯಿರಿ.






ಪ್ರಜಾಪ್ರಭುತ್ವವು ಒಂದು ದೇಶದ ಎಲ್ಲಾ ಜನರ ಸಮಾನ ಭಾಗವಹಿಸುವಿಕೆಯನ್ನು ಖಾತರಿಪಡಿಸುವ ರಾಜಕೀಯ ವ್ಯವಸ್ಥೆಯಾಗಿದೆಯಲ್ಲವೆ? ಜನರ ಭಾಗವಹಿಸುವಿಕೆಯನ್ನು ಖಾತರಿಪಡಿಸುವ ವ್ಯವಸ್ಥೆಯೆಂಬ ನೆಲೆಯಲ್ಲಿ ಪ್ರಜಾಪ್ರಭುತ್ವ ಸರಕಾರಗಳು ಅವುಗಳ

ನೀತಿಗಳು, ಕಾರ್ಯಯೋಜನೆಗಳು ಇತ್ಯಾದಿಗಳನ್ನು ರೂಪಿಸುವಾಗ ಜನರ ಅಭಿಪ್ರಾಯ ಹಾಗೂ ಅಭಿಲಾಷೆಗಳನ್ನು ಪರಿಗಣಿಸುತ್ತವೆ. ಅಲ್ಲದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಡೆಯುವ ಚುನಾವಣೆಗಳಲ್ಲಿ ಪ್ರಧಾನವಾಗಿ ಜನರ ಅಭಿಪ್ರಾಯಗಳು ಪ್ರಭಾವ ಬೀರುತ್ತವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಗರಿಕ ಸಮಾಜವು ನಿರಂತರವಾಗಿ ವಿಮರ್ಶೆಗಳ ಮೂಲಕ ಆಡಳಿತಾಧಿಕಾರಿಗಳನ್ನು ಜವಾಬ್ದಾರಿ ಪ್ರಜ್ಞೆಯುಳ್ಳವರನ್ನಾಗಿಸುತ್ತದೆ. ಅಧಿಕಾರ ದುರುಪಯೋಗವನ್ನು ಪ್ರಶ್ನಿಸಲು ಮತ್ತು ಕಾನೂನಿನ ಆಡಳಿತವನ್ನು ಕ್ರಮಬದ್ಧಗೊಳಿಸಲು ಸಾರ್ವಜನಿಕ ಅಭಿಪ್ರಾಯಕ್ಕೆ ಸಾಧ್ಯವಿದೆ. ಇಂತಹ ಒಂದು ಸಮಾಜದಲ್ಲಿ ಪೌರರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಜನರು ಸಂಪೂರ್ಣ ಪ್ರಜ್ಞಾವಂತರಾಗಿರುತ್ತಾರೆ. ಸಾರ್ವಜನಿಕ ಅಭಿಪ್ರಾಯವು ಪ್ರಬಲವಾಗಿ ಬೇರೂರಿಕೊಂಡಿರುವ ಸಮಾಜದಲ್ಲಿ ಸ್ವೇಚ್ಛಾಧಿಪತ್ಯ ಮತ್ತು ಏಕಾಧಿಪತ್ಯ ಒಲವುಗಳಿಗೆ ತಡೆಯನ್ನುಂಟುಮಾಡುವ ಮೂಲಕ ಪೌರರ ಹಕ್ಕುಗಳು ಮತ್ತು ಸ್ವಾತಂತ್ರ್ಯವು ಸಂರಕ್ಷಿಸಲ್ಪಡುತ್ತದೆ. ಸಾರ್ವಜನಿಕ ಅಭಿಪ್ರಾಯಗಳು ಪ್ರಬಲವಾಗಿರುವ ಸಮಾಜಗಳಲ್ಲಿ ಪ್ರತಿಯೊಂದು ವಿಚಾರವೂ ವಿಮರ್ಶಾತ್ಮಕವಾಗಿ ಮೌಲ್ಯಮಾಪನಕ್ಕೊಳಪಡುತ್ತದೆ ಹಾಗೂ ಇದು ರಾಜಕೀಯ ಪಕ್ಷಗಳನ್ನು ಜವಾಬ್ದಾರಿ ಪ್ರಜ್ಞೆಯುಳ್ಳವುಗಳನ್ನಾಗಿಸುತ್ತದೆ. ಜನರ ಸಾಮೂಹಿಕವಾದ ಅಭಿಪ್ರಾಯವೆಂಬ ನೆಲೆಯಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಿದೆ.

‘ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸುದೃಢಗೊಳಿಸುವಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪೀಕರಣದ ಪ್ರಾಧಾನ್ಯ’ ಎಂಬ ವಿಷಯದಲ್ಲಿ ಒಂದು ಪ್ರಬಂಧವನ್ನು ತಯಾರಿಸಿರಿ.

## ಮುಂದುವರಿದ ಚಟುವಟಿಕೆಗಳು

- ಚುನಾವಣೆಗಳಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪೀಕರಣದ ಮೇಲೆ ಪ್ರಭಾವ ಬೀರುವ ಘಟಕಗಳು ಯಾವುವೆಂದು ಪರಿಶೋಧಿಸಿ ತರಗತಿಯಲ್ಲಿ ಒಂದು ಸೆಮಿನಾರ್ ಆಯೋಜಿಸಿರಿ.
  - ➢ ಸ್ಥಳೀಯ ವಿಷಯಗಳು
  - ➢ ಅಭಿವೃದ್ಧಿ
  - ➢
  - ➢
- ಮಾದಕ ವಸ್ತುಗಳ ವ್ಯಸನ, ಸೈಬರ್ ಅಪರಾಧಗಳು ಮೊದಲಾದ ಯಾವುದಾದರೂ ಸಾಮಾಜಿಕ ಸಮಸ್ಯೆಗಳಿಗೆದುರಾಗಿ ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕೆ ಸಹಾಯಕವಾಗುವ ಕಿರುನಾಟಕವೊಂದನ್ನು ರಚಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.
- ವಿ. ಟಿ. ಭಟ್ಟತಿರಿಪಾಡ್ ಅವರ ‘ಅಡುಕ್ಕಳೆಯಿಲ್ ನಿನ್ನ್ ಅರಂಜತ್ತೇಕ್’ ಎಂಬ ನಾಟಕವು ಕೇರಳದ ನವೋತ್ಥಾನಕ್ಕೆ ದೊಡ್ಡ ಕೊಡುಗೆಯನ್ನು ನೀಡಿದೆ. ಈ ಹೇಳಿಕೆಗೆ ಪ್ರತಿಕ್ರಿಯೆ ದಾಖಲಿಸಿರಿ.
- ಶಾಲೆಯಲ್ಲಿ ಸತ್ಯಜಿತ್ ರೇಯವರ ಪಥೇರ್ ಪಾಂಚಾಲಿ ಎಂಬ ಚಲನಚಿತ್ರವನ್ನು ಪ್ರದರ್ಶಿಸಿ, ಅದರ ಕಥಾವಸ್ತುವನ್ನು ಚರ್ಚಿಸಿರಿ. ಶಾಲಾ ಮ್ಯಾಗಜಿನ್‌ಗೆ ಒಂದು ಆಸ್ವಾದನ ಟಿಪ್ಪಣಿಯನ್ನು ತಯಾರಿಸಿರಿ.

# ಭಾರತದ ಸಂವಿಧಾನ

ಭಾಗ IV ಕ

## ಮೂಲಭೂತ ಕರ್ತವ್ಯಗಳು

51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು;

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು;

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು;

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು;

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು;

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು;

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ:**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000


*online **R.T.E Monitoring : www.nireekshana.org.in***